ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16 | ಸಂಚಿಕೆ 2 | ಜನವರಿ 3–9, 2022 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com




ಕರ್ನಾಟಕದ ರಾಜಕೀಯ ಪರಿಸ್ಥಿತಿ 2018-21

ಬೆಳಗಾವಿ ಅಧಿವೇಶನ



ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ನಡೆಯಲಿಲ್ಲ





ಹುಡುಗಿಯರ ವಿವಾಹದ ವಯಸ್ಸು ಏರಿಕೆ: ಎತ್ತಿಗೆ ಜ್ವರ ಎಮ್ಮೆಗೆ ಬರೆ

ಕೋಟ : ಕೊರಗರ ಸಂಭ್ರಮದ ಮೇಲೆ ಪೊಲೀಸ್ ದಾಳಿ



ಗೆಲುವಿನೊಂದಿಗೆ ಮುಕ್ತಾಯಗೊಂಡ 2021 ಹೊಸ ನಿರೀಕ್ಷೆಯೊಂದಿಗೆ 2022



ಕೃಷಿ ಕಾಯ್ದೆಗಳನ್ನು ಮತ್ತೆ ತರುವ ಕೃಷಿ ಮಂತ್ರಿಗಳ ಸವಾಲನ್ನು ಸ್ವೀಕರಿಸಲು ರೈತಾಪಿಗಳು, ಕಾರ್ಮಿಕರು ಸಿದ್ಧ-ಎಐಕೆಎಸ್

ರದ್ದುಪಡಿಸಿರುವ 3 ಕೃಷಿ ಕಾಯ್ದೆಗಳನ್ನು ಮರಳಿ ತರುವ ಆಶಯವನ್ನು ಮೋದಿ ಸರ್ಕಾರ ಹೊಂದಿದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಡಿಸೆಂಬರ್ 24ರಂದು ನಾಗ್ಪುರದಲ್ಲಿ ಹೇಳಿದ್ದಾರೆ. ಇದು ರೈತರು ಮತ್ತು ಕಾರ್ಮಿಕರು ಸೇರಿದಂತೆ ಭಾರತದ ಜನರಿಗೆ ಸವಾಲಾಗಿದೆ. ಇದು ಭಾರತೀಯ ಮತ್ತು ವಿದೇಶಿ ಎರಡೂ ಕಾರ್ಪೊರೇಟ್ ಶಕ್ತಿಗಳ ಪರವಾಗಿ ಮತ್ತು ವಿಶ್ವ ಬ್ಯಾಂಕ್-ಐಎಂಎಫ್- ಡಬ್ಲ್ಯುಟಿಒ ನ ಜಾಗತಿಕ ಸಾಮ್ರಾಜ್ಯಶಾಹಿ ತ್ರಿಮೂರ್ತಿಗಳ ಪರವಾಗಿ ಒಡ್ಡಿರುವ ಸವಾಲು. ಈ ಸವಾಲನ್ನು ಸ್ವೀಕರಿಸಲು ಭಾರತದ ರೈತಾಪಿ ಜನಗಳು ಮತ್ತು ಕಾರ್ಮಿಕ ವರ್ಗ ಸಿದ್ಧವಾಗಿದ್ದಾರೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಹೇಳಿದೆ.

ಪ್ರಧಾನಿ ಮೋದಿ ಒಂದು "ಕಾರ್ಪೊರೇಟ್‌ಗಳಿಂದ, ಕಾರ್ಪೊರೇಟ್‌ಗಳಿಗಾಗಿ ಕಾರ್ಪೊರೇಟ್‌ಗಳ ಸರ್ಕಾರ"ವನ್ನು ಪ್ರತಿನಿಧಿಸುತ್ತಾರೆ. ಮುಂದಿನ ದಿನಗಳಲ್ಲಿ ದೇಶಾದ್ಯಂತ ಇನ್ನೂ ಪ್ರಬಲವಾದ ಹೋರಾಟಗಳು ನಡೆಯಲಿವೆ, ಅವು ಅಂತಿಮವಾಗಿ ಪ್ರಸ್ತುತ ಮೋದಿ ಸರ್ಕಾರದ ಅಡಿಯಲ್ಲಿನ ಕಾರ್ಪೊರೇಟ್ ಆಡಳಿತವನ್ನು ನಿರ್ಮೂಲನೆ ಮಾಡುತ್ತವೆ ಎಂದು ಎಐಕೆಎಸ್ ನ ಅಧ್ಯಕ್ಷ ಅಶೋಕ ಧವಳೆ ಮತ್ತು ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಡಿಸೆಂಬರ್ 26 ರಂದು ನೀಡಿರುವ ಹೇಳಿಕೆಯಲ್ಲಿ ಎಚ್ಚರಿಸಿದ್ದಾರೆ.

ಮೂರು ಕೃಷಿ ಕಾಯಿದೆಗಳನ್ನು ರದ್ದುಪಡಿಸಿರುವ ಹಿನ್ನೆಲೆಯಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ಹೋರಾಟವನ್ನು ಹಿಂಪಡೆದಿಲ್ಲ, ಅಮಾನತ್ತಿನಲ್ಲಿ ಇಟ್ಟಿದೆಯಷ್ಟೇ. ಮುಂದಿನ ಜನವರಿ 15 ರಂದು ನಡೆಯಲಿರುವ ಎಸ್‌ಕೆಎಂ ಸಭೆಯಲ್ಲಿ ಕಾನೂನುಬದ್ಧವಾಗಿ ಸಿ2+50% ಸೂತ್ರದಂತೆ ಕನಿಷ್ಟ ಬೆಂಬಲ ಬೆಲೆಯನ್ನು ಖಾತರಿಪಡಿಸುವ ಕಾಯ್ದೆ ತರುವುದು, ವಿದ್ಯುತ್ (ಖಾಸಗೀಕರಣ) ಮಸೂದೆಯನ್ನು ಹಿಂಪಡೆಯುವುದು ಮತ್ತು ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವ ಅಜಯ್ ಕುಮಾರ್ ತೇನಿಯನ್ನು ವಜಾಗೊಳಿಸುವುದು ಮತ್ತು ಬಂಧಿಸುವುದು ಸೇರಿದಂತೆ ಉಳಿದ ಬೇಡಿಕೆಗಳ ಹೋರಾಟದ ಮುಂದುವರಿಕೆ ಕುರಿತು ಚರ್ಚಿಸಿ ನಿರ್ಧರಿಸಲಾಗುವುದು ಎಂದು ಅವರು ಹೇಳಿದ್ದಾರೆ.

ರೈತರ ಐಕ್ಯ ಹೋರಾಟವು ಕಾರ್ಪೊರೇಟ್ ಪರವಾದ ನವ-ಉದಾರವಾದಿ ನೀತಿಗಳ ವಿರುದ್ಧ ಸ್ವಾತಂತ್ರ್ಯೋತ್ತರ ಭಾರತದ ಇತಿಹಾಸದಲ್ಲಿ ರೈತ ಮತ್ತು ಕಾರ್ಮಿಕ ವರ್ಗದ ಅತಿದೊಡ್ಡ ಏಕತೆಯನ್ನು ಸಾಧಿಸಿದೆ. ಕೇಂದ್ರ ಕಾರ್ಮಿಕ ಸಂಘಗಳ ಜಂಟಿ ವೇದಿಕೆಯು 23-24 ಫೆಬ್ರವರಿ 2021 ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಘೋಷಿಸಿದೆ, ಎಲ್ಲರ ಸಾಮಾನ್ಯ ಬೇಡಿಕೆಗಳ ಮೇಲೆ ನಡೆಯಲಿರುವ ಈ ಸಾರ್ವತ್ರಿಕ ಮುಷ್ಕರಕ್ಕೆ ಎಸ್‌ಕೆಎಂ ಬೆಂಬಲ ನೀಡಿದೆ. 4 ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಬೇಕು, ಕೃಷಿ ಕಾರ್ಮಿಕರಿಗೆ ಸ್ಥಿರವಾದ ಉದ್ಯೋಗ ಮತ್ತು ಕನಿಷ್ಠ ಕೂಲಿಗಾಗಿ ಒಂದು ಸಮಗ್ರ ಕಾನೂನನ್ನು ಜಾರಿಗೊಳಿಸಬೇಕು, ರಾಷ್ಟ್ರೀಯ ನಗದೀಕರಣ ಪೈಪ್‌ಲೈನ್ ಯೋಜನೆಯನ್ನು ಸ್ಥಗಿತಗೊಳಿಸಬೇಕು, ಬೆಲೆ ಏರಿಕೆ ಮತ್ತು ನಿರುದ್ಯೋಗವನ್ನು ನಿಗ್ರಹಿಸಬೇಕು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್)ಯ ರಕ್ಷಣೆ ಈ ಸಾರ್ವತ್ರಿಕ ಮುಷ್ಕರದ ಪ್ರಮುಖ ಆಗ್ರಹಗಳು. ಹೀಗೆ, ಜನರ ಹಿತಾಸಕ್ತಿ ಕಾಪಾಡಲು ಮತ್ತು ಮೋದಿ ಸರ್ಕಾರದ ಕಾರ್ಪೊರೇಟ್ ಪರ ನೀತಿಗಳ ವಿರುದ್ಧ ದೇಶಾದ್ಯಂತ ಹೆಚ್ಚೆಚ್ಚು ಹೋರಾಟಗಳು ನಡೆಯಲಿವೆ ಎಂದು ಹನ್ನನ್ ಮೊಲ್ಲಾ ಮತ್ತು ಅಶೋಕ್ ಧವಳೆ ಎಚ್ಚರಿಸಿದ್ದಾರೆ.

ತಮ್ಮ ಹೇಳಿಕೆಯ ಬಗ್ಗೆ ಆಕ್ರೋಶ ವ್ಯಕ್ತಗೊಂಡಿರುವುದನ್ನು ಕಂಡು ಈಗ ಕೇಂದ್ರ ಕೃಷಿ ಮಂತ್ರಿಗಳು ಸರಕಾರಕ್ಕೆ ಈ ವಿವಾದಾಸ್ಪದ ಕಾಯ್ದೆಗಳನ್ನು ಮತ್ತೆ ತರುವ ಯೋಜನೆಯೇನೂ ಇಲ್ಲ ಎಂದು 'ಸ್ಪಷ್ಟೀಕರಣ' ನೀಡಿದ್ದಾರೆ. ಡಿಸೆಂಬರ್ 24ರಂದು ಅವರು "ಸರಕಾರ ಒಂದು ಹೆಜ್ಜೆ ಹಿಂದಿಟ್ಟಿದೆ, ನಾವು ಮತ್ತೆ ಮುಂದಕ್ಕೆ ಚಲಿಸುತ್ತೇವೆ" ಎಂದಿದ್ದರು.

'ಧರ್ಮಸಂಸದ್' ದ್ವೇಷ ಭಾಷಣಗಳು-ನ್ಯಾಯಾಂಗದ ಮಧ್ಯಪ್ರವೇಶ ಕೋರಿ 76 ಸುಪ್ರಿಂ ಕೋರ್ಟ್ ವಕೀಲರುಗಳ ಪತ್ರ

ಕೇವಲ ದ್ವೇಷ ಭಾಷಣಗಳಲ್ಲ, ಒಂದಿಡೀ ಸಮುದಾಯವನ್ನು ಅಪಾಯಕ್ಕೊಡ್ಡುವ ಬಹಿರಂಗ ಕರೆಗಳು

ಡಿಸೆಂಬರ್ 17 ರಿಂದ 19 ರ ನಡುವೆ ದಿಲ್ಲಿ ಮತ್ತು ಹರಿದ್ವಾರದಲ್ಲಿ ನಡೆದ ಎರಡು ಪ್ರತ್ಯೇಕ ಘಟನೆಗಳನ್ನು ಕುರಿತಂತೆ ದೇಶದ ಸರ್ವೋಚ್ಚ ನ್ಯಾಯಾಲಯದ ಮಧ್ಯಪ್ರವೇಶದ ಅಗತ್ಯವಿದೆ ಎಂದು ಸುಪ್ರಿಂ ಕೋರ್ಟಿನ 76 ವಕೀಲರುಗಳು ದೇಶದ ಮುಖ್ಯ ನ್ಯಾಯಾಧೀಶರನ್ನು ಕೋರಿದ್ದಾರೆ. ಅವರು ಮುಖ್ಯ ನ್ಯಾಯಮೂರ್ತಿ ಎನ್‌ವಿ ರಮಣ ಅವರಿಗೆ ಒಂದು ಪತ್ರ ಬರೆದು ಮುಸ್ಲಿಮರ ಹತ್ಯಾಕಾಂಡಕ್ಕೆ ಬಹಿರಂಗ ಕರೆ ನೀಡಿರುವುದನ್ನು ನ್ಯಾಯಾಲಯ ತಾನಾಗಿಯೇ ಪರಿಗಣನೆಗೆ ತಗೊಂಡು ತಪ್ಪಿತಸ್ಥರ ವಿರುದ್ಧ ಭಾರತೀಯ ದಂಡಸಂಹಿತೆಯ ಸೆಕ್ಷನ್ 120ಬಿ, 121ಎ, 124ಎ, 153ಎ, 153ಬಿ, 295ಎ ಮತ್ತು 298 ಅಡಿಯಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಬೇಕು ಎಂದು ಈ ವಕೀಲರು ಕೋರಿದ್ದಾರೆ.

ಈ ಘಟನೆಗಳಲ್ಲಿ ಮಾಡಿದ ಭಾಷಣಗಳು ಕೇವಲ ದ್ವೇಷ ಭಾಷಣಗಳಲ್ಲ, ಅವು ಒಂದಿಡೀ ಸಮುದಾಯದ ಹತ್ಯೆಗೆ ನೀಡಿರುವ ಬಹಿರಂಗ ಕರೆಗಳು. ಇವು ದೇಶದ ಐಕ್ಯತೆಗೆ ಮತ್ತು ಸಮಗ್ರತೆಗೆ ಗಂಭೀರ ಬೆದರಿಕೆಯಷ್ಟೇ ಅಲ್ಲ, ಕೋಟ್ಯಂತರ ಮುಸ್ಲಿಂ ನಾಗರಿಕರ ಜೀವಗಳನ್ನೂ ಅಪಾಯಕ್ಕೆ ಒಡ್ಡಿವೆ ಎಂದು ಈ ಪತ್ರದಲ್ಲಿ ಈ ಹಿರಿಯ ವಕೀಲರು ಹೇಳಿದ್ದಾರೆ.

ಇವು ಆಗೊಮ್ಮೆ- ಈಗೊಮ್ಮೆ ನಡೆಯುವ ಅಪರೂಪದ ಘಟನೆಗಳೂ ಅಲ್ಲ. ಇಂತಹ ಹಲವು ಭಾಷಣಗಳು ಇತ್ತೀಚಿನ ದಿನಗಳಲ್ಲಿ ಕೇಳಬಂದಿವೆ. ಈ ಹಿಂದಿನ ದ್ವೇಷ ಭಾಷಣಗಳ ಬಗ್ಗೆ 120ಬಿ, 153, 153ಎ, 153ಬಿ, 295ಎ, 504 ಮತ್ತು 34ರ ಅಡಿಯಲ್ಲಿ ಯಾವುದೇ ಪರಿಣಾಮಕಾರೀ ಕ್ರಮವನ್ನು ಕೈಗೊಂಡಿಲ್ಲ. ಆದ್ದರಿಂದ ಇಂತಹ ಘಟನೆಗಳು ಸಾಮಾನ್ಯ ಸಂಗತಿಯಾಗದಂತೆ ತಡೆಯಲು ನ್ಯಾಯಾಂಗದ ಮಧ್ಯಪ್ರವೇಶ ಅಗತ್ಯವಾಗಿದೆ ಎಂದು ಪತ್ರದಲ್ಲಿ ಹೇಳಲಾಗಿದೆ.

ಈ ಪತ್ರದಲ್ಲಿ ಗಾಜಿಯಾಬಾದ್‌ನ ಹಿರಿಯ ಪುರೋಹಿತ ಯತಿ ನರಸಿಂಗಾನಂದ ಗಿರಿ, ಬಿಜೆಪಿ ಮುಖಂಡ ಅಶನಿ ಉಪಾಧ್ಯಾಯ ಮತ್ತು ಸುದರ್ಶನ ನ್ಯೂಸ್ ಮುಖ್ಯ ಸಂಪಾದಕ ಸುರೇಶ ಚೌಹಂಕೆ ಸೇರಿದಂತೆ ನಿರ್ದಿಷ್ಟವಾಗಿ 9 ಮಂದಿಯನ್ನು ಹೆಸರಿಸಲಾಗಿದೆ.

"ನ್ಯಾಯಾಂಗದ ಸ್ವಾತಂತ್ರ್ಯ ಮತ್ತು ಸಂವಿಧಾನಿಕ ಮೌಲ್ಯಗಳು ನಮ್ಮಂತಹ ಬಹುಸಂಸ್ಕೃತಿ ದೇಶದ ಕಾರ್ಯನಿರ್ವಹಣೆಗೆ ಮೂಲಭೂತ ಅಂಶವೆಂದು ಅವಕ್ಕೆ ತಾವು ಬದ್ಧರಾಗಿರುವುದನ್ನು ಅರಿತು ಪ್ರಭುತ್ವದ ನ್ಯಾಯಾಂಗದ ಮುಖ್ಯಸ್ಥರಾಗಿ ತಾವು ಕ್ಷಿಪ್ರ ಕ್ರಮ ಕೈಗೊಳ್ಳುವಿರಾಗಿ ನಂಬುತ್ತೇವೆ" ಎಂದು ಪತ್ರದ ಕೊನೆಯಲ್ಲಿ ಈ ಹಿರಿಯ ಸುಪ್ರಿಂ ಕೋರ್ಟ್ ವಕೀಲರುಗಳು ಹೇಳಿದ್ದಾರೆ.

ಈ ಪತ್ರ ಬರೆಯುವ ವೇಳೆಯಲ್ಲಿ ಕೇವಲ ಒಬ್ಬರ ಮೇಲೆ ಎಫ್‌ಐಆರ್ ಹಾಕಿದ್ದ ಹರಿದ್ವಾರ ಪೋಲೀಸರು ಇನ್ನೂ ಇಬ್ಬರ ಹೆಸರನ್ನು ಸೇರಿಸಿರುವುದಾಗಿ ವರದಿಯಾಗಿದೆ. ಈ ಎರಡೂ ಹೆಸರುಗಳು ವಕೀಲರ ಪತ್ರದಲ್ಲಿ ನಮೂದಿಸಿದ ಹೆಸರುಗಳಲ್ಲಿ ಸೇರಿವೆ.



ಕಾಮ್ರೇಡ್ ರಾಜದೇವ್ ಗೋಲಾ


ಪಶ್ಚಿಮ ಬಂಗಾಳದ ಕಾರ್ಮಿಕ ಆಂದೋಲನದ ಹಿರಿಯ ನಾಯಕ ಕಾಮ್ರೇಡ್ ರಾಜದೇವ್ ಗೋಲಾ ಅವರು 30 ಡಿಸೆಂಬರ್ 2021 ರಂದು ಸುಮಾರು 2 ಗಂಟೆಗೆ ಕೊನೆಯುಸಿರೆಳೆದರು. ಅವರಿಗೆ 92 ವರ್ಷ.

ಕಾರ್ಮಿಕ ವರ್ಗದ ಕುಟುಂಬದಲ್ಲಿ ಜನಿಸಿದ ಕಾಮ್ರೇಡ್ ಗೋಲಾ ಅವರು 15 ನೇ ವಯಸ್ಸಿನಲ್ಲಿ ಕಲ್ಕತ್ತಾ ಟ್ರಾಮ್ ಕಂಪನಿಯಲ್ಲಿ ಟ್ರಾಮ್ ಕೆಲಸಗಾರರಾದರು ಮತ್ತು ಟ್ರಾಮ್ ಕಂಪನಿ ಮತ್ತು ಇತರ ಸಾರ್ವಜನಿಕ ಸಾರಿಗೆ ಕ್ಷೇತ್ರಗಳಲ್ಲಿ ಟ್ರೇಡ್ ಯೂನಿಯನ್ ಹೋರಾಟಗಳಲ್ಲಿ ಪ್ರಾರಂಭಿಸಿದರು. ಸಿಐಟಿಯು ಪಶ್ಚಿಮ ಬಂಗಾಳ ಹಾಗೂ ರಾಷ್ಟ್ರಮಟ್ಟದಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ಕೋಲ್ಕತ್ತಾದಲ್ಲಿ ಸ್ವಾತಂತ್ರ್ಯಪೂರ್ವ 1946 ರ ಗಲಭೆಯ ಸಮಯದಲ್ಲಿ, ಕಾಮ್ರೇಡ್ ಗೋಲಾ ಕೋಮುವಾದಿ ಶಕ್ತಿಗಳ ವಿರುದ್ಧ ವೀರೋಚಿತ ಪ್ರತಿರೋಧ ಹೋರಾಟವನ್ನು ನಡೆಸಿದವರು.1940 ರ ದಶಕದಲ್ಲಿ ಎಡ ಚಳುವಳಿಗೆ ಸೇರಿದರು, ಅವರು 1953 ರಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ ಸದಸ್ಯರಾದರು. 1964 ರಲ್ಲಿ ಸಿಪಿಐ (ಎಂ) ರಚನೆಯ ನಂತರ, ಅವರು ಸಿಪಿಐ (ಎಂ) ಪಶ್ಚಿಮ ಬಂಗಾಳದ ರಾಜ್ಯ ಸಮಿತಿ ಸದಸ್ಯರಾಗಿ ಆಯ್ಕೆಯಾದರು.

ಅವರು 1971 ರಲ್ಲಿ ಸಿಐಟಿಯು ಪಶ್ಚಿಮ ಬಂಗಾಳ ಸಮಿತಿಯ ಮೊದಲ ಸಮ್ಮೇಳನದಲ್ಲಿ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದರು; 1991 ರಿಂದ 2006 ರವರೆಗೆ ಪಶ್ಚಿಮ ಬಂಗಾಳ ರಾಜ್ಯ ವಿಧಾನಸಭೆಯ ಸದಸ್ಯರಾಗಿದ್ದರು.

ನೀತಿ ಆಯೋಗದ ಆರೋಗ್ಯ ಸೂಚ್ಯಂಕ: ಮತ್ತೆ ಕೇರಳಕ್ಕೆ ಅಗ್ರಸ್ಥಾನ; ಉತ್ತರ ಪ್ರದೇಶಕ್ಕೆ ಕೊನೆಯ ಸ್ಥಾನ

ನೀತಿ ಆಯೋಗ ಪ್ರಕಟಿಸಿರುವ ನಾಲ್ಕನೇ ಆರೋಗ್ಯ ಸೂಚ್ಯಂಕದ ಪ್ರಕಾರ, ದೊಡ್ಡ ರಾಜ್ಯಗಳಲ್ಲಿ ಒಟ್ಟಾರೆ ಆರೋಗ್ಯ ಕಾರ್ಯಕ್ಷಮತೆಯ ವಿಷಯದಲ್ಲಿ ಕೇರಳ ಮತ್ತೆ ಅಗ್ರ ಶ್ರೇಯಾಂಕದ ರಾಜ್ಯವಾಗಿ ಹೊರಹೊಮ್ಮಿದೆ, ಎರಡನೇ ಸ್ಥಾನದಲ್ಲಿ ತಮಿಳುನಾಡು ಹಾಗೂ ಅದರ ನಂತರದ ಸ್ಥಾನದಲ್ಲಿ ಕ್ರಮವಾಗಿ ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ ಇದೆ.



ಪ್ರಧಾನಿಗಳು ಈಗ ಮತ್ತೆ ಡಂಗುರ ಹೊಡೆಯುತ್ತಿರುವ 'ಡಬಲ್ ಇಂಜಿನ್ ಸರಕಾರ'ದ ಆಳ್ವಿಕೆಯಲ್ಲಿರುವ ಉತ್ತರಪ್ರದೇಶ ಕೊನೆಯ ಸ್ಥಾನದಲ್ಲಿದೆ, ಇನ್ನೊಂದು ಡಬಲ್ ಇಂಜಿನ್ ಸರಕಾರ ಇರುವ ಕರ್ನಾಟಕವೂ 9ನೇ ಸ್ಥಾನಕ್ಕೆ ಇಳಿಕೆ ಕಂಡಿದೆ.

ಮತ್ತೆರಡು 'ಡಬಲ್ ಇಂಜಿನ್' ಸರಕಾರಗಳಿರುವ ರಾಜ್ಯಗಳಾದ ಬಿಹಾರ ಮತ್ತು ಮಧ್ಯಪ್ರದೇಶ ಕೆಳಗಿನಿಂದ ಎರಡನೇ ಮತ್ತು ಮೂರನೇ ಸ್ಥಾನಗಳಲ್ಲಿವೆ.

ಸಣ್ಣ ರಾಜ್ಯಗಳ ಪೈಕಿ, ಮಿಝೋರಾಂ ಒಟ್ಟಾರೆ ಕಾರ್ಯಕ್ಷಮತೆ ಮತ್ತು ಹೆಚ್ಚುತ್ತಿರುವ ಕಾರ್ಯಕ್ಷಮತೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದೆ. ಆದರೆ ಕೇಂದ್ರಾಡಳಿತ ಪ್ರದೇಶಗಳಲ್ಲಿ, ದಿಲ್ಲಿ ಮತ್ತು ಜಮ್ಮು ಮತ್ತು ಕಾಶ್ಮೀರ ಒಟ್ಟಾರೆ ಕಾರ್ಯಕ್ಷಮತೆಯ ವಿಷಯದಲ್ಲಿ ಕೆಳಸ್ಥಾನ ಪಡೆದರೂ, ಹೆಚ್ಚುತ್ತಿರುವ ಕಾರ್ಯಕ್ಷಮತೆಯ ವಿಷಯದಲ್ಲಿ ಪ್ರಮುಖ ಪ್ರದರ್ಶನ ನೀಡಿರುವ ರಾಜ್ಯಗಳಾಗಿವೆ ಎಂದು ವರದಿ ತಿಳಿಸಿದೆ.

ಒಂದನೇ ಸ್ಥಾನವನ್ನು ಕಾಯ್ದುಕೊಂಡಿರುವ ಕೇರಳದ ಆರೋಗ್ಯ ಸೂಚ್ಯಂಕ ಶೇಕಡ 82.20 ಆಗಿದೆ. ಇನ್ನು ತಮಿಳುನಾಡು ಕಳೆದ ಬಾರಿ ಎರಡನೇ ಸ್ಥಾನದಲ್ಲಿದ್ದು ಈ ಬಾರಿಯೂ ಕೂಡಾ ಸ್ಥಾನವನ್ನು ಕಾಪಾಡಿಕೊಂಡಿದೆ. ತಮಿಳುನಾಡಿನ ಆರೋಗ್ಯ ಸೂಚ್ಯಂಕ ಶೇಕಡ 72.42 ಆಗಿದೆ. ಕಳೆದ ಬಾರಿ ನಾಲ್ಕನೇ ಸ್ಥಾನದಲ್ಲಿ ಇದ್ದ ತೆಲಂಗಾಣ ಈ ಬಾರಿ ಮೂರನೇ ಸ್ಥಾನಕ್ಕೆ ಏರಿದೆ. ತೆಲಂಗಾಣದ ಆರೋಗ್ಯ ಸೂಚ್ಯಂಕ ಶೇಕಡ 69.96 ಆಗಿದೆ. ಆಂಧ್ರ ಪ್ರದೇಶದವು ಮೂರನೇ ಸ್ಥಾನದಿಂದ ನಾಲ್ಕನೇ ಸ್ಥಾನಕ್ಕೆ ಇಳಿದಿದೆ. ಆಂಧ್ರ ಪ್ರದೇಶದ ಆರೋಗ್ಯ ಸೂಚ್ಯಂಕ 69.95 ಆಗಿದೆ. ಇನ್ನು ಮಹಾರಾಷ್ಟ್ರ ಮಾತ್ರ ಐದನೇ ಸ್ಥಾನದಲ್ಲಿಯೇ ಉಳಿದು ಕೊಂಡಿದೆ. ಮಹಾರಾಷ್ಟ್ರದ ಆರೋಗ್ಯ ಸೂಚ್ಯಂಕ ಶೇಕಡ 69.14 ಆಗಿದೆ.

ಗುಜರಾತ್‌ನ ಆರೋಗ್ಯ ಸೂಚ್ಯಂಕವು ಶೇಕಡ 63.59, ಅದು ಆರನೇ ಸ್ಥಾನದಲ್ಲಿದೆ. ಕರ್ನಾಟಕದ ಆರೋಗ್ಯ ಸೂಚ್ಯಂಕವು ಶೇಕಡ 57.93 ಆಗಿದೆ. ವಿಶ್ವಬ್ಯಾಂಕ್‌ನ ತಾಂತ್ರಿಕ ನೆರವಿನೊಂದಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಸಹಯೋಗದೊಂದಿಗೆ ವರದಿಯನ್ನು ಸಿದ್ಧಪಡಿಸಲಾಗುತ್ತದೆ.

ಸಂಪಾದಕೀಯ

ರಾಜ್ಯ ಬಿಜೆಪಿಯಲ್ಲಿ ಆರಂಭವಾಗಿದೆ ತಳಮಳ

ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಬಿಜೆಪಿ ಕಾರ್ಯಕಾರಿಣಿ ಸಭೆ ನಡೆಯಿತು. ಎಲ್ಲಾ ಸಚಿವರು, ಸಂಸದರು ಹಾಗೂ ಶಾಸಕರು ಕಾರ್ಯಕಾರಣಿಗೆ ಬಂದಿರಲಿಲ್ಲ. ಬಿ.ಎಸ್. ಯಡಿಯೂರಪ್ಪ, ಜಾರಕಿಹೊಳಿ ಮುಂತಾದವರ ಗೈರು ಹಾಜರಿ ಎದ್ದು ಕಾಣುತ್ತಿತ್ತು. ಯಡಿಯೂರಪ್ಪ ವಿದೇಶಿ ಪ್ರವಾಸದಲ್ಲಿದ್ದರು. ಎಲ್ಲರೂ ಬರಲೇಬೇಕು ಎಂದೇನಿಲ್ಲ' ಎಂದು ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಮಾಧ್ಯಮದವರಿಗೆ ಹೇಳಿದರು ಎಂದು ವರದಿಯಾಗಿದೆ. ಆದರೆ ಕೆಲವರ ಗೈರು ಹಾಜರಿ ಪಕ್ಷದಲ್ಲಿ ಎಲ್ಲವು ಸರಿಯಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ವಿಧಾನ ಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಪಕ್ಷದೊಳಗಿನ ಈ ಬೆಳವಣಿಗೆ ತಳಮಳವನ್ನು ಉಂಟುಮಾಡಲು ಆರಂಭಿಸಿರುವುದು ಬಿಜೆಪಿ ನಾಯಕರಿಗೆ ತಲೆನೋವಿನ ವಿಷಯವಾಗಿದೆ.

ಇತ್ತೀಚಿನ ವಿಧಾನ ಪರಿಷತ್ ಚುನಾವಣೆಯಲ್ಲಿ 25 ಸ್ಥಾನಗಳ ಪೈಕಿ ಕನಿಷ್ಠ 18 ಸ್ಥಾನಗಳನ್ನು ಗೆಲ್ಲಬಹುದೆಂಬ ಭರವಸೆ ರಾಜ್ಯ ಬಿಜೆಪಿಗೆ ಇತ್ತು ಎನ್ನಲಾಗುತ್ತದೆ. ಆದರೆ ಆ ನಿರೀಕ್ಷೆ ಯಶಸ್ವಿಯಾಗಲಿಲ್ಲ. ಮುಂಬರುವ 2023 ರ ವಿಧಾನಸಭಾ ಚುನಾವಣೆಯಲ್ಲಿ 150 ಸ್ಥಾನಗಳನ್ನು ಗೆಲ್ಲುವ ಗುರಿ ಇಟ್ಟುಕೊಂಡು ಕೆಲಸ ಮಾಡಬೇಕೆಂದು ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಪಕ್ಷದ ಶಾಸಕರಿಗೆ, ಸಚಿವರಿಗೆ ಮತ್ತು ಪದಾಧಿಕಾರಿಗಳಿಗೆ ಎಚ್ಚರಿಕೆಯ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ರಾಜ್ಯ ಬಿಜೆಪಿಯಲ್ಲಿ ಮತ್ತೊಮ್ಮೆ ನಾಯಕತ್ವದ ಗೊಂದಲ ತಲೆದೋರಿದ್ದು ಗುಟ್ಟಿನ ವಿಷಯವಾಗಿರಲಿಲ್ಲ. ವಿಧಾನ ಪರಿಷತ್ ಚುನಾವಣೆಯಲ್ಲಿ ಉಂಟಾದ ಹಿನ್ನಡೆಯಿಂದಾಗಿ ತೆರೆಮರೆಯಲ್ಲಿ ಮುಖ್ಯ ಮಂತ್ರಿ ಬದಲಾವಣೆಯ ಸುದ್ದಿಗೆ ರೆಕ್ಕೆ ಪುಕ್ಕ ಬಂದಿದ್ದವು. ಅರುಣ್ ಸಿಂಗ್ ನೀಡಿದ ಎಚ್ಚರಿಕೆ ತಾತ್ಕಾಲಿಕವಾಗಿ ತೇಪೆ ಹಚ್ಚುವುದರಲ್ಲಿ ಯಶಸ್ವಿಯಾಗಿದೆ.

ಈಗಾಗಲೇ ಅಧಿಕಾರ ಅನುಭವಿಸಿರುವ ಸಚಿವರನ್ನು ಕೈಬಿಟ್ಟು ಸಂಪೂರ್ಣ ಹೊಸ ಸಚಿವ ಸಂಪುಟ ರಚನೆ ಮಾಡಬೇಕೆಂಬ ಬೇಡಿಕೆ ಇತ್ತೀಚೆಗೆ ಬಿಜೆಪಿ ವಲಯದಲ್ಲಿ ಜೋರಾಗಿ ಕೇಳಿ ಬರಲಾರಂಭಿಸಿದೆ. ಬಸವರಾಜ ಬೊಮ್ಮಾಯಿ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ ನಾಲ್ಕು ತಿಂಗಳು ಕಳೆದಿವೆ. ಇಷ್ಟರಲ್ಲೆ, ಈ ತನಕ ಮಂತ್ರಿಗಿರಿ ಪಡೆದಿರುವ ಎಲ್ಲಾ ಹಿರಿಯರನ್ನು ಸಚಿವ ಸಂಪುಟದಿಂದ ಕೈಬಿಟ್ಟು ಈವರೆಗೆ ಅವಕಾಶ ಸಿಗದೇ ಇರುವ ಹೊಸಬರಿಗೆ ಹಾಗೂ ಅನುಭವಿಗಳಿಗೆ ಅವಕಾಶ ನೀಡಬೇಕೆಂದು ಒಕ್ಕೊರಲಿನ ಆಗ್ರಹ ಹುಬ್ಬಳಿಯಲ್ಲಿ ನಡೆದ ರಾಜ್ಯ ಬಿಜೆಪಿ ಕಾರ್ಯಕಾರಿಣಿಯಲ್ಲಿ ಪ್ರತಿಧ್ವನಿಸಿದೆ.

ಈ ವಿದ್ಯಮಾನಗಳ ಜೊತೆಯಲ್ಲಿ ಬೊಮ್ಮಾಯಿ ಸರ್ಕಾರದ ಕೆಲವು ಧೋರಣೆಗಳು ಬಿಜೆಪಿ ರಾಜ್ಯ ಸರ್ಕಾರದ ವಿರುದ್ಧ ಜನರ ಅತೃಪ್ತಿ ಹೆಚ್ಚಾಗುತ್ತಿದೆ. ಭೂ ಸುಧಾರಣಾ ತಿದ್ದುಪಡಿ ಕಾಯ್ದೆ, ಜಾನುವಾರ ಹತ್ಯೆ ನಿಷೇಧ ಕಾಯ್ದೆ, ಬಿಟ್ ಕಾಯಿನ್ ಪ್ರಕರಣ, 40 ಪರ್ಸೆಂಟ್ ಹಗರಣದ ಆರೋಪ ಮತಾಂತರ ನಿಷೇಧ ಕಾಯ್ದೆ ಮುಂತಾದ ನೀತಿಗಳು ಜನಸಾಮಾನ್ಯರಲ್ಲಿ ತೀವ್ರ ಅಸಮಾಧಾನವನ್ನು ಉಂಟುಮಾಡಿದೆ. ಇತರ ಪರಿಣಾಮ ಸರ್ಕಾರದ ಮೇಲೆ ಆಗದೆ ಇರಲಾರದು. ಆದ್ದರಿಂದ ಪಕ್ಷದೊಳಗಿನ ಬೆಳವಣಿಗೆ ಬಿಜೆಪಿ ನಾಯಕತ್ವಕ್ಕೆ ತಲೆ ನೋವು ಉಂಟುಮಾಡಿದೆ. ಮುಂಬರುವ ವಿಧಾನಸಭಾ ಚುನಾವಣೆ ಬಿಜೆಪಿಗೆ ಅಳಿವು ಉಳಿವಿನ ಪ್ರಶ್ನೆಯಾಗಿದೆ.

ಜನ ಭ್ರಮನಿರಸನಗೊಳುತ್ತಿದ್ದಾರೆ. ಕೇವಲ ಭರವಸೆಗಳಿಗೆ ಮನಸೋಲುವ ಕಾಲ ಮುಗಿದು ಹೋಗಿದೆ. ಕೇವಲ ಮಾತಿಗೆ ಮರಳಾಗುವ ಪರಿಸ್ಥಿತಿ ಉಳಿದಿಲ್ಲ. ಜನರಿಗೆ ಕೆಲಸ ಮಾಡುವ ಸರ್ಕಾರ ಬೇಕು. ಅಂತಹ ಸರ್ಕಾರವನ್ನು ಅವರು ಹುಡುಕಲಾರಂಭಿಸಿದ್ದಾರೆ. ಬಿಜೆಪಿಯವರಿಗೂ ಇದು ಅರ್ಥವಾಗಲಾರಂಭಿಸಿದೆ. ಹೀಗಾಗಿ ಪಕ್ಷದಲ್ಲಿ ಹಿಂದಿಲ್ಲದ ನಡುಕ ಉಂಟಾಗಿದೆ.

ಬಡವರ ವಸತಿ ಸೌಲಭ್ಯ ರದ್ದು ಹಿಂಪಡೆಯಲು-ವಸತಿ ಯೋಜನೆ ಬಲಪಡಿಕೆಗೆ ಸಾರ್ವಜನಿಕ ಬಂಡವಾಳ ಹೂಡಿಕೆ ಹೆಚ್ಚಿಸಲು ಸಿಪಿಐ(ಎಂ) ಆಗ್ರಹ

ಬೆಳಗಾವಿಯಲ್ಲಿ ಮುಕ್ತಾಯವಾದ ವಿಧಾನಮಂಡಲದ ಅಧಿವೇಶನದಲ್ಲಿ ರಾಜ್ಯದ ಬಿಜೆಪಿ ಸರಕಾರ ವಸತಿ ಹೀನರಿಗೆ ಈಗಾಗಲೇ ವಸತಿ ಸೌಲಭ್ಯ ಒದಗಿಸುವುದಾಗಿ ಪ್ರಕಟಿಸಿದ್ದ 5,962 ಗ್ರಾಮ ಪಂಚಾಯತ್‌ಗಳ 1,19,240 ವಸತಿ ಸೌಲಭ್ಯಗಳನ್ನು ಹಿಂಪಡೆಯುವ ಘನ ಕಾರ್ಯ ಮಾಡಿದೆ. ಆ ಮೂಲಕ ಸರಕಾರ ಅವರ ಬೆನ್ನಿಗೆ ಚೂರಿ ಹಾಕಿದೆಯೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ.

ಹೇಲಿಕೆ ಬಿಡುಗಡೆ ಮಾಡಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಅವರು ರಾಜ್ಯ ಸರಕಾರ ಈ ಕೂಡಲೇ ಸೌಲಭ್ಯ ರದ್ದು ಪಡಿಸಿರುವುದನ್ನು ವಾಪಾಸು ಪಡೆದು ತುರ್ತು ಕ್ರಮವಹಿಸಿ, ವಸತಿ ಸೌಲಭ್ಯ ಒದಗಿಸಬೇಕೆಂದು ಬಲವಾಗಿ ಒತ್ತಾಯಿಸಿದ್ದಾರೆ.

ಸದರಿ ಸೌಲಭ್ಯವನ್ನು ಒದಗಿಸುವುದಕ್ಕಾಗಿ ಕಳೆದ ಗ್ರಾಮ ಪಂಚಾಯತ್ ಚುನಾವಣೆಯ ಪೂರ್ವವೇ ರಾಜ್ಯ ಸರಕಾರ ಪ್ರಕಟಿಸಿತ್ತು. ಅದೇ ರೀತಿ, ಇತ್ತೀಚಿಗೆ ನಡೆದ ಸ್ಥಳೀಯ ಸಂಸ್ಥೆಗಳನ್ನು ಪ್ರತಿನಿಧಿಸುವ ವಿಧಾನ ಪರಿಷತ್ ಚುನಾವಣೆಯ ಸಂದರ್ಭದಲ್ಲೂ ಹೇಳಲಾಗಿತ್ತು.

ಎರಡೂ ಚುನಾವಣೆಗಳ ಪೂರ್ವ ಜನತೆಗೆ ವಾಗ್ದಾನ ನೀಡಿ, ಅಮಿಷ ಒಡ್ಡಿ, ರಾಜಕೀಯ ಲಾಭ ಪಡೆದುಕೊಂಡ ರಾಜ್ಯ ಸರಕಾರ, ಈಗ ಇಲ್ಲದ ನೆಪಗಳನ್ನು ಹೇಳಿ ವಿಧಾನಸಭಾ ಅಧಿವೇಶನದಲ್ಲಿ ಒಂದೆಡೆ ಜನತೆಗೆ ಬೇಕಿಲ್ಲದ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣಾ ವಿಧೇಯಕ ಮಂಡಿಸುವ ಗದ್ದಲವೆಬ್ಬಿಸಿ, ಜನತೆಯ ಗಮನವನ್ನು ಬೇರೆಡೆ ಸೆಳೆದು ಮತ್ತೊಂದೆಡೆ, ಬಡವರ ವಸತಿ ಸೌಲಭ್ಯ ರದ್ದುಪಡಿಸಿರುವುದಾಗಿ, ವಸತಿ ಖಾತೆ ಸಚಿವರ ಮೂಲಕ ಪ್ರಕಟಿಸಿರುವುದನ್ನು ಏನೆಂದು ಬಣ್ಣಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯವು ಅತಿವೃಷ್ಠಿ, ಪ್ರವಾಹ, ಕೋವಿಡ್–19, ಲಾಕ್‌ಡೌನ್‌ಗಳು, ಅಗತ್ಯ ವಸ್ತುಗಳ ವ್ಯಾಪಕ ಬೆಲೆ ಏರಿಕೆ, ನಿರುದ್ಯೋಗ ಮುಂತಾದ ಸಂಕಷ್ಟಗಳಿಂದಾಗಿ ರಾಜ್ಯದ ಬಡ ರೈತರು, ಕೂಲಿಕಾರರು, ಕಸುಬುದಾರರು,



ಅಸಂಘಟಿತ ಕಾರ್ಮಿಕರು, ದಲಿತರು, ಅಲ್ಪ ಸಂಖ್ಯಾತರು, ಮಹಿಳೆಯರು ಸರಕಾರದಿಂದ ಅಗತ್ಯ ನೆರವು ದೊರೆಯದಾದಾಗ ಇರುವ ವಸತಿಗಳನ್ನು ಮಾರಾಟ ಮಾಡಿ ಬದುಕುಳಿಯಲು ಯತ್ನಿಸಿದ್ದಾರೆ. ಅದೇ ರೀತಿ, ಕುಟುಂಬಗಳು ವಿಭಜನೆಯಾಗಿ ವಸತಿಗಾಗಿ ಹಪಹಪಿಸುವವರ ಸಂಖ್ಯೆಯು ಬೆಳೆದಿದೆ. ಕೋಟ್ಯಾಂತರ ವಲಸೆ ದುಡಿಮೆಗಾರರೂ ವಸತಿ ಸೌಲಭ್ಯಗಳಿಲ್ಲದೇ ದುಬಾರಿ ಬಾಡಿಗೆ ಮನೆಗಳಿಂದ ನಲುಗಿ ಹೋಗಿದ್ದಾರೆ. ಈ ರೀತಿಗಳಲ್ಲಿ ವಸತಿ ಹೀನರಾದವರ ಮತ್ತು ಅಗುತ್ತಿರುವವರ ಸಂಖ್ಯೆ ದಿನೇ ದಿನೇ ಬೆಳೆಯುತ್ತಲಿದೆ.

ಈ ರೀತಿ, ಸಮಸ್ಯೆ ತೀವ್ರವಾಗಿ ಬೆಳೆಯುತ್ತಿರುವಾಗ, ಈ ವಸತಿ ರಹಿತ ಬಡವರಿಗಾಗಿ, ವಸತಿ ಯೋಜನೆಯನ್ನು ಹೆಚ್ಚಿನ ಸಾರ್ವಜನಿಕ ಬಂಡವಾಳ ಹೂಡಿಕೆಯ ಮೂಲಕ ಬಲಪಡಿಸಿ, ವಿಸ್ತರಿಸಿ ನೆರವಾಗಬೇಕಾದ್ದು ಸರಕಾರದ ಕರ್ತವ್ಯವಾಗಿದೆ. ಇಂತಹ ದುಸ್ಥಿತಿಯ ಸಂದರ್ಭದಲ್ಲಿ, ತಮ್ಮ ಸರಕಾರ ಈ ರೀತಿ, ವಸತಿ ಹೀನರನ್ನು, ಬಡವರನ್ನು ಹಿಂಸಿಸುವ ಕುಕೃತ್ಯಕ್ಕೆ ಈಡು ಮಾಡಿರುವುದು ಅಮಾನವೀಯ ಕ್ರೌರ್ಯವಾಗಿದೆ.

ಮುಖ್ಯಮಂತ್ರಿಗಳು ತಕ್ಷಣವೇ ಮದ್ಯಪ್ರವೇಶಿಸಿ, ರಾಜ್ಯದ ಕೋಟ್ಯಾಂತರ ವಸತಿ ಹೀನರ ರಕ್ಷಣೆಗೆ ಸಾರ್ವಜನಿಕ ಬಂಡವಾಳ ಹೂಡಿಕೆಯನ್ನು ವ್ಯಾಪಕವಾಗಿ ಹೆಚ್ಚಿಸಿ ಎಲ್ಲರಿಗೂ ವಸತಿ ಒದಗಿಸಲು ವಸತಿ ಯೋಜನೆಯನ್ನು ಬಲಪಡಿಸಬೇಕು. ಈಗಾಗಲೇ ಪ್ರಕಟಿಸಲಾದ ಮತ್ತು ರದ್ದಾದ ವಸತಿ ಸೌಲಭ್ಯ ಜಾರಿಗೊಳಿಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ಅತಿಥಿ ಉಪನ್ಯಾಸಕರ ಜೊತೆಯಲ್ಲಿ ಮಾತುಕತೆ ನಡೆಸಿ ಅವರ ಹಕ್ಕೊತ್ತಾಯಗಳನ್ನು ಪರಿಹರಿಸಲು ಸಿಪಿಐಎಂ ಒತ್ತಾಯ

ರಾಜ್ಯದಾದ್ಯಂತ ಸರಕಾರಿ ಕಾಲೇಜುಗಳಲ್ಲಿ ಸುಮಾರು 14,800 ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರು, ಕಳೆದ 20 ದಿನಗಳಿಂದ ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನಾ ಧರಣಿಯನ್ನು ನಡೆಸುತ್ತಿರುವುದು ತಮಗೆ ತಿಳಿದಿದೆಯೆಂದು ಭಾವಿಸುವೆವು. ತಮ್ಮ ಸರಕಾರ ಅವರ ಹಕ್ಕೊತ್ತಾಯಗಳ ಕುರಿತು ದಿವ್ಯ ಮೌನ ತೋರಿಸುತ್ತಾ ಉಪೇಕ್ಷೆ ಸುತ್ತಿರುವುದು ತೀವ್ರ ಖಂಡನೀಯ.

ತಕ್ಷಣವೇ, ಅವರ ಜೊತೆ ಮಾತುಕತೆ ನಡೆಸಿ ಅವರ ನ್ಯಾಯಯುತ ಹಕ್ಕೊತ್ತಾಯಗಳನ್ನು ಪರಿಹರಿಸಲು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಒತ್ತಾಯಿಸಿದೆ.

ಕಳೆದ 15–20 ವರ್ಷಗಳಿಂದ ಯುಜಿಸಿ ಮಾರ್ಗ ಸೂಚಿಯಂತೆ ಆಯ್ಕೆಗೊಂಡು ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರನ್ನು ಖಾಯಂಗೊಳಿಸದೇ ಅತಿಥಿ ಹೆಸರಿನಲ್ಲಿ ಸರಕಾರವು ಅವರಿಗೆ ಸಮಾನ ಕೆಲಸಕ್ಕೆ ಸಮಾನ ವೇತನವಲ್ಲಾ, ಕನಿಷ್ಠ ವೇತನವನ್ನು ನಿಗದಿಸದೇ, ಕೇವಲ ಗೌರವದ ಅತ್ಯಂತ ಕಡಿಮೆ ಭತ್ಯೆಯಲ್ಲಿ ದುಡಿಸಿಕೊಂಡು ಈ ಉಪನ್ಯಾಸಕರ ದುಡಿಮೆಯನ್ನು ದೋಚುತ್ತಿರುವುದು ಖೇದಕರವಾಗಿದೆ.

ರಾಜ್ಯ ಸರಕಾರ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬದೇ ಇರುವ ಮತ್ತು ಬೆಳೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಹುದ್ದೆಗಳನ್ನು ಹೆಚ್ಚಿಸದೇ ಇರುವ ಸರಕಾರದ ಜನವಿರೋಧಿ ನೀತಿಗಳ ಪರಿಣಾಮವಿದಾಗಿದೆ. ಈ ರೀತಿ, ರಾಜ್ಯದ ವಿದ್ಯಾವಂತ ನಿರುದ್ಯೋಗಿಗಳನ್ನು ಅತಿಥಿಗಳೆಂಬ ವಂಚಕ ಹೆಸರಿನಲ್ಲಿ ಗೌರವದ ಭತ್ಯೆ ಎಂಬ ನಿಕೃಷ್ಠ ಭತ್ಯೆಯ ಹೆಸರಿನಲ್ಲಿ ಶೋಷಿಸುವುದು ಯಾವ ನ್ಯಾಯ?

ಸರಕಾರವು ಇವರ ಜೊತೆ ಮಾತುಕತೆ ನಡೆಸಿ ಬೇಗನೇ ಇತ್ಯರ್ಥ ಪಡಿಸದೇ ಹೋದುದರಿಂದ ರಾಜ್ಯದಾದ್ಯಂತ ಲಕ್ಷಾಂತರ ವಿದ್ಯಾರ್ಥಿಗಳು ಉಪನ್ಯಾಸಗಳಿಲ್ಲದೇ ತೊಂದರೆ ಅನುಭವಿಸುವಂತಾಗಿದೆ. ಇದಕ್ಕೆಲ್ಲಾ ತಮ್ಮ ಸರಕಾರವೇ ಹೊಣೆಗಾರನಾಗಿದೆ.

ಆದ್ದರಿಂದ, ತಕ್ಷಣವೇ ಅವರ ಜೊತೆ ಮಾತುಕತೆ ನಡೆಸಿ ಅವರ ಹಕ್ಕೊತ್ತಾಯಗಳನ್ನು ಪರಿಹರಿಸಿ, ವಿದ್ಯಾರ್ಥಿಗಳಿಗೆ ಉಪನ್ಯಾಸಗಳು ದೊರೆಯುವಂತೆ ಈ ಮೂಲಕ ಸಿಪಿಐ(ಎಂ) ತಮ್ಮನ್ನು ಒತ್ತಾಯಿಸಿದೆ.

ಕೋಟದಲ್ಲಿ ಕೊರಗರ ಸಂಭ್ರಮಕ್ಕೆ ದಾಳಿಯಿಟ್ಟ ಪೊಲೀಸ್ ವಿರುದ್ಧ ಖಂಡನೆ

ಸಚಿವ ಕೋಟ ಶ್ರೀನಿವಾಸ ಪೂಜಾರಿಯವರ ಸ್ವಗ್ರಾಮ ಕೋಟತಟ್ಟುವಿನ ಕೊರಗ ಕಾಲನಿಯ ಮನೆಯೊಂದರಲ್ಲಿ ಮದುವೆಯೊಂದರಲ್ಲಿ ರಾತ್ರಿ ಮೆಹಂದಿ ಭಾಗವಾಗಿ ಡಿಜೆ ಮೂಲಕ ಸಂಗೀತ ಸಂಭ್ರಮ ಡಿಸೆಂಬರ 27ರ ರಾತ್ರಿ ನಡೆಯುತ್ತಿತ್ತು. ಧ್ವನಿವರ್ಧಕದ ಧ್ವನಿ ಏರುಗತಿಯಲ್ಲಿದುದಕ್ಕೆ ಸಾರ್ವಜನಿಕ ದೂರಿನ ಮೇರೆಗೆ ನಿಲ್ಲಿಸಲು ಬಂದ ಪೊಲೀಸರು, ವಿನಯದಿಂದ ವರ್ತಿಸದೆ ಮದುಮಗನನ್ನೂ, ಮಹಿಳೆಯರನ್ನೂ ಒಳಗೊಂಡು ನಾಲ್ಕಾರು ಮಂದಿಗೆ ಲಾಠಿ ಬೀಸಿ ದೌರ್ಜನ್ಯ ಎಸಗಿದ್ದಾರೆ. ಕೊರಗ ಹಾಗೂ ದಲಿತ ಮುಂದಾಳುಗಳು ಒಳಗೆ ಠಾಣೆಯಲ್ಲಿ ಅಧಿಕಾರಿಗಳನ್ನು ಸಂಪರ್ಕಿಸಿದ ಮೇಲೆಯೇ ದೂರು ಕೈಬಿಟ್ಟಿರುತ್ತಾರೆ.

ಕರಾವಳಿ ಜಿಲ್ಲೆಗಳ ಅತಿ ದುರ್ಬಲ ಅಸ್ಪೃಶ್ಯ ಹಾಗೂ



ಆದಿವಾಸಿ ಜನಾಂಗದ ಕೊರಗ ಸಮುದಾಯದ ಮೇಲೆ ಪೊಲೀಸರು ನಡೆಸಿರುವ ಅಮಾನವೀಯ ದಾಳಿಯನ್ನು ಹಲವಾರು ಸಂಘಟನೆಗಳು ಖಂಡಿಸಿ ಪ್ರತಿಭಟನೆ ನೀಡಿವೆ. ಇದೀಗ ಕೋಟ ಠಾಣೆಯ ಪಿಎಸ್ಸೈ ಹಾಗೂ ಐವರು ಸಿಬ್ಬಂದಿಯನ್ನು ಸ್ಥಾನಾಂತರಿಸಿ ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠರು ಕ್ರಮ ಕೈಗೊಂಡಿದ್ದು, ತನಿಖೆಗೆ ಆದೇಶಿಸಿರುತ್ತಾರೆ. ಉಡುಪಿ ಜಿಲ್ಲಾ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಜಿಲ್ಲಾ ಸಂಚಾಲಕ ಶ್ರೀಧರ ನಾಡಾ ಘಟನೆಯ ಬಗ್ಗೆ ಮಾಧ್ಯಮಗಳಲ್ಲಿ ಖಂಡನಾ ಹೇಳಿಕೆ ಕೊಟ್ಟಿರುತ್ತಾರೆ.

ಅಳಿವಿನಂಚಿನಲ್ಲಿರುವ ಕೊರಗ ಸಮುದಾಯ ಇಂದಿಗೂ ಕೃಷಿಪೂರ್ವ ನಾಗರಿಕತೆಯ ಸಮುದಾಯವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಆಧುನಿಕತೆಗೆ ಮುಖಾಮುಖಿಯಾಗಲು ಅಂಬೆಗಾಲಿಡುತ್ತಿರುವ ಸಂದರ್ಭದಲ್ಲಿ ಕೋಟ ಪೊಲೀಸರು ದೌರ್ಜನ್ಯದ ಮೂಲಕ ಪೌರುಷ ತೋರಿಸಿದ್ದಾರೆ. ಕೋಟ ಪೊಲೀಸರ ಮೇಲೆ ಸಂಬಂಧಪಟ್ಟವರು ಕೂಡಲೇ ಕ್ರಮಕೈಗೊಳ್ಳಬೇಕು ಎಂದು ಶ್ರೀಧರ ನಾಡಾ ಒತ್ತಾಯಿಸಿದ್ದಾರೆ.

ಆದಿವಾಸಿಗಳು, ದಲಿತರ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ತೋರುತ್ತಿರುವ ತಿರಸ್ಕಾರದ ವರ್ತನೆಯು, ಅವರು ಪೊಲೀಸ್ ಸಿಬ್ಬಂದಿ ಮೂಲಕ ಅಭಿವ್ಯಕ್ತಗೊಳ್ಳುತ್ತಿದೆ.

ಮಂಗಳೂರು ಪಿಎಫ್ ಕಚೇರಿ ಎದುರು ಸಿಐಟಿಯು ಪ್ರತಿಭಟನೆ

ವರದಿ: ವಾ. ಉ.



ಕೆವೈಸಿ ಹಾಗೂ ಇ–ನೋಮಿನೇಶನ್‌ಗಾಗಿ ದಾಖಲೆ ಒದಗಿಸುವ ನೆಪದಲ್ಲಿ ಕಾರ್ಮಿಕರನ್ನು ಸತಾಯಿಸುತ್ತಿರುವ ಭವಿಷ್ಯನಿಧಿ ಕಚೇರಿಯ ಅಧಿಕಾರಿಗಳು ದುರ್ವತನೆ ತೋರುತ್ತಿದ್ದಾರೆ ಎಂದು ಆರೋಪಿಸಿ ಸಿಐಟಿಯು ದ.ಕ.ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ತಾ.28–12–2021 ರಂದು ನಗರದ ಭವಿಷ್ಯನಿಧಿ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದರು.

ನೂರಾರು ಸಂಖ್ಯೆಯಲ್ಲಿ ಸೇರಿದ್ದ ಕಾರ್ಮಿಕರು ಕೇಂದ್ರ ಸರಕಾರ ಹಾಗೂ ಪಿಎಫ್ ಕಚೇರಿಯ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡಿದ ಸಿಐಟಿಯು ದ.ಕ.ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಒಳ್ಳೆಯ ದಿನಗಳನ್ನು ತರುವುದಾಗಿ ಪೊಳ್ಳು ಭರವಸೆ ನೀಡಿದ ಕೇಂದ್ರದ ನರೇಂದ್ರ ಮೋದಿ ಸರಕಾರವು ನಿತ್ಯ ನಿರಂತರವಾಗಿ ದುಡಿಯುವ ವರ್ಗವನ್ನು ಶೋಷಿಸುತ್ತಾ ಬಂದಿದೆ. ಅಲ್ಲದೆ ಕಾರ್ಮಿಕ ಕಾನೂನುಗಳನ್ನು ಮಾಲಕರ ಪರವಾಗಿ ತಿದ್ದುಪಡಿ ಮಾಡಿ ಅವುಗಳನ್ನು ಸಂಹಿತೆಗಳನ್ನಾಗಿ ರೂಪಿಸಿ ಕಾರ್ಮಿಕ ವರ್ಗವನ್ನು ಮತ್ತೆ ಜೀತದಾಳುಗಳನ್ನಾಗಿ ಪರಿವರ್ತಿಸಲು ಹುನ್ನಾರ ನಡೆಸುತ್ತಿದೆ. ತಮ್ಮ ದುಡಿಮೆಯ ಪಾಲನ್ನು ಭವಿಷ್ಯದ ಜೀವನಕ್ಕಾಗಿ ಮೀಸಲಿರಿಸಿದ ಭವಿಷ್ಯ ನಿಧಿಯನ್ನು ದಾಖಲೆ ನೀಡುವ ನೆಪದಲ್ಲಿ ಕಾರ್ಮಿಕರಿಗೆ ನೀಡದೆ ಸತಾಯಿಸುತ್ತಿದೆ. ಇದರ ವಿರುದ್ಧ ಜನಾಂದೋಲನ ರೂಪಿಸಬೇಕಾಗಿ ಎಂದು ಹೇಳಿದರು.

ಸಿಐಟಿಯು ರಾಜ್ಯ ಉಪಾಧ್ಯಕ್ಷ ವಸಂತ ಆಚಾರಿ ಮಾತನಾಡುತ್ತಾ, ಕಾರ್ಮಿಕರ ಧೀರೋದತ್ತ ಹೋರಾಟದ ಮೂಲಕ ಜಾರಿಗೆ ಬಂದ ಭವಿಷ್ಯ ನಿಧಿ ಯೋಜನೆಯನ್ನು ಕೇಂದ್ರದ ನರೇಂದ್ರ ಮೋದಿ ಸರಕಾರವು ಇಲ್ಲವಾಗಿಸಲು ಕುತಂತ್ರ ಹೆಣೆಯುತ್ತಿದೆ. ಡಿಜಿಟಲೀಕರಣದ ಹೆಸರಿನಲ್ಲಿ ವ್ಯಾಪಕವಾಗಿ ಕಾರ್ಮಿಕರನ್ನು ಶೋಷಿಸಲಾಗುತ್ತಿದೆ. ಇ–ನೋಮಿನೇಶನ್ ಮತ್ತು ಕೆವೈಸಿಗಾಗಿ ದಾಖಲೆ ನೀಡಲು ಬಡಪಾಯಿ ಕಾರ್ಮಿಕರು ವಿನಾಕಾರಣ ಬೀದಿಬೀದಿ ಅಲೆದಾಡಿಸಲಾಗುತ್ತಿದೆ. ದ.ಕ.ಜಿಲ್ಲೆಯ ಬಹುಸಂಖ್ಯಾತ ಬೀಡಿ ಕಾರ್ಮಿಕರು ತೀವ್ರ ಸಂಕಷ್ಟವನ್ನು ಅನುಭವಿಸುತ್ತಿದ್ದರೂ, ಜನಪ್ರತಿನಿಧಿಗಳು ಬಾಯಿತೆರೆಯುತ್ತಿಲ್ಲ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ರಾಜ್ಯ ನಾಯಕಿಯರಾದ ಪದ್ಮಾವತಿ ಶೆಟ್ಟಿ, ರಮಣಿ ಮೂಡಬಿದ್ರಿ, ಜಯಂತಿ ಶೆಟ್ಟಿ ಮಾತನಾಡಿದರು.

ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾ ಮುಖಂಡರಾದ ಜಯಂತ ನಾಯ್ಕ್, ರಾಧಾ ಮೂಡಬಿದ್ರಿ, ನೋಣಯ್ಯ ಗೌಡ, ಯೋಗೀಶ್ ಜಪ್ಪಿನಮೊಗರು, ಭಾರತಿ ಬೋಳಾರ್, ಬಾಬು ದೇವಾಡಿಗ, ಬಾಬು ಪಿಲಾರ್, ವಸಂತಿ ಕುಪ್ಪೆಪದವು, ವಿಲಾಸಿನಿ, ಜಯಲಕ್ಷ್ಮಿ, ಸುಂದರ ಕುಂಪಲ, ಭವಾನಿ ವಾಮಂಜೂರು, ಲೋಲಾಕ್ಷಿ, ಗಿರಿಜಾ ಮೂಡಬಿದ್ರಿ, ಜಿಲ್ಲಾ ಕಾರ್ಮಿಕ ನಾಯಕರಾದ ಸದಾಶಿವ ದಾಸ್, ಸುಕುಮಾರ್ ತೊಕ್ಕೊಟ್ಟು, ಬೀಡಿ ಕಂಟ್ರಾಕ್ಟರುದಾರರ ಸಂಘದ ನಾಯಕ ಕೃಷ್ಣಪ್ಪ ಪಾಲ್ಗೊಂಡಿದ್ದರು.

ಮಂಗಳೂರು ಪಾಲಿಕೆ ಎದುರು ಬೀದಿಬದಿ ವ್ಯಾಪಾರಸ್ಥರ ಪ್ರತಿಭಟನೆ:

ಮನಪಾ ಕಂದಾಯ, ಆರೋಗ್ಯ ಇಲಾಖೆಯ ಅಧಿಕಾರಿಗಳ ನೇತೃತ್ವದ ತಂಡವು ನಿಯಮ ಬಾಹಿರವಾಗಿ ಬೀದಿ ಬದಿ ವ್ಯಾಪಾರಿಗಳ ತೆರವು ಕಾರ್ಯಾಚರಣೆ ಮಾಡುತ್ತಿರುವುದನ್ನು ಖಂಡಿಸಿ ತಾ.28–12–2021 ರಂದು ಬೀದಿ ಬದಿ ವ್ಯಾಪಾರಸ್ಥರು ಪ್ರತಿಭಟನೆ ನಡೆಸಿದರು.

ಬೀದಿಬದಿ ವ್ಯಾಪಾರಸ್ಥರ ಸಂಘದ ಕೋಶಾಧಿಕಾರಿ ಆಸಿಫ್ ಗುರುತಿನ ಚೀಟಿ ಹೊಂದಿದ್ದು, ನಗರದ ಪುರಭವನದ ಬಳಿ ಬೆಲ್ಟ್ ಮತ್ತಿತರ ಸಾಮಾಗ್ರಿಗಳನ್ನು ಮಾರಾಟ ಮಾಡುತ್ತಿದ್ದಾರೆ. ಮಂಗಳವಾರ ಬೆಳಗ್ಗೆ ತೆರವುಗೊಳಿಸುವ ಸಂದರ್ಭ ನಜ್ಜುಗುಜ್ಜುಗೊಳಿಸಿದ್ದಾರೆ. ಇದನ್ನು ಖಂಡಿಸಿ ದ.ಕ.ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಶ್ರೇಯೋಭಿವೃದ್ಧಿ ಸಂಘ (ರಿ) ದ ನೇತೃತ್ವದಲ್ಲಿ ವ್ಯಾಪಾರಿಗಳು ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ ತೆರವುಗೊಳಿಸಲಾದ ಸಾಮಾಗ್ರಿಗಳನ್ನು ಸಾಗಾಟ ಮಾಡುತ್ತಿದ್ದ ಲಾರಿಯನ್ನು ಆರ್‌ಟಿಒ ಬಳಿ ತಡೆದು ನಿಲ್ಲಿಸಿದರು. ಬಳಿಕ ಮನಪಾ ಕಚೇರಿಯ ಮುಂದೆ ಆಕ್ರೋಶ ವ್ಯಕ್ತಪಡಿಸಿ ನ್ಯಾಯಕ್ಕಾಗಿ ಆಗ್ರಹಿಸಿದರು.

ಬೀದಿಬದಿ ವ್ಯಾಪಾರಿಗಳ ತೆರವು ಕಾರ್ಯಾಚರಣೆಯ ಬಗ್ಗೆ ಪಟ್ಟಣ ವ್ಯಾಪಾರಸ್ಥರ ಸಮಿತಿಯ ಸಭೆಯಲ್ಲಿ ಪ್ರಸ್ತಾಪಿಸಬೇಕು. ಅದರಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳುವವರೆಗೆ ಕಾರ್ಯಾಚರಣೆ ನಡೆಸಬಾರದು. ಯಾವುದೇ ಕಾರಣಕ್ಕೂ ಆಹಾರ, ಸಾಮಾಗ್ರಿ, ವ್ಯಾಪಾರ ಸರಕುಗಳಿಗೆ ಹಾನಿಗೈಯ್ಯಬಾರದು. ಹಾನಿಗೈದ ಸಾಮಾಗ್ರಿ, ಸರಕುಗಳಿಗೆ ಪರಿಹಾರ ನೀಡಬೇಕು ಎಂದು ಬೀದಿ ಬದಿ ವ್ಯಾಪಾರಸ್ಥರು ಈ ಸಂದರ್ಭ ಒತ್ತಾಯಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಸಂಘದ ಅಧ್ಯಕ್ಷ ಮುಸ್ತಾಫ, ಪ್ರಧಾನ



ಕಾರ್ಯದರ್ಶಿ ಹರೀಶ್ ಪೂಜಾರಿ, ಮಾಜಿ ಗೌರವಾಧ್ಯಕ್ಷ ಸುನಿಲ್ ಕುಮಾರ್ ಬಜಾಲ್, ಬಿ.ಕೆ.ಇಮ್ತಿಯಾಜ್, ಇಸ್ಮಾಯಿಲ್, ಆದಂ, ಶ್ರೀಧರ್ ಭಂಡಾರಿ, ಆಸಿಫ್ ಮತ್ತಿತರರು ವಹಿಸಿದ್ದರು.

ಕೊರಗ ಸಮುದಾಯದ ಮೇಲಿನ ದೌರ್ಜನ್ಯ ಖಂಡಿಸಿ ಪ್ರತಿಭಟನೆ

ಉಡುಪಿ ಜಿಲ್ಲೆಯ ಬ್ರಹ್ಮಾವರದ ಕೋಟತಟ್ಟು ಎಂಬಲ್ಲಿ ಮೆಹಂದಿ ಕಾರ್ಯಕ್ರಮ ನಡೆಸುತ್ತಿದ್ದ ಕೊರಗ ಸಮುದಾಯದ ಮನೆಗೆ ನುಗ್ಗಿ ದೌರ್ಜನ್ಯ ಎಸಗಿದ ಪೊಲೀಸರನ್ನು ಬಂಧಿಸಿ ಜೈಲಿಗೆ ಅಟ್ಟುವ ಬದಲು ದೌರ್ಜನ್ಯಕ್ಕೊಳಗಾದ ಕೊರಗ ಸಮುದಾಯದ 7 ಮಂದಿಯ ಮೇಲೆ ಪ್ರಕರಣ ದಾಖಲಿಸಿದ್ದು ಯಾವ ನ್ಯಾಯ ಎಂದು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕ ಡಾ. ಕೃಷ್ಣಪ್ಪ ಕೊಂಚಾಡಿ ಪ್ರಶ್ನಿಸಿದ್ದಾರೆ.

ಕೋಟ ಠಾಣೆಯ ಪೊಲೀಸರು ಕೊರಗ ಸಮುದಾಯದ ಮನೆಗೆ ನುಗ್ಗಿ ದಾಂಧಲೆ ನಡೆಸಿ ದೌರ್ಜನ್ಯ ಎಸಗಿರುವ ಕೃತ್ಯವನ್ನು ಖಂಡಿಸಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ, ದಲಿತ ಹಕ್ಕುಗಳ ಸಮಿತಿ, ಡಿವೈಎಫ್ಐ ವತಿಯಿಂದ ಗುರುವಾರ ನಗರದ ಕ್ಲಾಕ್ ಟವರ್ ಬಳಿ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕೊರಗ ಸಮುದಾಯ ಇಲ್ಲಿನ ಮೂಲನಿವಾಸಿಗಳು. ವರ್ಷದಿಂದ ವರ್ಷಕ್ಕೆ ಈ ಸಮುದಾಯದ ಜನಸಂಖ್ಯೆ ಇಳಿಕೆಯಾಗುತ್ತಲೇ ಇದೆ. ಇವರನ್ನು ರಕ್ಷಿಸಿ ಮುಖ್ಯವಾಹಿನಿಗೆ ತರಬೇಕಾದ ಪೊಲೀಸರೇ ದಾಂಧಲೆ ನಡೆಸಿ ದಬ್ಬಾಳಿಕೆ ಮಾಡಿರುವುದು ಅಕ್ಷಮ್ಯ. ತಪ್ಪಿತಸ್ಥ ಪೊಲೀಸರನ್ನು ವರ್ಗಾವಣೆ ಅಥವಾ ಅಮಾನತು ಮಾಡಿದರೆ ಸಾಲದು. ಅವರನ್ನು ಬಂಧಿಸಿ ಜೈಲಿಗೆ ಅಟ್ಟಬೇಕು ಮತ್ತು ಕಠಿಣ ಶಿಕ್ಷೆಗೊಳಪಡಿಸಬೇಕು ಎಂದು ಕೃಷ್ಣಪ್ಪ ಕೊಂಚಾಡಿ ಒತ್ತಾಯಿಸಿದರು.



ಸಚಿವ ಕೋಟ ಶ್ರೀನಿವಾಸ ಪೂಜಾರಿ ದೌರ್ಜನ್ಯಕ್ಕೊಳಗಾದ ವರನ ಮದುವೆಯಲ್ಲಿ ಪಾಲ್ಗೊಂಡು ಮೊಸಳೆ ಕಣ್ಣೀರು ಸುರಿಸಿದ್ದಾರೆ. ನಿಜವಾಗಿಯೂ ದೌರ್ಜನ್ಯಕ್ಕೆ ಒಳಗಾದ ಕೊರಗ ಸಮುದಾಯದ ಮೇಲೆ ಸಚಿವರಿಗೆ ಕಾಳಜಿ ಇದ್ದರೆ ವರ ಸಹಿತ ಕೊರಗ ಸಮುದಾಯದ 7 ಮಂದಿಯ ವಿರುದ್ಧ ಪೊಲೀಸರು ದಾಖಲಿಸಿದ ಪ್ರಕರಣವನ್ನು ವಾಪಸ್ ಪಡೆಯಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ನಿವೃತ್ತ ಉಪನ್ಯಾಸಕ ಪಟ್ಟಾಭಿರಾಮ ಸೋಮಯಾಜಿ, ಸಿಪಿಎಂ ಮುಖಂಡ ಸುನಿಲ್ ಕುಮಾರ್ ಬಜಾಲ್, ಡಿವೈಎಫ್ಐ ಮುಖಂಡ ಸಂತೋಷ್ ಬಜಾಲ್ ಮಾತನಾಡಿದರು.

ಸಂಘಟನೆಗಳ ಮುಖಂಡರಾದ ತಿಮ್ಮಯ್ಯ ಕೊಂಚಾಡಿ, ಕೃಷ್ಣ ತಣ್ಣೀರುಬಾವಿ, ಬಶೀರ್ ಪಂಜಿಮೊಗರು, ಯೋಗೀಶ್ ಜಪ್ಪಿನಮೊಗರು, ಭಾರತಿ ಬೋಳಾರ, ವಾಸುದೇವ ಉಚ್ಚಿಲ್, ಜಯಂತಿ ಬಿ. ಶೆಟ್ಟಿ, ಮನೋಜ್ ವಾಮಂಜೂರು, ಮಹಾಬಲ ದೆಪ್ಪಲಿಮಾರ್, ಮುಸ್ತಫಾ, ಸಂತೋಷ್, ಸುನಂದಾ ಕೊಂಚಾಡಿ, ಅಸುಂತಾ ಡಿಸೋಜ ಮತ್ತಿತರರು ಪಾಲ್ಗೊಂಡಿದ್ದರು.

ಬೆಳಗಾವಿ ಅಧಿವೇಶನ: ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ನಡೆಯಲಿಲ್ಲ, ಮತಾಂತರ ಬಿಲ್ ಪಾಸ್ ಮಾಡುವುದಷ್ಟೆ ಅಧಿವೇಶನದ ಗುರಿಯಾಗಿತ್ತು



ಗುರುರಾಜ ದೇಸಾಯಿ

ಬೆಳಗಾವಿ ಅಧಿವೇಶನದ ಪ್ರಮುಖ ಉದ್ದೇಶ ಇದ್ದದ್ದು, ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆ ಆಗಬೇಕು ಎಂಬ ಕಾರಣದಿಂದ. ಆದರೆ ಈ ಕುರಿತಾದ ಚರ್ಚೆಗೆ ಅವಕಾಶ ಸಿಕ್ಕಿದ್ದೇ ಕಡಿಮೆ. ಕೊನೆ ದಿನವಾದ ಶುಕ್ರವಾರ ಕೆಲ ಹೊತ್ತು ಚರ್ಚೆ ನಡೆದರೂ ಸಮರ್ಪಕವಾಗಿ ಹಾಗೂ ಸಮಗ್ರವಾದ ಚರ್ಚೆಗೆ ಕಾಲಾವಕಾಶ ಸಿಗಲಿಲ್ಲ. ಸ್ವತ: ಆಡಳಿತ ಪಕ್ಷದ ಸದಸ್ಯರೂ ಸೇರಿದಂತೆ ಬಹುತೇಕ ಸದಸ್ಯರು ಚರ್ಚೆಗೆ ಅವಕಾಶ ಸಿಕ್ಕಿಲ್ಲ ಎಂದು ಆರೋಪಿಸಿದ್ದಾರೆ.

ಬೆಳಗಾವಿ ಅಧಿವೇಶನ ಉತ್ತರ ಕರ್ನಾಟಕಕ್ಕೆ ಮೀಸಲು ಅಂತಾರೆ, ಕಳೆದ 10 ದಿನಗಳಲ್ಲಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಚ್ಚರೆ ನಡೆಯಲಿಲ್ಲ. ಇಂದು ನಡೆದರೂ ಕೇವಲ ಐದು ಗಂಟೆ ಮಾತ್ರ ಚರ್ಚೆ ನಡೆದಿದೆ. ಇದನ್ನು ಗಮನಿಸಿದರೆ, ಉತ್ತರ ಕರ್ನಾಟಕದ ಗತಿ–ಸ್ಥಿತಿ, ಕಥೆ ಇಷ್ಟೇನಾ? ಈ ಪ್ರಶ್ನೆ ಯಾರನ್ನು ಕೇಳಬೇಕು, ಯಾರ ಮುಂದೆ ಅಳಲು ತೋಡಿಕೊಳ್ಳಬೇಕು? ಎಂಬ ಪ್ರಶ್ನೆ ಆ ಭಾಗದ ಜನರದ್ದಾಗಿದೆ.

ಶಿಕ್ಷಣ, ನೀರಾವರಿ, ಮೂಲ ಸೌಲಭ್ಯ, ಅಭಿವೃದ್ಧಿ ವಿಚಾರದಲ್ಲಿ ಸರಕಾರಗಳ ವರ್ತನೆ, ಉದಾಸೀನತೆ ಈ ಭಾಗದ ಅಸಂಖ್ಯಾತರ ಮನದೊಳಗೆ ಇಂತಹ ಪ್ರಶ್ನೆಗಳನ್ನು ಮೂಡುವಂತೆ ಮಾಡಿದೆ. ನಿಮಗಾಗಿಯೇ 'ಸುವರ್ಣ ವಿಧಾನ ಸೌಧ' ಕಟ್ಟಿದ್ದೇವೆಂದು ಹೇಳುತ್ತಲೇ ಉತ್ತರ ಕರ್ನಾಟಕವನ್ನು ಮತ್ತೆ ಮತ್ತೆ ಕಡೆಗಣಿಸಲಾಗುತ್ತಿದೆ. ಅಭಿವೃದ್ಧಿ ಯೋಜನೆಗಳು ಕಡತಗಳಲ್ಲೇ ಅಣಕಿಸುತ್ತಿವೆ, ಇದ್ದ ಸೌಲಭ್ಯಗಳನ್ನು ಕಿತ್ತುಕೊಂಡು ಬೇರೆ ಕಡೆ ತೆಗೆದುಕೊಂಡು ಹೋಗುವ ಹುನ್ನಾರ ನಡೆಯುತ್ತಲೇ ಇದೆ. ವಿವಿಧ ಇಲಾಖೆಗಳಲ್ಲಿ ನೂರಾರು ಸಮಸ್ಯೆಗಳಿವೆ. ಆ ಭಾಗದ ಜನ ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ. ಇತ್ತೀಚೆಗೆ ಸುರಿದ ಅತೀವೃಷ್ಟಿ ಮಳೆಗೆ ಅಧಿವೇಶನ ನಡೆದ ಜಿಲ್ಲೆ ಸೇರಿದಂತೆ ಆ ಭಾಗದ ಜಿಲ್ಲೆಗಳು ನರಳಿ ಹೋಗಿವೆ. ಆದರೆ ಅವುಗಳ ಬಗ್ಗೆ ಹೆಚ್ಚು ಚರ್ಚೆ ಆಗಲಿಲ್ಲ.

ಉತ್ತರ ಕರ್ನಾಟಕ ಸಮಸ್ಯೆಗಳು

ನಂಜುಂಡಪ್ಪ ವರದಿಯ ಪ್ರಕಾರವೇ 114 ಹಿಂದುಳಿದ ತಾಲ್ಲೂಕುಗಳ ಪೈಕಿ 59 ತಾಲ್ಲೂಕುಗಳು ಉತ್ತರ ಕರ್ನಾಟಕದಲ್ಲಿಯೇ ಇವೆ. ಅದರಲ್ಲಿ 39 ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳು. ಅವು ಎಲ್ಲವೂ ಉತ್ತರದಲ್ಲಿಯೇ ಇವೆ. ಬೆಂಗಳೂರು ಮತ್ತು ಮೈಸೂರು ಕಂದಾಯ ವಿಭಾಗದ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಹೋಲಿಸಿದರೆ ಉತ್ತರದ ಬೆಳಗಾವಿ ಮತ್ತು ಕಲ್ಬುರ್ಗಿ ಕಂದಾಯ ವಲಯಗಳಲ್ಲಿ ತಲಾವಾರು ಆದಾಯ ಈಗಲೂ ಕಡಿಮೆಯೇ ಇದೆ. ಒಂದು ಪ್ರದೇಶವನ್ನು ಹಿಂದುಳಿದ ಪ್ರದೇಶ ಎಂದು ಗುರುತಿಸಲು ಅನೇಕ ಮಾನದಂಡಗಳು ಇವೆ. ಈ ಯಾವ ಮಾನದಂಡಗಳಲ್ಲಿಯೂ ಉತ್ತರ ಕರ್ನಾಟಕದ ಜಿಲ್ಲೆಗಳು ಮುಂದೆ ಇಲ್ಲ. ಪ್ರತಿ ಬಾರಿಯೂ ಇಲ್ಲ ಅಧಿವೇಶನ ನಡೆದಾಗ ಉತ್ತರ ಕರ್ನಾಟಕ ಬದಲಾವಣೆಗಾಗಿ ನಡೆಯುವ ಅಧಿವೇಶನ ಎಂದು ಆಸೆಗಣ್ಣಿನಿಂದ ಜನ ಕಾಯುತ್ತಾರೆ. ಆದರೆ ಇಲ್ಲಿಯವರೆಗೆ 1% ರಷ್ಟಾದರೂ ಚರ್ಚೆ, ಜಾರಿ ನಡೆದಿದೆಯೇ ಎಂಬುದಕ್ಕೆ ದಾಖಲೆಯೂ ಇಲ್ಲ, ಉತ್ತರವೂ ಇಲ್ಲ.

ಸ್ಥಳೀಯ ಸಂಸ್ಥೆಗಳ ಚುನಾವಣೆಯ ನೆಪ ಮಾಡಿಕೊಂಡು ಬಹಳಷ್ಟು ಶಾಸಕರು ಅಧಿವೇಶನದಿಂದ ದೂರ ಉಳಿದಿದ್ದು ಅವರ ಕಾಳಜಿ ಎಂತದ್ದು ಎಂದು ತೋರಿಸುತ್ತದೆ. ಸದನದ ಆರಂಭದಿಂದಲೂ ಶಾಸಕರ ಹಾಜರಾತಿ ಕಡಿಮೆ ಇರುವ ಬಗ್ಗೆ ಸಾರ್ವತ್ರಿಕ ಟೀಕೆ ವ್ಯಕ್ತವಾಗಿದ್ದರೂ, ಶಾಸಕರ ಹಾಜರಾತಿಯಲ್ಲಿ ಗಣನೀಯ ಹೆಚ್ಚಳವಾಗಲೇ ಇಲ್ಲ. ಇನ್ನೂ ಬಂದ ಶಾಸಕರು, ಸಚಿವರು, ಅಕಾರಿಗಳು ಬೆಂಗಳೂರಿನಿಂದ ಬಂದಿರುವುದು ಪಿಕ್‌ನಿಕ್‌ಗೆ ಎಂಬಂತೆ ಭಾಸವಾಗುತ್ತಿದೆ. ಶನಿವಾರ, ಭಾನುವಾರ ಬಂತೆಂದರೆ ಗೋವಾ ಪಿಕ್‌ನಿಕ್ ಹೋಗ್ತಾರೆ ಎಂದು ಜನ ಆಡಿಕೊಳ್ಳುತ್ತಿರುವ ಮಾತುಗಳು ಸತ್ಯ ಎನಿಸುತ್ತಿವೆ.

ಕೊರೊನಾ, ಲಾಕ್‌ಡೌನ್, ಅತೀವೃಷ್ಟಿ ಎಂಬ ಕಾರಣದಿಂದ ಮೂರುವರ್ಷಗಳಿಂದ ಇಲ್ಲಿ ಅಧಿವೇಶನ ನಡೆದಿರಲಿಲ್ಲ. ಹಾಗಾಗಿ ಈ ಬಾರಿಯ ಅಧಿವೇಶವನ್ನು ಜನ ಕುತೂಹಲದಿಂದ ನೋಡುತ್ತಿದ್ದರು. ಮುಖ್ಯವಾಗಿ ಸಿಎಂ ಈ ಭಾಗದವರೆ ಆಗಿದ್ದರಿಂದ ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ಮಹತ್ವ ಬರಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಜನರ ನಿರೀಕ್ಷೆ ಸುಳ್ಳಾಯಿತು. ಸರಕಾರಕ್ಕೆ ಈ ಭಾಗದ ಸಮಸ್ಯೆ ಪರಿಹಾರ ಮಾಡುವುದಕ್ಕಿಂತ ಮತಾಂತರ ನಿಷೇಧ ಮಸೂದೆ ಜಾರಿ ಮಾಡುವುದು ಪ್ರಮುಖ ಅಜೆಂಡವಾಗಿತ್ತು ಎಂಬುದು ಸ್ಪಷ್ಟವಾಗಿದೆ. ಅಗತ್ಯವಿಲ್ಲದ ಮಸೂದೆಯನ್ನು ಜಾರಿ ಮಾಡುವುದಕ್ಕಾಗಿ ಸಮಯ ವ್ಯರ್ಥ ಮಾಡಿ ಅಗತ್ಯವಾಗಿ ಆಗಬೇಕಿದ್ದ ಅಭಿವೃದ್ಧಿಯ ಕಡೆ ಅಧಿವೇಶನ ಮುಖ ಮಾಡದಿರುವುದು ಆ ಭಾಗದ ಜನರಿಲ್ಲಿ ನಿರಾಸೆಯನ್ನು ತಂದಿದೆ. ಉತ್ತರ ಕರ್ನಾಟಕ "ಯಾರಿಗೂ ಬೇಡವಾದ ಕೂಸು" ಎಂಬ ಮಾತು ಮತ್ತೊಮ್ಮೆ ಸಾಬೀತಾಗಿದೆ.

ಹರಿಹರಪುರದ ದಲಿತರ ಮೇಲೆ ದೌರ್ಜನ್ಯ ಬಿ.ಜೆ.ಪಿ. ಸರ್ಕಾರದ ದಿವ್ಯ ನಿರ್ಲಕ್ಷ್ಯ







ಹರಿಹರಪುರದ ದಲಿತರ ಮೇಲೆ ದೌರ್ಜನ್ಯ ಮಾಡಿದ ಆರೋಪಿಗಳನ್ನು ತಕ್ಷಣ ಬಂಧಿಸಬೇಕು. ಮತ್ತು ಸಂದರ್ಭದಲ್ಲಿ ಕರ್ತವ್ಯ ಲೋಪ ಎಸಗಿರುವ ಪೋಲಿಸ್ ವರ್ತನೆ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದು ಡಿಹೆಚ್‌ಎಸ್ ಆಗ್ರಹಿಸಿದೆ.

ಹರಿಹರಪುರ ಮಂಡ್ಯ ಜಿಲ್ಲೆಯ, ಕೆ.ಆರ್.ಪೇಟೆ ತಾಲೋಕಿನ 5–6 ಕಿ.ಮಿ ದೂರದಲ್ಲಿದೆ. ಡಿಸೆಂಬರ್ 16, 2021 ರಂದು ಹನುಮ ಜಯಂತಿ ದಿನ ಆ ಊರಿನ ದಲಿತರು (ಮಾದಿಗರು) ಸಂಜೆ ದೇವಸ್ಥಾನಕ್ಕೆ ಮಹಿಳೆಯರು ಸೇರಿದಂತೆ ದೇವರ ದರ್ಶನ ಮಾಡಲು ಹೋಗಿದ್ದಾರೆ. ಆ ಸಂದರ್ಭದಲ್ಲಿ ಮೇಲ್ ಜಾತಿಯ ಒಕ್ಕಲಿಗರು ನೀವು ಇಲ್ಲಿಗೇಕೆ ಬಂದಿರಿ, ದೇವಸ್ಥಾನ ಮೈಲಿಗೆ ಯಾಗುತ್ತದೆ ಎಂದು ಅವ್ಯಾಚವಾಗಿ ಬಯ್ದು, ಜಾತಿ ನಿಂದನೆ ಮಾಡಿ, ಬೆದರಿಸಿ, ಅಸ್ಪೃಶ್ಯತಾ ಆಚರಣೆ ಮಾಡಿ ಅವಮಾನಿಸಿದ್ದಾರೆ. ವಿಷಯ ತಿಳಿದ ದಲಿತ ಹುಡುಗರು ಕೇಳಲು ಹೋದಾಗ ದೊಣ್ಣೆ, ಪಂಚ್ ಎಂಬ ಮಾರಕಾಸ್ತಗಳಿಂದ ಒಡೆದಿದ್ದಾರೆ. ತೀವ್ರ ರೂಪದ ಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ಸಮಯದಲ್ಲಿ ಸ್ಥಳದಲ್ಲಿದ್ದ ಪೋಲಿಸರು ಈ ದೌರ್ಜನ್ಯ ತಡೆಯದೆ ಕುಮಕ್ಕು ನೀಡಿರುವುದು ಸ್ಪಷ್ಟವಾಗಿ ಕಾಣುತ್ತದೆ. ಅಲ್ಲದೆ ಈ ಒದೆ ತಿಂದ ದಲಿತರ ಮೇಲೆ ಲಾಟಿ ಚಾರ್ಜ ಮಾಡಿ ಕೇರಿವರೆಗೆ ಓಡಿಸಿಕೊಂಡು ಬಂದಿದ್ದಾರೆ. ಈ ಪೋಲಿಸರ ವರ್ತನೆಯನ್ನು ವಿಡಿಯೋದಲ್ಲಿ ಸೆರೆ ಹಿಡಿಯಲಾಗಿದೆ.

ರಾಮಯಣದಲ್ಲಿ ಹನುಮಂತನನ್ನು ಶ್ರೀ ರಾಮಚಂದ್ರ ಭಂಟನಾಗಿ, ಸೇವಕನಾಗಿ ಬಳಸಿಕೊಂಡು ಗುಲಾಮ ನೀತಿಯಿಂದ, ವರ್ಣಶ್ರಮ ಸಿದ್ಧಾಂತದಿಂದ ಮರೆದಿರುವುದು ಇತಿಹಾಸ, ಪುರಾಣಗಳು ಸ್ಪಷ್ಟ ಪಡುತ್ತವೆ. ಈಗಲೂ ಈ ದೌರ್ಜನ್ಯ ಸಾದ್ಯವೇ?

ಡಿ.ಹೆಚ್.ಎಸ್. ರಾಜ್ಯ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ನೇತ್ರತ್ವದಲ್ಲಿ ರಾಜಣ್ಣ ಎನ್. ರಾಜ್ಯ ಸಹ ಸಂಚಾಲಕರು, ಹಾಸನ ಜಿಲ್ಲೆಯ ಮುಖಂಡರಾದ ಸಿಗರನಹಳ್ಳಿ ರಾಜು ಮತ್ತು ಜಿಲ್ಲಾ ಸಂಚಾಲಕರಾದ ಆರ್. ಕೃಷ್ಣ ಸ್ಥಳೀಯ ಮುಖಂಡರಾದ ರಾಮಕೃಷ್ಣಪ್ಪ ನಿಯೋಗ ಗ್ರಾಮಕ್ಕೆ ಬೇಟಿ ನೀಡಿ ಘಟನೆ ಬಗ್ಗೆ ಮಾಹಿತಿ ಪಡೆದಿದೆ.

ಈ ಊರಿನಲ್ಲಿ ಮಾದಿಗರು 300 ಮನೆ, ಹೊಲೆಯರು–150 ಮನೆ, ಒಕ್ಕಲಿಗರು ಸುಮಾರು 1000 ಮನೆಗಳಿವೆ ಮೆಲ್ ಜಾತಿ ಒಕ್ಕಲಿಗರು ರಾಜಕೀಯವಾಗಿ ಪ್ರಬಲರಾಗಿದ್ದು ಈ ದೌರ್ಜನ್ಯ ನಡೆಸಿದ್ದಾರೆ. ಮಾತುಕತೆ ನಡೆಸಿದ ನಿಯೋಗ ಒಗ್ಗಟ್ಟಿನಿಂದ ಹೋರಾಟ ನಡೆಸಬೇಕು ಡಿ.ಹೆಚ್.ಎಸ್ ನಿಮ್ಮೊಂದಿಗೆ ಇದೆ ಎಂದು ತಿಳಿಸಿದೆ.

ಸರ್ಕಾರ–ಜಿಲ್ಲಾಧಿಕಾರಿಗಳು ಮೌನವಹಿಸಿರುವುದು ಏಕೆ!

ಘಟನೆ ನಡೆದು 13 ದಿನಗಳಾಗಿದೆ ಪೋಲಿಸರು ಎಫ್.ಐ.ಆರ್. ಹಾಕಿದ್ದಾರೆ. ಎಸ್.ಸಿ/ಎಸ್.ಟಿ. ದೌರ್ಜನ್ಯ ತಡೆ ಕಾಯಿದೆ ಪ್ರಕಾರ ಆರೋಪಿಗಳನ್ನು ಬಂದಿಸಿಲ್ಲ. ಸಲ್ಲದ ಶಾಂತಿ ಸಭೆ, ಹಿಂಬಾಗಿಲಿನಿಂದ ರಾಜಿ ಸಂದಾನ ಮಾಡುತ್ತಾ ದೌರ್ಜನ್ಯ ನಡೆಸಿದವರು ಭೇಲ್ ಪಡೆಯಲು ಸಹಾಯ ಮಾಡುತ್ತಿರುವು ಸ್ಪಷ್ಟವಾಗುತ್ತಿದೆ. ಇದರಿಂದ ದಲಿತರಿಗೆ ನ್ಯಾಯ ಒದಗಿಸದೆ ಅನ್ಯಾಯವಾಗುವುದು ಶತಸಿದ್ದ. ಈ ಜಾತಿ ತಾರತಮ್ಯ ಸಹಿಸಿಕೋಳ್ಳಬೇಕೆ?

ಡಿಸೆಂಬರ್ 21 ರಂದು ಮಂಡ್ಯದ ಜಿಲ್ಲಾಧಿಕಾರಿಗಳ ಕಛೇರಿ ಎದುರು ದಲಿತ ಹಕ್ಕುಗಳ ಸಮಿತಿ (ಡಿ.ಹೆಚ್.ಎಸ್.) ಮತ್ತು ಇತರೆ ಪ್ರಗತಿಪರ ಸಂಘಟನೆ ಜಿಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳು ಮನವಿ ಸ್ವೀಕರಿಸಿ ತೆಗೆದುಕೊಳುವುದಾಗಿ ಹೇಳಿದವರು. ಅಧಿಕಾರಿಗಳು ಗ್ರಾಮಕ್ಕೆ ಕಳಿಸಿರುವ ಪಟ್ಟಿ ನೀಡಿ ಮೌನ ವಹಿಸಿದ್ದಾರೆ. ಇದು ಬಿಜೆಪಿ ರಾಜ್ಯ ಸರ್ಕಾದ ದಿವ್ಯ ನಿರ್ಲಕ್ಷವಲ್ಲವೆ?

29 ಡಿಸೆಂಬರ್ 2021 ರಂದು ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸುವುದರ ಮೂಲಕ ಆರೋಪಿಗಳನ್ನು ಬಂದಿಸಬೇಕು ಮತ್ತು ನೊಂದ ದಲಿತರಿಗೆ ತಕ್ಷಣ ಪರಿಹಾರ ನೀಡಬೇಕೆಂದು ಡಿಹೆಚ್‌ಎಸ್ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ಆಗ್ರಹಿಸಿದ್ದಾರೆ.



ಈಗಿನ ಸರಕಾರ ಪದೇ ಪದೇ ಇಂತಹ ಕೆಲಸವನ್ನು ಮಾಡ್ತಾನೇ ಇದೆ. ಈಗ ಅದಕ್ಕೆ ಸೇರ್ಪಡೆಯಾಗುತ್ತಿರುವುದು ಹುಡುಗಿಯರ ವಿವಾಹದ ವಯಸ್ಸು 21ಕ್ಕೆ ಏರಿಸುತ್ತಿರುವುದು. ದೇಶದಲ್ಲಿ ಅಪೌಷ್ಟಿಕತೆ, ರಕ್ತಹೀನತೆ, ಕುಬ್ಜತೆ, ಬೆಳವಣಿಗೆ ಹೀನತೆಗಳು, ಬ್ಲೂ ಬೇಬಿಗಳು ಈಗಲೂ ದೊಡ್ಡ ಸಮಸ್ಯೆಯೇ. ಇದಕ್ಕೆ ಪರಿಹಾರವನ್ನು ಉತ್ತಮ ಆರೋಗ್ಯ ವ್ಯವಸ್ಥೆ, ಸರಿಯಾದ ಪೌಷ್ಟಿಕ ಆಹಾರ ಪೂರೈಕೆ, ಸಮರ್ಪಕ ಬದುಕಿನ ವ್ಯವಸ್ಥೆಗಳನ್ನು ಮಾಡುವ ಮೂಲಕ ಸರಿ ಪಡಿಸಬೇಕಲ್ಲವೇ? ಜೊತೆಗೆ ಸರ್ವರಿಗೂ ಸಮರ್ಪಕ ಶಿಕ್ಷಣ ಮತ್ತು ತಿಳುವಳಿಕೆಗಳ ಮೂಲಕ ಅಗತ್ಯವಿರುವ ಬದಲಾವಣೆಗಳಿಗೆ ಸಮಾಜವನ್ನು ಸಿದ್ಧಗೊಳಿಸಬೇಕಲ್ಲದೇ ಅಸಮರ್ಪಕ ವಿಧಾನಗಳ ಮೂಲಕವಲ್ಲ.

ನನ್ನ ಮದುವೆ ವಯಸ್ಸು ಹೆಚ್ಚಿರಬಹುದು,



ಆದರೆ ಭರವಸೆ ಹೆಚ್ಚಿಲ್ಲ

‘ಎತ್ತಿಗೆ ಜ್ವರ ಎಮ್ಮೆಗೆ ಬರೆ’

ವಿವಾಹದ ವಯಸ್ಸು ಏರಿಕೆ ಹುಡುಗಿಯರ ಸಮಸ್ಯೆಗಳಿಗೆ ಅಸಮರ್ಪಕ ಪರಿಹಾರ

ವಿಮಲಾ .ಕೆ.ಎಸ್.

‘ಎತ್ತಿಗೆ ಜ್ವರ ಬಂದ್ರೆ ಎಮ್ಮೆಗೆ ಬರೆ’ ನಮ್ಮೂರ್ಕಡೆ ಇಂತಹ ಒಂದು ಗಾದೆ ಮಾತು ಇದೆ. ಈಗಿನ ಸರಕಾರ ಪದೇ ಪದೇ ಇಂತಹ ಕೆಲಸವನ್ನು ಮಾಡ್ತಾನೇ ಇದೆ. ಈಗ ಅದಕ್ಕೆ ಸೇರ್ಪಡೆಯಾಗುತ್ತಿರುವುದು ಹುಡುಗಿಯರ ವಿವಾಹದ ವಯಸ್ಸು 21ಕ್ಕೆ ಏರಿಸುತ್ತಿರುವುದು. ಮೇಲ್ನೋಟಕ್ಕೆ ಇದು ಸ್ವಾಗತಾರ್ಹ ಎನಿಸುತ್ತದೆ ಯಾರಿಗಾದರೂ. ಯಾಕೆಂದರೆ ಸಹಜವಾಗಿ ಇದು ಹೆಣ್ಣುಮಕ್ಕಳಿಗೆ ಹಲವು ರೀತಿಯಲ್ಲಿ ಅನುಕೂಲಕರವೆಂಬ ಭಾವ ಮೂಡಿಸುತ್ತದೆ. ಅವರಿಗೆ ಶಿಕ್ಷಣಕ್ಕೆ, ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಾಯವಾಗುವ ಉದ್ಯೋಗ ಪಡೆದಿರಬಹುದು, ಮತ್ತು ವೈದ್ಯಕೀಯ ಕಾರಣಗಳನ್ನು ಬಹಳ ವರ್ಷಗಳಿಂದ ಕೇಳುವಂತೆ ಅವಳ ದೈಹಿಕ ಬೆಳವಣಿಗೆ ಮತ್ತು ಮಾನಸಿಕ ಪಕ್ವತೆ ಹೆಚ್ಚಿರುತ್ತದೆ ಎಂಬಿತ್ಯಾದಿ ಕಾರಣಗಳಿಂದಾಗಿ.

ಏನಿದು ವಿವಾಹ ವಯಸ್ಸು?

ವಿವಾಹ ಯೋಗ್ಯ ವಯಸ್ಸು ಎಂದರೆ ಕಾನೂನು ಬದ್ಧವಾಗಿ ಮದುವೆಯಾಗಲು ನಿಗದಿಸಿದ ವಯಸ್ಸು. ಈ ಕುರಿತು ಹಲವು ರೀತಿಯ ಚರ್ಚೆಗಳು ನಡೆದಿವೆ. ಅಧ್ಯಯನಗಳೂ ನಡೆದಿವೆ. ಜೀವಜಗತ್ತಿನ ಮುಂದುವರಿಕೆಗೆ ಗಂಡು ಹೆಣ್ಣುಗಳ ಮಿಲನ ಮತ್ತು ಸಂತಾನೋತ್ಪತ್ತಿ ಅಗತ್ಯ ಎನ್ನುವುದು ನಿರ್ವಿವಾದ. ಆದರೆ ಬಹುತೇಕ ದೇಶಗಳಲ್ಲಿ ಲೈಂಗಿಕ ಕ್ರಿಯೆ ಎನ್ನುವುದು ವಿವಾಹದ ಜೊತೆಯೇ ಜೋಡಿಸಿಕೊಂಡಿರುವ ಕಾರಣದಿಂದ ವಿವಾಹಕ್ಕೆ ವಯಸ್ಸು ಎನ್ನುವುದು ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಭಾರತದಲ್ಲಿ ಈ ವರೆಗೆ ವಿವಾಹದ ವಯಸ್ಸು ಹೆಣ್ಣಿಗೆ 18 ಮತ್ತು ಗಂಡಿಗೆ 21 ಇತ್ತು. ಅದೇ ವೇಳೆಗೆ ವಯಸ್ಕ ಮತದಾನ ಪದ್ಧತಿಯನ್ನೂ ಒಪ್ಪಿಕೊಂಡಿರುವ ನಾವು 18 ವರ್ಷವನ್ನು ಮತದಾನಕ್ಕೆ ಯೋಗ್ಯ ವಯಸ್ಸು ಎಂದು ಗುರುತಿಸಿಕೊಳ್ಳುತ್ತೇವೆ. ಮತ್ತು ಹೆಣ್ಣು ಗಂಡೆಂಬ ಬೇಧವಿಲ್ಲದೆಯೇ ಎಲ್ಲರಿಗೂ ಸಮನಾಗಿ ಮತದಾನದ ಹಕ್ಕು ನೀಡಲಾಗಿದೆ. ಎಂದರೆ ಹೆಣ್ಣಾಗಲಿ, ಗಂಡಾಗಲಿ ದೇಶದ ರಾಜಕೀಯ ಭವಿಷ್ಯವನ್ನು ನಿರ್ಧರಿಸುವ ಸಾಮರ್ಥ್ಯ ಬಂದಿರುತ್ತದೆ ಎಂದಾದರೆ ಅವರ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಲು ಸಾಮರ್ಥ್ಯವಿಲ್ಲವೆಂದು ತೀರ್ಮಾನ ಮಾಡುವುದೆಷ್ಟು ಸರಿ?

ವಿವಿಧ ದೇಶಗಳಲ್ಲಿನ ಸ್ಥಿತಿ:

2010 ರಲ್ಲಿ ನಡೆದ ಒಂದು ಅಧ್ಯಯನದಂತೆ ಸರಿ ಸುಮಾರು 158 ದೇಶಗಳಲ್ಲಿ ಹುಡುಗಿಯರ ಕಾನೂನು ಪ್ರಕಾರದ ವಿವಾಹದ ವಯಸ್ಸು 18. ಇದು ಕಾನೂನಿನ ಮಾನ್ಯತೆ ಪಡೆದ ವಯೋಮಾನವಾಗಿರುವುದರಿಂದ ಇಲ್ಲಿ ಪೋಷಕರ ಒಪ್ಪಿಗೆಯ ಅಗತ್ಯವಿರುವುದಿಲ್ಲ. ಇನ್ನು ಸುಮಾರು 146 ದೇಶಗಳಲ್ಲಿ 18ರ ವಯೋಮಾನಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣು ಮಕ್ಕಳೂ ಕೂಡ ಪೋಷಕರ ಅಥವಾ ಇತರ ಆಡಳಿತಾತ್ಮಕ ಸಂಸ್ಥೆಗಳ ಅನುಮತಿಯ ಮೇರೆಗೆ ವಿವಾಹ ಮಾಡಿಕೊಳ್ಳಲು ಅವಕಾಶವಿದೆಯಂತೆ!. ಹಾಗೆಯೇ ಸುಮಾರು 52 ದೇಶಗಳಲ್ಲಿ 15 ಅಥವಾ ಅದಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳು ಪೋಷಕರ ಅನುಮತಿಯ ಮೇರೆಗೆ ವಿವಾಹವಾಗಬಹುದು. 180 ದೇಶಗಳಲ್ಲಿ ಪೋಷಕರ ಅನುಮತಿ ಇಲ್ಲದೆಯೇ ಪುರುಷರು/ಗಂಡು ಮಕ್ಕಳು ವಿವಾಹವಾಗಬಹುದು. ಇನ್ನು 23 ದೇಶಗಳಲ್ಲಿ ಹುಡುಗರೂ ಕೂಡ 15ರ ವಯಸ್ಸಿಗೆ ಪೋಷಕರ ಅನುಮತಿಯೊಂದಿಗೆ ವಿವಾಹವಾಗಬಹುದು. ಕೆಲವು ಪ್ರಕರಣಗಳ ಸಂದರ್ಭದಲ್ಲಿ ಒಪ್ಪಿತ ಲೈಂಗಿಕ ಸಂಬಂಧಕ್ಕೆ 16ರ ವಯಸ್ಸು ಅಂಗೀಕಾರಾರ್ಹವೆಂದು ನ್ಯಾಯಾಲಯಗಳ ಅಭಿಪ್ರಾಯವೂ ಬಂದ ಉದಾಹರಣೆಗಳು ನಮ್ಮ ದೇಶದಲ್ಲಿಯೂ ಇವೆ.

ಇದಕ್ಕೂ ಒಂದು ಇತಿಹಾಸ:

ಭಾರತದಲ್ಲಿ 1929ರಲ್ಲಿ ಅಪ್ರಾಪ್ತ ವಯಸ್ಕ ಮದುವೆಗಳನ್ನು ನಿಷೇಧಿಸಲಾಯಿತು. ಅಂದಿನ ಬ್ರಿಟಿಷ್ ಕಾನೂನಿನ ಪ್ರಕಾರ ಹುಡುಗಿಗೆ 14 ಮತ್ತು ಹುಡುಗನಿಗೆ 18 ಮದುವೆಯ ವಯಸ್ಸು ಎಂದು ಅಧಿಕೃತಗೊಳಿಸಲಾಗಿತ್ತು. 1947ರಲ್ಲಿ ಸ್ವಾತಂತ್ರಾ ನಂತರದ ಭಾರತದಲ್ಲಿ ಎರಡು ಬಾರಿ ಈ ಕಾನೂನು ಪರಿಷ್ಕರಣೆಗೆ ಒಳಗಾಯಿತು. 1949ರಲ್ಲಿ ಹುಡುಗಿಯರಿಗೆ ವಿವಾಹದ ವಯಸ್ಸು 15 ಎಂದು ಮಾರ್ಪಾಡಾಯಿತು. 1978ರಲ್ಲಿ ಹುಡುಗಿಯರಿಗೆ 18 ಮತ್ತು ಹುಡುಗರಿಗೆ 21 ಎಂದು ನಿಗದಿ ಪಡಿಸಲಾಯಿತು. ಹೀಗೆ ವಿವಾಹದ ವಯಸ್ಸು ಹಲವು ಚರ್ಚೆ, ವಾದ ವಿವಾದಗಳನ್ನು ಕಾಣುತ್ತಲೇ ಇದೆ. ಇದೆಲ್ಲದರ ನಂತರವೂ ವಿಶ್ವದ ಹಲವಾರು ದೇಶಗಳಲ್ಲಿ ಹುಡುಗಿಯರ ವಿವಾಹವಾಗುವ ಅಧಿಕೃತ ವಯಸ್ಸು ಈಗಲೂ 16 ಎನ್ನುತ್ತವೆ ದಾಖಲೆಗಳು.

ಸಾಮಾಜಿಕ ಭೌಗೋಳಿಕ ಪ್ರಭಾವಗಳು:

ಹೀಗೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಇರುವ ವ್ಯತ್ಯಾಸಗಳಿಗೂ ಅದರದ್ದೇ ಆದ ಸಾಮಾಜಿಕ ಸಾಂಸ್ಕೃತಿಕ ಮತ್ತು ಆರ್ಥಿಕ ಕಾರಣಗಳಿರುತ್ತವೆ. ಈಗ ಭಾರತದಲ್ಲಿ ಅದಕ್ಕೊಂದು ರಾಜಕಾರಣವೂ ಬೆರೆತಿದೆ. ಯಾವುದೇ ದೇಶದ ಭೌಗೋಳಿಕ ಗುಣಲಕ್ಷಣಗಳ ಆಧಾರದಲ್ಲಿ ಅಲ್ಲಿಯ ರೀತಿ ರಿವಾಜುಗಳೂ ಬೆಳೆದಿರುತ್ತವೆ. ಬದುಕಿನ ಸ್ಥಿತಿ ಗತಿಗಳು ಸುಧಾರಿಸಿದ ಹಾಗೆ ಮತ್ತು ಶೈಕ್ಷಣಿಕ ಹಾಗೂ ಇತರ ನಾಗರಿಕ ಸೌಲಭ್ಯಗಳು, ಎಚ್ಚರಗಳು ಮೂಡಿದ ಹಾಗೆ ಸುಧಾರಣೆಗಳು ಆಗುತ್ತವೆ ಅಥವಾ ಆಗಬೇಕು. ಉದಾಹರಣೆಗೆ ನಗರ ಪ್ರದೇಶಗಳಿಗೆ ಹೋಲಿಸಿದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಬಡತನ, ಅನಕ್ಷರತೆ, ಮುಂತಾದವುಗಳೇ ವಿವಾಹದಂಥಹ ಸಂಸ್ಥೆಗಳ ಮೇಲೂ ಹೆಚ್ಚು ಪ್ರಭಾವ ಬೀರುತ್ತವೆ. ನಗರಗಳಲ್ಲಿ ಸಿಗುವಷ್ಟು ಸುಲಭವಾಗಿ ಸಿಗದ ಅವಕಾಶಗಳಿಂದಾಗಿ ತನ್ನ ಪ್ರಾದೇಶಿಕ ಪರಿಸರವನ್ನು ಅಲ್ಲಿ ತನಗೆ ಅನುಕೂಲವಾಗುವ ಹಾಗೆ ಸಿದ್ಧಪಡಿಸಿಕೊಳ್ಳುತ್ತದೆ ಅಲ್ಲಿನ ಸಮಾಜ. ಹಾಗೆಂದೇ ಈಗಾಗಲೇ ಅಪ್ರಾಪ್ತ ಮಕ್ಕಳನ್ನು ಮದುವೆ ಮಾಡುವುದು ಶಿಕ್ಷಾರ್ಹ ಅಪರಾಧವೆಂದು ಕಾನೂನು ಇದ್ದಾಗ್ಯೂ ಅತ್ಯಂತ ಸಹಜವೆಂಬಂತೆ ಬಾಲ್ಯ ವಿವಾಹಗಳು ನಡೆಯುತ್ತವೆ. ಇದನ್ನು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಕೂಡಾ ದೃಢಪಡಿಸಿದೆ. ಇತ್ತೀಚೆಗೆ ಪ್ರಕಟವಾದ ಇದರ ವರದಿಯೂ ಗುರುತಿಸಿದಂತೆ ಬಾಲ್ಯ ವಿವಾಹಗಳು ನಗರಗಳಿಗಿಂತ ಗ್ರಾಮಾಂತರಗಳಲ್ಲಿ ಹೆಚ್ಚು ಸಂಭವಿಸುತ್ತವೆ. ಅಷ್ಟೇ ಅಲ್ಲದೇ ಶಿಕ್ಷಣದಿಂದ ವಂಚಿತರಾದ ಸಮೂಹದಲ್ಲಿ ಇದು ಅತಿ ಹೆಚ್ಚು. ಇದು ಕೇವಲ ಭಾರತ ಮಾತ್ರವಲ್ಲ ನಮ್ಮ ನೆರೆಯ ರಾಷ್ಟ್ರಗಳಲ್ಲಿಯೂ ಇದೇ ಸ್ಥಿತಿ ಇದೆ ಎಂದು ಅಧ್ಯಯನಗಳು ಹೇಳುತ್ತಿವೆ. ಎಂದರೆ ಹಲವು ದೇಶಗಳಲ್ಲಿ ಮದುವೆಯ ಅಧಿಕೃತ ವಯಸ್ಸು ಇದ್ದಾಗಲೂ ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಕಾರಣದಿಂದ ಅಪ್ರಾಪ್ತರ ಮದುವೆಗಳು ನಡೆದು ಹೋಗುತ್ತಿವೆ.



ತಂತ್ರಜ್ಞಾನ ದ ಬೆಳವಣಿಗೆ ಮತ್ತದರ ಪರಿಣಾಮಗಳು:

ಇನ್ನು ಇತ್ತೀಚಿನ ಆಧುನಿಕ ಬದುಕಿನ ವಿಧಾನಗಳ ಮೂಲಕ ದೊರೆಯುವ ಸಾಧನಗಳು, ಮಾಹಿತಿಗಳು ಮನುಷ್ಯರ ಮಾನಸಿಕ ಹಾಗೂ ದೈಹಿಕ ಸಂಗತಿಗಳ ಮೇಲೆ ಬೇರೆಯೇ ಪರಿಣಾಮಗಳನ್ನು ಬೀರುತ್ತಿವೆ. ವಿಶ್ವದಾದ್ಯಂತದ ಅನುಭವಗಳು ನಮಗೆ ಈ ಮಾಹಿತಿ ನೀಡುತ್ತಿವೆ. ಅದು ಭಾರತದ ಮೇಲೆಯೂ ಪರಿಣಾಮ ಬೀರಿದೆ. ಇಂದಿನ ನಗರದ ಮತ್ತು ಶಿಕ್ಷಣಕ್ಕೆ ತೆರೆದುಕೊಂಡ ಯುವ ಜನತೆ ಹೊರ ಪ್ರಪಂಚಕ್ಕೆ ಹೆಚ್ಚು ಹೆಚ್ಚು ತೆರೆದುಕೊಳ್ಳುತ್ತಿದ್ದು ತಮ್ಮ ದೇಹ, ಆಯ್ಕೆಗಳ ಕುರಿತು ಬೇರೆಯದೇ ಆದ ಆಲೋಚನೆಗಳನ್ನು ಹೊಂದಿದ್ದಾರೆ. ಲೈಂಗಿಕತೆ, ವೈಯಕ್ತಿಕ ಬದುಕು, ಆಯ್ಕೆ ಸ್ವಾತಂತ್ರ್ಯಗಳ ಕುರಿತು ಅವರ ಆಲೋಚನೆಗಳಲ್ಲಿ ಭಿನ್ನ ದೃಷ್ಟಿಕೋನ ಗೋಚರಿಸುತ್ತಿದೆ. ತಮ್ಮ ಬದುಕಿನ ಆಯ್ಕೆಗಳ ಬಗ್ಗೆ ಸಾಮಾನ್ಯವಾಗಿ ಸ್ಪಷ್ಟತೆಗಳಿರುತ್ತವೆ. ಆಧುನಿಕ ಜಗತ್ತಿನ ಜೀವನ ವಿಧಾನದಿಂದ ಮತ್ತು ಅಂತರ್ಜಾಲದ ಮೂಲಕ ಪಡೆಯುತ್ತಿರುವ ಮಾಹಿತಿಗಳ ಕಾರಣದಿಂದ ಮೊದಲಿಗಿಂತ ಮಕ್ಕಳು ಬೇಗ ಪ್ರೌಢಾವಸ್ಥೆಯನ್ನು ತಲುಪುತ್ತಿದ್ದಾರೆ. ಹದಿ ಹರೆಯದಲ್ಲಿ ಉತ್ಪತ್ತಿಯಾಗುವ ಹಾರ್ಮೋನುಗಳ ಕಾರಣದಿಂದ ಉಂಟಾಗುವ ಶಾರೀರಿಕ ಮತ್ತು ಮಾನಸಿಕ ವ್ಯತ್ಯಾಸಗಳಿಗೆ ಸರಿಯಾದ ಮಾರ್ಗದರ್ಶನ ನೀಡುವ ವ್ಯವಸ್ಥೆಯೊಂದು ನಮ್ಮಲ್ಲಿ ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ.

ಬಡತನದ ಬೇಗೆ-ಹೆಚ್ಚಿದ ಬಾಲ್ಯ ವಿವಾಹ:

ಇನ್ನು ಗ್ರಾಮೀಣ, ಬಡ, ಅವಕಾಶ ವಂಚಿತ, ಮತ್ತು ಅಂಚಿಗೆ ತಳ್ಳಲ್ಪಟ್ಟ ಸಮುದಾಯದ ಯುವತಿಯರಿರಲಿ, ಯುವಕರಿಗೂ ಆಯ್ಕೆ ಸ್ವಾತಂತ್ರ್ಯವೆಂಬುದು ಕನಸಿನ ಗಂಟೇ ಎನ್ನಬಹುದು. ಈ ಕಾರಣದಿಂದಲೇ ಇಂದಿಗೂ ಕಾನೂನಿನ ಪ್ರಕಾರ ನಿಷೇಧಿಸಲ್ಪಟ್ಟಿದೆಯಾದರೂ ಬಾಲ್ಯ ವಿವಾಹಗಳು ಅನಿಯಂತ್ರಿತವಾಗಿಯೇ ನಡೆಯುತ್ತಿವೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿಯಂತೂ ಲಾಕ್ ಡೌನ್ ಅವಧಿಯಲ್ಲಿಯೂ ಬಾಲ್ಯ ವಿವಾಹಗಳು ದೊಡ್ಡ ಸಂಖ್ಯೆಯಲ್ಲಿ ನಡೆದಿವೆ ಎಂದು ಎನ್.ಸಿ.ಆರ್.ಬಿ ಯ ವರದಿಗಳೇ ಹೇಳಿವೆ. ಕರ್ನಾಟಕವಂತೂ ಅದರಲ್ಲಿ ಮೊದಲ ಸ್ಥಾನದಲ್ಲಿದೆ ಎಂಬುದು ತಲೆ ತಗ್ಗಿಸುವ ಸಂಗತಿಯಾಗಿದೆ. ಇದೊಂದು ಪಿಡುಗೆಂದು ಸ್ವಾತಂತ್ರ ಪೂರ್ವದಲ್ಲಿಯೇ ನಿಷೇಧಿಸಲ್ಪಟ್ಟರೂ ಸ್ವಾತಂತ್ರ್ಯೋತ್ತರ ಏಳೂವರೆ ದಶಕಗಳಲ್ಲಿ ನಮಗಿದನ್ನು ತೆಗೆದು ಹಾಕಲಾಗಿಲ್ಲ. ಈ ದೇಶದಲ್ಲಿ ಈಗಲೂ ಬಾಲ್ಯ ವಿವಾಹಗಳಾಗಲು ಕಾರಣ ಬಹುತೇಕ ಹೆಣ್ಣು ಮಕ್ಕಳನ್ನು ಒಂದು ಹೊರೆ ಎಂದು ಭಾವಿಸುವುದು. ಮತ್ತು ಎಂದಿದ್ದರೂ ಅವಳು ಮನೆಯಿಂದ ಹೊರಗೆ ಹೋಗುವವಳು ಎಂದೇ ಪರಿಗಣಿಸಲಾಗುತ್ತದೆ. ‘ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ’ ಎಂಬ ನಾಣ್ಣುಡಿ ಇಂದಿಗೂ ಪ್ರಚಲಿತವೇ. ಮತ್ತು ಆ ಕಾರಣದಿಂದಲೇ ಬಾಲ್ಯದಿಂದಲೇ ಅವರಿಗೆ ಅಗತ್ಯವಿರುವ ಪೌಷ್ಟಿಕಾಂಶಯುಕ್ತ ಆಹಾರದ ಅಲಭ್ಯತೆಯ ಸಂದರ್ಭಗಳೂ ಇವೆ. ಇನ್ನು ಕಾಡುವ ಬಡತನ, ಒಂದು ಜೀವ ಕುಟುಂಬದಿಂದ ಹೊರಗೆ ಹೋದರೆ ಅಷ್ಟು ಆಹಾರ ಮತ್ತು ಖರ್ಚು ಉಳಿತಾಯವಾಗುತ್ತದೆಂಬ ಭಾವನೆ ಅಥವಾ ಕಟು ವಾಸ್ತವ ಸಂಗತಿಯಿದೆ.

ಅಸಮರ್ಪಕ ವ್ಯವಸ್ಥೆಯನ್ನು ಸರಿಪಡಿಸಲಾರದೇ ಅಪ್ರಬುದ್ಧತೆಯ ತೀರ್ಮಾನ:

ಇದರ ಜೊತೆಯೇ ಈ ದೇಶದಲ್ಲಿ ಅಪೌಷ್ಟಿಕತೆ, ರಕ್ತಹೀನತೆ, ಕುಬ್ಜತೆ, ಬೆಳವಣಿಗೆ ಹೀನತೆಗಳು, ಬ್ಲೂ ಬೇಬಿಗಳು ಈಗಲೂ ದೊಡ್ಡ ಸಮಸ್ಯೆಯೇ. ಇದಕ್ಕೆ ಪರಿಹಾರವನ್ನು ಉತ್ತಮ ಆರೋಗ್ಯ ವ್ಯವಸ್ಥೆ, ಸರಿಯಾದ ಪೌಷ್ಟಿಕ ಆಹಾರ ಪೂರೈಕೆ, ಸಮರ್ಪಕ ಬದುಕಿನ ವ್ಯವಸ್ಥೆಗಳನ್ನು ಮಾಡುವ ಮೂಲಕ ಸರಿ ಪಡಿಸಬೇಕಲ್ಲವೇ? ಜೊತೆಗೆ ಸರ್ವರಿಗೂ ಸಮರ್ಪಕ ಶಿಕ್ಷಣ ಮತ್ತು ತಿಳುವಳಿಕೆಗಳ ಮೂಲಕ ಅಗತ್ಯವಿರುವ ಬದಲಾವಣೆಗಳಿಗೆ ಸಮಾಜವನ್ನು ಸಿದ್ಧಗೊಳಿಸಬೇಕಲ್ಲದೇ ಅಸಮರ್ಪಕ ವಿಧಾನಗಳ ಮೂಲಕವಲ್ಲ.

ಇನ್ನು ಅಪೌಷ್ಟಿಕತೆ, ರಕ್ತ ಹೀನತೆ ಎಂಬುದು ಈ ದೇಶದ ಬಹುತೇಕ ಹೆಣ್ಣು ಮಕ್ಕಳ ಬದುಕಿನ ಭಾಗವೇ ಆಗಿದೆ. ದೇಶದ 58.6% ಮಕ್ಕಳು, 53.2% ಸಾಮಾನ್ಯ ಮಹಿಳೆಯರು, 50.4% ಗರ್ಭಿಣಿ ಸ್ತ್ರೀಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ ಎಂದು 2016 ರ ಆರೋಗ್ಯ ಸಮೀಕ್ಷೆ (ಎನ್.ಎಫ್.ಎಚ್.ಎಸ್) ವರದಿಗಳು ಹೇಳಿವೆ. ರಕ್ತ ಹೀನತೆಯ ನಿಯಂತ್ರಣಕ್ಕೆ ಕಳೆದ 50 ವರ್ಷಗಳ ಪ್ರಯತ್ನದ ನಂತರವೂ ಈ

ಪುಟ 12 ಕ್ಕೆ



ಆಳುವವರ ಹುಸಿ ಆಶಾವಾದದಿಂದಾಗಿ ಹತ್ತಾರು ಸಾವಿರ ಜನರು ಪ್ರಾಣಕ್ಕೆ ಸಂಚಕಾರದೊಂದಿಗೆ ಆರಂಭವಾದ 2021ರ ವರ್ಷ ರೈತರ ಧೀರೋದಾತ್ತ ಹೋರಾಟದ ವಿಜಯದೊಂದಿಗೆ ಮುಗಿದಿದೆ. ಕಿಸಾನ್ ಚಳವಳಿಯು ಜಂಟಿ ಹೋರಾಟಗಳಲ್ಲಿ ಕಾರ್ಮಿಕರು ಮತ್ತು ರೈತರ ಬೆಳೆಯುತ್ತಿರುವ ಒಗ್ಗಟ್ಟನ್ನು ತೋರಿಸಿಕೊಟ್ಟಿದೆ. ಭವಿಷ್ಯದಲ್ಲಿ ಹಿಂದುತ್ವ-ಕಾರ್ಪೋರೇಟ್ ಆಡಳಿತದ ವಿರುದ್ಧದ ಹೋರಾಟ ಹಾಗೂ ಚಳವಳಿಗಳಿಗೆ ಅದು ಭದ್ರ ಬುನಾದಿ ಇರಿಸಲಿದೆ. ಈ ಶುಭ ಶಕುನದೊಂದಿಗೆ 2022 ಹೊಸ ವರ್ಷ ಆರಂಭವಾಗಿದೆ.



ಹೊಸ ನಿರೀಕ್ಷೆಯೊಂದಿಗೆ ಹೊಸ ವರ್ಷಾರಂಭ

***ಪ್ರಕಾಶ್ ಕಾರಟ್**



ಈಗಷ್ಟೆ ನಾವು ಬೀಳ್ಕೊಡುತ್ತಿರುವ 2021ನೇ ವರ್ಷ ಸಂಕಟ ಹಾಗೂ ಅಗ್ನಿಪರೀಕ್ಷೆಗಳಿಂದ ಕೂಡಿದ್ದ ವರ್ಷವಾಗಿತ್ತು. ಆದರೆ, ಅದು ಜನರಿಗೆ ಗೆಲುವಿನ ವರ್ಷವಾಗಿ ಅಂತ್ಯಗೊಂಡಿದೆ. ಡೆಲ್ಟಾ ತಳಿಯಿಂದ ಉಂಟಾದ ಕೋವಿಡ್‌ನ ಎರಡನೇ ಅಲೆ ಮಾರ್ಚ್‌ನಿಂದ ಮೇ ವರೆಗೆ ಜನರನ್ನು ಅತಿಯಾಗಿ ಕಾಡಿತ್ತು. ವೈರಸ್ ಮೇಲೆ ಜಯ ಸಾಧಿಸಲಾಗಿದೆಯೆಂದು ಮೋದಿ ಸರ್ಕಾರ ಜನವರಿಯಲ್ಲೇ ಘೋಷಿಸಿದ್ದರಿಂದ ಸೋಂಕಿನ ದಾಳಿ ಎದುರಿಸಲು ದೇಶ ಸಿದ್ಧವಾಗಿರಲಿಲ್ಲ. ಈ ಹುಸಿ ಆಶಾವಾದದಿಂದಾಗಿ ಹತ್ತಾರು ಸಾವಿರ ಜನರು ಪ್ರಾಣ ಕಳೆದುಕೊಳ್ಳಬೇಕಾಯಿತು. ಅನೇಕ ಜನರ ಸಾವು ದಾಖಲಾಗದೇ ಹೋಗಿರುವ ಸಂಭವವೂ ಇದೆ. ಆಮ್ಲಜನಕಕ್ಕಾಗಿ ಜನರು ಪರದಾಡಿದ್ದು ಹಾಗೂ ಗಂಗಾ ನದಿಯಲ್ಲಿ ಹೆಣಗಳು ತೇಲಾಡಿದ್ದ ದೃಶ್ಯಗಳು ಜಗತ್ತಿನಾದ್ಯಂತ ಟಿವಿ ವಾಹಿನಿಗಳಲ್ಲಿ ಬಿತ್ತರಗೊಂಡಿದ್ದವು. ಆದರೆ ದೇಶವನ್ನು ಈ ಪರಿಯಾಗಿ ದುರಂತಕ್ಕೆ ತಳ್ಳಿದ ಬಗ್ಗೆ ಪಶ್ಚಾತಾಪ ಅಥವಾ ವಿಷಾದದ ಲವಲೇಶವೂ ಪ್ರಧಾನಿಯಿಂದ ವ್ಯಕ್ತವಾಗಲಿಲ್ಲ.

ಲಸಿಕೆ ಕುರಿತು ಕೂಡ ಇದೇ ರೀತಿಯ ಅವಾಂತರಗಳು, ನಡೆದವು. ಸಕಾಲದಲ್ಲಿ ಸಾಕಷ್ಟು ಲಸಿಕೆ ಖರೀದಿ, ದೇಶದಲ್ಲಿ ವ್ಯಾಕ್ಸಿನ್ ಉತ್ಪಾದನೆ ಹೆಚ್ಚಿಸುವುದು ಹಾಗೂ ಅದರ ತ್ವರಿತ – ಸಮಾನ ವಿತರಣೆ ಈ ಎಲ್ಲ ವಿಚಾರಗಳಲ್ಲಿ ಗೊಂದಲದ ಗೂಡು ನಿರ್ಮಾಣವಾಗಿತ್ತು. ಇದೇ ಮೊದಲ ಬಾರಿಗೆ ಉಚಿತ ಲಸಿಕೆ ಬದಲು ಹಣ ಕೊಟ್ಟು ಲಸಿಕೆ ಹಾಕಿಸಿಕೊಳ್ಳುವ ಪದ್ಧತಿ ಪರಿಚಯಿಸಲಾಯಿತು. 18 ವರ್ಷ ಮೇಲ್ಪಟ್ಟ ಎಲ್ಲ ವಯಸ್ಕರಿಗೆ ಡಿಸೆಂಬರ್ 31ರೊಳಗೆ ಎರಡೂ ಡೋಸ್‌ನೊಂದಿಗೆ ಸಂಪೂರ್ಣವಾಗಿ ಲಸಿಕೆ ಹಾಕಲಾಗುತ್ತದೆ ಎಂದು ಸುಪ್ರೀಂ ಕೋರ್ಟಿಗೆ ಕೇಂದ್ರ ಸರ್ಕಾರ ತಿಳಿಸಿತು. ಅದು ಅಸಾಧ್ಯ ಎನ್ನುವುದು ಎಲ್ಲರಿಗೂ ಗೊತ್ತಿದ್ದ ವಿಚಾರವಾಗಿತ್ತು. ಡಿಸೆಂಬರ್ ಅಂತ್ಯದೊಳಗೆ, ಶೇಕಡ 65ಕ್ಕಿಂತ ಕಡಿಮೆ ವಯಸ್ಕರು ಸಂಪೂರ್ಣ ಲಸಿಕೆ ಪಡೆದಿದ್ದಾರೆ. ಅಂದರೆ ಶೇಕಡ 35ಕ್ಕೂ ಹೆಚ್ಚಿನ ಕೊರತೆ ಕಾಡಿದೆ. ಒಮಿಕ್ರಾನ್ ತಳಿ ಇಡೀ ದೇಶವನ್ನು ಆವರಿಸುವ ಅಪಾಯದ ನಡುವೆ ಇಂಥ ಸನ್ನಿವೇಶವಿದೆ.

ಕಾರ್ಪೋರೇಟ್ ಅಜೆಂಡಾ

ಎರಡನೇ ಅಲೆ ಎದುರಿಸಲು ಯೋಜನೆ ರೂಪಿಸುವುದು ಹಾಗೂ ಆರೋಗ್ಯ ವ್ಯವಸ್ಥೆಯನ್ನು ಸಜ್ಜುಗೊಳಿಸುವಲ್ಲಿ ಮತ್ತು ಒಂದು ಸಮಗ್ರ ಲಸಿಕೆ ನೀತಿ ರೂಪಿಸುವಲ್ಲಿ ಮೋದಿ ಸರ್ಕಾರ ವಿಫಲವಾಗಿದ್ದು ಮಾತ್ರವಲ್ಲದೆ ಇಂಥ ಅನಾಹುತಕಾರಿ ಪರಿಸ್ಥಿತಿಯನ್ನು ಕೂಡ ಸರ್ಕಾರ ತನ್ನ ವಿಭಜನಕಾರಿ ಹಾಗೂ ಕಾರ್ಪೋರೇಟ್–ಪರ ಅಜೆಂಡಾವನ್ನು ಮುಂದೊತ್ತಲು ಬಳಸಿಕೊಂಡಿದ್ದು ಎದ್ದು ಕಾಣುತ್ತದೆ.

ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಿಂದ 1.75 ಲಕ್ಷ ಕೋಟಿ ರೂಪಾಯಿ ಬಂಡವಾಳ ವಾಪಸ್ ಪಡೆಯುವ ಗುರಿಯನ್ನು ಕೇಂದ್ರ ಬಜೆಟ್‌ನಲ್ಲಿ ನಿಗದಿಪಡಿಸಲಾಯಿತು. ಇದರ ಜೊತೆಯಲ್ಲೇ ಆರು ಲಕ್ಷ ಕೋಟಿ ರೂಪಾಯಿ ಮೊತ್ತದ ಸರ್ಕಾರಿ ಆಸ್ತಿಪಾಸ್ತಿ ನಗದೀಕರಿಸುವ, ಅಂದರೆ ಮಾರಾಟ ಮಾಡುವ ಯೋಜನೆ ಪ್ರಕಟಿಸಲಾಯಿತು. ಬಂದರುಗಳು, ವಿಮಾನ ನಿಲ್ದಾಣಗಳು, ರೈಲ್ವೆ ಹಳಿಗಳು, ಭೂಮಿ ಮತ್ತು ಇತರ ಸಾರ್ವಜನಿಕ ಸೊತ್ತುಗಳನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವ ಹೆಸರಿನಲ್ಲಿ ಮಾರಾಟ ಮಾಡುವುದು ಎಂದೇ ಇದರ ಅರ್ಥವಾಗಿದೆ. ಕಾರ್ಪೋರೇಟ್ ಕಂಪನಿಗಳು ಸರ್ಕಾರಿ ಬ್ಯಾಂಕ್‌ಗಳಿಂದ ಪಡೆದಿದ್ದ ಲಕ್ಷಾಂತರ ಕೋಟಿ ರೂಪಾಯಿ ಮೊತ್ತದ ಸಾಲಗಳನ್ನು ಮನ್ನಾ ಮಾಡಲಾಯಿತು.

ಹಣಕಾಸು ಕ್ಷೇತ್ರದಲ್ಲಿ ನೋಡುವುದಾದರೆ, ಎರಡು ಸಾರ್ವಜನಿಕ ವಲಯದ ಬ್ಯಾಂಕ್ ಖಾಸಗೀಕರಿಸಲು ಹಾಗೂ ಎಲ್‌ಐಸಿಯ ಷೇರುಗಳನ್ನು ಮಾರಲು ಸರ್ಕಾರ ಮುಂದಾಯಿತು. ಅಂಬಾನಿ ಮತ್ತು ಅದಾನಿಗೆ ತೋರಿದ ಔದಾರ್ಯದಿಂದಾಗಿ ಅವರಿಬ್ಬರೂ ಕೋವಿಡ್‌ನ ಸಂಕಟದ ಕಾಲದಲ್ಲೂ ಅಸಹ್ಯಕರ ಲಾಭವನ್ನು ದೋಚಿದರು. 2021ರಲ್ಲಿ ಅಂಬಾನಿಯ ಒಟ್ಟು ಆಸ್ತಿ 92.7 ಬಿಲಿಯ ಡಾಲರ್‌ಗೆ ಹಾಗೂ ಅದಾನಿಯ ಸಂಪತ್ತು 78.7 ಬಿಲಿಯ ಡಾಲರ್‌ಗೆ ಏರಿತು.

ಜನರ ಮೇಲೆ ಹೆಚ್ಚೆಚ್ಚು ಹೊರೆಗಳನ್ನು ಹೇರಲಾಯಿತು. ಕೋವಿಡ್ ಸಾಂಕ್ರಾಮಿಕತೆಯ ಮಾರಕ ಎರಡನೇ ಅಲೆಯ ವೇಳೆ ನಿರುದ್ಯೋಗ ಮತ್ತು ಬೆಲೆಯೇರಿಕೆ ಬಿಸಿ ಜನರನ್ನು ಬಹಳವಾಗಿ ತಟ್ಟಿತು. ಸಂಕಷ್ಟ ದುಪ್ಪಟ್ಟುಗೊಂಡಿತು. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಸತತ ಏರಿಕೆಯಿಂದ ಉಂಟಾದ ಹಣದುಬ್ಬರದಿಂದಾಗಿ ಜನರ ಅಲ್ಪಸ್ವಲ್ಪ ಆದಾಯವೂ ಕರಗಿ ಹೋಗಿ ಕೋಟ್ಯಂತರ ಜನರು ಬಡತನದ ಕೂಪಕ್ಕೆ ಬಿದ್ದರು. ಉದ್ಯೋಗ ಪ್ರಮಾಣ ಕುಸಿಯುತ್ತಿರುವುದರಿಂದ ಆದಾಯ ಕಡಿಮೆಯಾಗಿದ್ದು ಕೂಡ ಬಡತನದ ಬೇಗೆ ಹೆಚ್ಚಾಗಲು ಕಾರಣವಾಯಿತು. 2020–21ರ ಕೋವಿಡ್ ಮಹಾಸೋಂಕಿನ ಅವಧಿಯಲ್ಲಿ ಸುಮಾರು 7ರಿಂದ 8 ಕೋಟಿ ಜನರು ಹೆಚ್ಚುವರಿಯಾಗಿ ಬಡತನಕ್ಕೆ ಜಾರಿದ್ದಾರೆ ಎಂದು ಅಂದಾಜು ಮಾಡಲಾಗಿದೆ.

ಭದ್ರತಾ ಖಯಾಲಿಯ ಪ್ರಭುತ್ವ

ಸರ್ಕಾರ ಆರ್‌ಎಸ್‌ಎಸ್‌ನ ಹಿಂದುತ್ವ ಅಜೆಂಡಾವನ್ನು ಹೆಚ್ಚು ಹುಮ್ಮಸ್ಸಿನಿಂದ ಜಾರಿಗೊಳಿಸಿದೆ. ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಬರ್ಖಾಸ್ತುಗೊಳಿಸಿದ ಹಾಗೂ ಅದರ ವಿಶೇಷ ಸ್ಥಾನಮಾನ ರದ್ದುಪಡಿಸಿದ ನಂತರ ರಾಜ್ಯದ ಅಸ್ಮಿತೆ ಮತ್ತು ಜನಸಂಖ್ಯೆ ಹಾಗೂ ರಾಜಕೀಯ ಸಂಯೋಜನೆಯನ್ನು ಬದಲಾಯಿಸಲು ಸರ್ಕಾರ ಹೊರಟಿದೆ. ಕಾಶ್ಮೀರ ಕಣಿವೆಯ ಸ್ಥಾನಮಾನ ಹಾಗೂ ಅದರ ರಾಜಕೀಯ ಪ್ರಾತಿನಿಧ್ಯವನ್ನು ಕಡಿಮೆ ಮಾಡುವ ಉದ್ದೇಶದಿಂದ ಅಸೆಂಬ್ಲಿ ಸೀಟುಗಳ ಮರುವಿಂಗಡಣೆ ಮಾಡಲಾಗುತ್ತಿದೆ. ಮರುವಿಂಗಡಣೆ, ಚುನಾವಣೆ ಹಾಗೂ ಅದರ ನಂತರವೇ ರಾಜ್ಯ ಸ್ಥಾನಮಾನ ಎಂಬ ವೇಳಾಪಟ್ಟಿಯನ್ನು ಕೇಂದ್ರ ಗೃಹ ಸಚಿವ ಅಮಿತ್ ಷಾ ರೂಪಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಸಮಗ್ರತೆಯನ್ನು ನಾಶ ಮಾಡಿ ಮೊಟಕುಗೊಳಿಸಿದ ರಾಜ್ಯ ಸ್ಥಾನಮಾನ ಕೊಡುವ ಹುನ್ನಾರ ಇದಾಗಿದೆ.

ಈ ನಡುವೆ, ಅಲ್ಲಿ ನಾಗರಿಕ ಹಕ್ಕುಗಳ ದಮನ ಸತತವಾಗಿ ಮುಂದುವರಿದಿದೆ. ಕಾಶ್ಮೀರದಲ್ಲಿ ಭದ್ರತಾ ಪಡೆಗಳೇ ಆಡಳಿತ ನಡೆಸಿದರೆ ಈಶಾನ್ಯ ರಾಜ್ಯಗಳಲ್ಲಿ ಕೂಡ ಅದೇ ಅನ್ವಯವಾಗಿದೆ. ನಾಗಾಲ್ಯಾಂಡ್‌ನಲ್ಲಿ 13 ಮುಗ್ಧ ಜನರನ್ನು ಭಾರತೀಯ ಸೇನೆ ಗುಂಡಿಟ್ಟು ಕೊಂದು ಹಾಕಿದ್ದು ನೋಡಿದರೆ ಮುಂದೆ ಬರಲಿರುವ ರಾಷ್ಟ್ರೀಯ ಭದ್ರತೆಯ ಆಡಳಿತ ಹೇಗಿದ್ದೀತು ಎನ್ನುವುದನ್ನು ಕಲ್ಪಿಸಿಕೊಳ್ಳುವಂತಿದೆ.

ಬಾಹ್ಯ ಹಾಗೂ ಆಂತರಿಕ ಶತ್ರುಗಳ ವಿರುದ್ಧ ಹೋರಾಡಲು ಬಲಿಷ್ಠ ಭದ್ರತಾ ಖಯಾಲಿಯ ಪ್ರಭುತ್ವ ಸ್ಥಾಪಿಸುವುದು ಹಿಂದುತ್ವ ಆಡಳಿತಗಾರರಿಗೆ ಅಗತ್ಯವಿದೆ. ಆಂತರಿಕವಾಗಿ, ಮುಸ್ಲಿಮರೇ ಅದರ ಶತ್ರು ಎನ್ನುವುದು ಸ್ಪಷ್ಟ.ನಿರಂತರವಾಗಿ ದ್ವೇಷಭಾಷಣ, ಸಾಮಾಜಿಕ ಮಾಧ್ಯಮದಲ್ಲಿ ಅಪಪ್ರಚಾರ ಹಾಗೂ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ಬಿಜೆಪಿ ನಾಯಕರು ಘೂಬಿಡುತ್ತಿರುವುದು ನಡೆದೇ ಇದೆ. ಇದರ ಫಲವಾಗಿ, ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಅಲ್ಪಸಂಖ್ಯಾತರ ವಿರುದ್ಧ ಸರಣಿ ಕಾನೂನುಗಳು ಅಂಗೀಕಾರವಾಗಿವೆ. ಉತ್ತರ ಪ್ರದೇಶ, ಮಧ್ಯ ಪ್ರದೇಶ; ಹಾಗೂ ತೀರಾ ಈಚೆಗೆ ಕರ್ನಾಟಕದಲ್ಲಿ ಮತಾಂತರ ನಿಷೇಧ ಕಾನೂನು ಅಂಗೀಕರಿಸಲಾಗಿದೆ. ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶದಲ್ಲಿ "ಲವ್ ಜಿಹಾದ್'ಅನ್ನು ಗುರಿ ಮಾಡಿವೆ, ಅಂತರ್‌ಧರ್ಮೀಯ ಮದುವೆ ಕಾರಣಕ್ಕೆ ಮುಸ್ಲಿಂ ಯುವಜನರನ್ನು ಬಂಧಿಸಲಾಗಿದೆ. ಕರ್ನಾಟಕದಲ್ಲಿ ಕ್ರೈಸ್ತರ ವಿರುದ್ಧ ಗಮನ ಕೇಂದ್ರೀಕರಿಸಲಾಗಿದೆ.

ಜೀವನೋಪಾಯದ ಮೇಲೆ ದಾಳಿ

ಮುಸ್ಲಿಮರು ಹಾಗೂ ಅವರ ಜೀವನೋಪಾಯದ ಮೇಲಿನ ದಾಳಿ ಅವ್ಯಾಹತವಾಗಿರುವ ನಡುವೆ ಈ ವರ್ಷ ಕ್ರೈಸ್ತರು ಹಾಗೂ ಅವರ ಪೂಜಾ ಸ್ಥಳಗಳ ಮೇಲಿನ ದಾಳಿಗಳಲ್ಲಿ ತೀವ್ರ ಏರಿಕೆಯಾಗಿದೆ. ಕ್ರಿಸ್ಮಸ್ ದಿನದಂದೂ ಇಂಥ ಆಕ್ರಮಣ ನಡೆದಿವೆ. ಮದರ್ ಥೆರೇಸಾರ ಮಿಷನರೀಸ್ ಆಫ್ ಚಾರಿಟೀಸ್‌ನ ಎಫ್‌ಸಿಆರ್‌ಎ (ವಿದೇಶಿ ದೇಣಿಗೆ) ಅನುಮತಿಯನ್ನು ತಿರಸ್ಕರಿಸಲಾಗಿದೆ.

ಒಟ್ಟಾರೆ ಹೇಳಬೇಕೆಂದರೆ, ಈ ಇಡೀ ವರ್ಷ ಕೋವಿಡ್ ಮಹಾಸೋಂಕನ್ನು ಸರ್ಕಾರ ಕೆಟ್ಟದಾಗಿ ನಿರ್ವಹಿಸಿದ್ದು, ನಿರುದ್ಯೋಗ ಹಾಗೂ ಬೆಲೆಯೇರಿಕೆಗಳಿಂದ ಜನತೆಯ ಮೇಲಿನ ಅಪಾರ ಹೊರೆ ಹಾಗೂ ಅಲ್ಪಸಂಖ್ಯಾತರ ಮೇಲೆ ಎಲ್ಲ ಬಗೆಯ ದಾಳಿಗಳನ್ನು ಕಂಡಿದ್ದೇವೆ.

ಪ್ರತಿರೋಧ ಆರಂಭವಾಗಿದೆ

ಈ ಎಲ್ಲ ಸಂಕಟಗಳ ನಡುವೆಯೇ ಜನರು ಅವುಗಳನ್ನು ಎದುರಿಸಿ ಪ್ರತಿರೋಧಿಸಲು ಆರಂಭಿಸಿದ್ದಾರೆ. ಏಪ್ರಿಲ್‌ನಲ್ಲಿ ನಡೆದ ಐದು ರಾಜ್ಯ ವಿಧಾನಸಭೆಗಳಲ್ಲಿ –ಬಂಗಾಳ, ತಮಿಳುನಾಡು ಮತ್ತು ಕೇರಳ– ಬಿಜೆಪಿ ಹಿನ್ನಡೆ ಅನುಭವಿಸಿದೆ. ಅಸ್ಸಾಂ ರಾಜ್ಯದಲ್ಲಿ ಮಾತ್ರವೇ ತುಂಬಾ ಕಡಿಮೆ ಅಂತರದಲ್ಲಿ ಅಧಿಕಾರ ಉಳಿಸಿಕೊಳ್ಳಲು ಅದಕ್ಕೆ ಸಾಧ್ಯವಾಗಿದೆ. 2021ರ ಕೊನೆಯ ಚುನಾವಣೆ ಎಂದು ಹೇಳಬಹುದಾದ ಕೇಂದ್ರಾಡಳಿತ ಪ್ರದೇಶ ಚಂಡೀಗಢದ ಮುನಿಸಿಪಲ್ ಕಾರ್ಪೊರೇಶನ್ ಚುನಾವಣೆಯಲ್ಲಿ ಬಿಜೆಪಿ ಮಣ್ಣು ಮುಕ್ಕಿದೆ. ಎಲ್ಲ ಸಂಪನ್ಮೂಲ ಬಳಸಿದ್ದರೂ ಹಾಗೂ ಹಿಂದುತ್ವ–ಕೇಂದ್ರಿತ ಪ್ರಚಾರ ನಡೆಸಿದರೂ ಅದಕ್ಕೆ ಗೆಲುವು ಸಾಧ್ಯವಾಗಲಿಲ್ಲ. ಅಲ್ಲಿ ಆಮ್ ಆದ್ಮಿ ಪಕ್ಷ (ಆಪ್) ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿ ಬಿಜೆಪಿ ಪರಾಭವಗೊಂಡಿದೆ.

ಹೋರಾಟಗಳು ಹಾಗೂ ಸಾಮೂಹಿಕ ಪ್ರತಿಭಟನೆಗಳ ಪರ್ವದ ನಡುವೆ ಈ ಚುನಾವಣಾ ಹಿನ್ನಡೆಗಳು ದಾಖಲಾಗಿವೆ. 2021ರ ವರ್ಷ ಭಾರತದ ಸಾಮೂಹಿಕ ಹೋರಾಟಗಳ ಇತಿಹಾಸದಲ್ಲಿ ರೈತರ ಧೀರೋದಾತ್ತ ಹೋರಾಟ ಪ್ರಮುಖವಾಗಿ ದಾಖಲಾದ ವರ್ಷ. ರಾಷ್ಟ್ರ ರಾಜಧಾನಿ ದೆಹಲಿಯ ಸುತ್ತಮುತ್ತ ಹಲವು ಸ್ಥಳಗಳಲ್ಲಿ ಹತ್ತಾರು ಸಾವಿರ ರೈತರು ಒಂದು ವರ್ಷದಿಂದ ನಡೆಸಿದ ನಿರಂತರ ಹೋರಾಟಕ್ಕೆ ಮೋದಿ ಸರ್ಕಾರ ಮಣಿದು ಮೂರು ಕೃಷಿ ಕಾನೂನುಗಳನ್ನು ವಾಪಸ್ ಪಡೆದಿದೆ. ರೈತ ಸಮುದಾಯದ ರಾಜಿರಹಿತ ಐಕ್ಯ ಹೋರಾಟ ಹಾಗೂ ದೃಢಸಂಕಲ್ಪದ ಮುಂದೆ ಸರ್ಕಾರ ತಲೆಬಾಗಲೇ ಬೇಕಾಯಿತು. 'ಸಂಘಟಿತರಾಗಿ ಹೋರಾಡಿದರೆ ಗೆಲುವು ನಮ್ಮದೇ' ಎಂಬ ಸ್ಪಷ್ಟ ಸಂದೇಶವನ್ನು ಈ ವಿಜಯ ದೇಶದ ದುಡಿಯುವ ವರ್ಗಕ್ಕೆ ರವಾನಿಸಿದೆ.

ಕಿಸಾನ್ ಚಳವಳಿಯ ಜಂಟಿ ಹೋರಾಟಗಳಲ್ಲಿ ಕಾರ್ಮಿಕರು ಮತ್ತು ರೈತರ ಬೆಳೆಯುತ್ತಿರುವ ಒಗ್ಗಟ್ಟನ್ನು ತೋರಿಸಿಕೊಟ್ಟಿದೆ. ಭವಿಷ್ಯದಲ್ಲಿ ಹಿಂದುತ್ವ–ಕಾರ್ಪೋರೇಟ್ ಆಡಳಿತದ ವಿರುದ್ಧದ ಹೋರಾಟ ಹಾಗೂ ಚಳವಳಿಗಳಿಗೆ ಅದು ಭದ್ರ ಬುನಾದಿ ಇರಿಸಲಿದೆ. ಈ ಶುಭ ಶಕುನದೊಂದಿಗೆ ಹೊಸ ವರ್ಷ ಆರಂಭವಾಗಿದೆ.

*** ಅನು: ವಿಶ್ವ**




ಮರೆಯಲಸಾಧ್ಯ
ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಕರ್ನಾಟಕದ ರಾಜಕೀಯ ಪರಿಸ್ಥಿತಿ

(ಸಿಪಿಐ-ಎಂ ಕರ್ನಾಟಕ 23ನೆಯ ರಾಜ್ಯ ಸಮ್ಮೇಳನದ ಕರಡು ವರದಿಯ ಆಯ್ದ ಭಾಗಗಳು)

ರಾಜ್ಯದ ವಿಧಾನ ಸಭಾ ಚುನಾವಣೆ-2018:



ಬಿಜೆಪಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಲು ಕಾರಣಗಳು:

ಸಂಘಪರಿವಾರದ ಕೋಮು ಧ್ರುವೀಕರಣ ಬಿಜೆಪಿಯನ್ನು ಬಲಪಡಿಸಿತು. ಜಾತ್ಯಾತೀತ ಮತಗಳ ವಿಭಜನೆ ಬಿಜೆಪಿಗೆ ನೆರವಾಯಿತು. ಮತಾಂಧತೆಯನ್ನು ಪ್ರಚೋದಿಸುವ ಎಸ್‌ಡಿಪಿಐ ಕರಾವಳಿಯಲ್ಲಿ ನಾಮಪತ್ರಗಳನ್ನು ಸಲ್ಲಿಸಿ ನಂತರ ಕಾಂಗ್ರೆಸ್ ಪರವಾಗಿ ವಾಪಸ್ ಪಡೆದದ್ದು ಬಿಜೆಪಿಗೆ ಹಿಂದುತ್ವ ಪರ ಮತಗಳನ್ನು ಕ್ರೋಡೀಕರಿಸಲು ಸಹಾಯವಾಯಿತು. ಕೆಜೆಪಿಯನ್ನು ಬಿಜೆಪಿಯೊಳಗೆ ವಿಲೀನಗೊಳಿಸಿದ್ದು ಬಿಜೆಪಿಗೆ ಲಾಭವಾಯಿತು. ಲಿಂಗಾಯತ ಪ್ರಾಬಲ್ಯದ ಪ್ರದೇಶದಲ್ಲಿ ವಿಲೀನಗೊಳಿಸಿದ್ದು ಬಿಜೆಪಿಗೆ ಲಾಭವಾಗಿದೆ. ಲಿಂಗಾಯತ ಪ್ರಾಬಲ್ಯದ ಪ್ರದೇಶದಲ್ಲಿ ಯಡಿಯೂರಪ್ಪನವರನ್ನು ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಿದ್ದು ಬಿಜೆಪಿಗೆ ಲಾಭವಾಯಿತು. ನವ ಮತದಾರರು ಮತ್ತು ಯುವಜನರು ಬಿಜೆಪಿಯನ್ನು ಗಣನೀಯವಾಗಿ ಬೆಂಬಲಿಸಿದರು. ಮುದ್ರಣ/ದೃಶ್ಯ/ಸಾಮಾಜಿಕ ಜಾಲತಾಣವನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಳ್ಳಲಾಯಿತು. ವ್ಯಾಪಕವಾಗಿ ಹಣವನ್ನು ವಿತರಣೆ ಮಾಡಲಾಯಿತು. ಇತ್ತ ಸಿಪಿಐ(ಎಂ) ಮತ್ತು ಇತರ ಎಡ ಮತ್ತು ಪ್ರಗತಿಪರ ಶಕ್ತಿಗಳು ನಿರಂತರವಾಗಿ ನಡೆಸಿದ ಪ್ರಚಾರ ಪ್ರಕ್ಷೋಭೆ ಬಿಜೆಪಿ ಪೂರ್ಣಬಹುಮತವನ್ನು ಪಡೆಯುವುದನ್ನು ತಡೆಯಲು ಯಶಸ್ವಿಯಾಗಿದೆ.

ಕಾಂಗ್ರೆಸ್ ಹಿನ್ನಡೆಗೆ ಪ್ರಮುಖ ಕಾರಣಗಳು

ಕಾಂಗ್ರೆಸ್ ಆಡಳಿತ ಜನಪರವಾಗಿರಲಿಲ್ಲ, ಜನವಿರೋಧಿಯಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳನ್ನೇ ಅದು ಜಾರಿಗೆ ತಂದಿತು. ಅದರ ಆಂತರಿಕ ಕಿತ್ತಾಟದಿಂದ ಕಾಂಗ್ರೆಸ್ ಜನರ ವಿಶ್ವಾಸವನ್ನು ಕಳೆದುಕೊಂಡಿತು. ಕೋಮು ಸೌಹಾರ್ದತೆಗೆ ನಿರಂತರ ಧಕ್ಕೆ ತರುತ್ತಿದ್ದ ಸಂಘಪರಿವಾರದ ಶಕ್ತಿಗಳನ್ನು ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸುವಲ್ಲಿ ಅದು ವಿಫಲವಾಯಿತು. ಅಲ್ಪ ಸಂಖ್ಯಾತರ ಮೇಲೆ ಹಿಂದುತ್ವ ಶಕ್ತಿಗಳ ಆಕ್ರಮಣ ದೃಢವಾಗಿ ತಡೆಗಟ್ಟದಿರುವುದು, ಸದಾಶಿವ ಆಯೋಗದ ಒಳ ಮೀಸಲಾತಿ ಕುರಿತಾದ ವರದಿ ದಲಿತರನ್ನು ವಿಭಜಿಸಲು ಕಾರಣವಾಗಿದ್ದು ಕಾಂಗ್ರೆಸ್ ವಿರುದ್ಧ ಜನರ ಅತೃಪ್ತಿ ತೀವ್ರಗೊಳ್ಳಲು ಕಾರಣವಾಯಿತು.

ಜೆಡಿ(ಎಸ್) ಸಾಧನೆ ನಗಣ್ಯ:

ಹೆಸರು ಜಾತ್ಯಾತೀತ ಎಂದಿದ್ದರೂ ಕೋಮುವಾದದ ವಿರುದ್ಧ ದೃಢವಾದ ಹೋರಾಟ ನಡೆಸುವಲ್ಲಿ ಅದು ಉದಾಸೀನವಾಗಿರುವುದರಿಂದ ಕರಾವಳಿಯಲ್ಲಿ ಮತ್ತು ಮಲೆನಾಡಿನಲ್ಲಿ ಒಂದು ಸ್ಥಾನವನ್ನೂ ಗೆಲ್ಲಲಾಗಲಿಲ್ಲ. ಕಾಂಗ್ರೆಸಿನ ಅಹಿಂದಾ ರಾಜಕಾರಣದಿಂದಾಗಿ ಜೆಡಿ(ಎಸ್)ಗೆ ದಕ್ಷಿಣ ಕರ್ನಾಟಕದ ಒಕ್ಕಲಿಗ ಭೂಮಾಲಕ ಬಂಡವಾಳಶಾಹಿ ಸಮುದಾಯದ ನಡುವೆ ಪ್ರಾಬಲ್ಯ ಉಳಿಸಿಕೊಳ್ಳಲು ನೆರವಾಗಿದೆ. ಲಿಂಗಾಯತ ಪ್ರಾಬಲ್ಯದ ಉತ್ತರ ಮತ್ತು ಮಧ್ಯ ಕರ್ನಾಟಕದಲ್ಲಿ ಈಗಲೂ ನೆಲೆಯನ್ನು ಉಳಿಸಿಕೊಂಡಿದೆ.

ಆಪರೇಷನ್ ಕಮಲದ ಕೊಳಕು ರಾಜಕಾರಣ:

ಇತ್ತ ಬಿಜೆಪಿ, ತನಗೆ ಅಗತ್ಯ ಸಂಖ್ಯಾಬಲ ಇಲ್ಲದಿದ್ದರೂ ಜನಾದೇಶ ಇಲ್ಲದಿದ್ದರೂ ಅಧಿಕಾರವನ್ನು ಗಿಟ್ಟಿಸಿಕೊಳ್ಳುವ ದುರಾಸೆಯನ್ನು ಕೈಬಿಟ್ಟಿರಲಿಲ್ಲ. ಹೈಕಮಾಂಡ್ ಆದೇಶಕ್ಕಾಗಿ ಅದು ದೆಹಲಿಯತ್ತ ಮುಖ ಮಾಡಿತ್ತು. ಇದೇ ಸಂದರ್ಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ನೇರವಾಗಿ ಅಖಾಡಕ್ಕಿಳಿದು ಕರ್ನಾಟಕದಲ್ಲಿ ಬಿಜೆಪಿ ಯಾವುದೇ ಸಂದರ್ಭದಲ್ಲಿ ತನ್ನ ಸರ್ಕಾರವನ್ನು ರಚನೆ ಮಾಡಿಯೇ ತೀರುತ್ತದೆ, ಎಂಬ ದಾಟಿಯಲ್ಲಿ ಘೋಷಿಸಿದರು. ದೇಶದ ಸಂವಿಧಾನದ ರಕ್ಷಣೆಯ ಹೊಣೆ ಹೊತ್ತು ಪ್ರಮಾಣ ವಚನ ಸ್ವೀಕರಿಸಿದ್ದ ಪ್ರಧಾನಿ ಕರ್ನಾಟಕದಲ್ಲಿ ಸಂವಿಧಾನಕ್ಕೆ ವಿರುದ್ಧವಾಗಿ ಈ ರೀತಿ ಘೋಷಿಸಿದ್ದು ಬಿಜೆಪಿಯ ಆಪರೇಷನ್ ಕಮಲದ ಕೊಳಕು ರಾಜಕಾರಣಕ್ಕೆ ನಾಂದಿ ಹಾಡಿತು. ತನ್ನ ನೇತೃತ್ವದ ಸರ್ಕಾರ ರಚನೆಗಾಗಿ ಬಿಜೆಪಿ ಬಿರುಸಿನ ಚಟುವಟಿಕೆ ನಡೆಸಿತು. ಕೇಂದ್ರ ಸರ್ಕಾರದ ಐದು ಮಂದಿ ಮಂತ್ರಿಗಳು ರಾಜ್ಯದಲ್ಲಿ ಬೀಡು ಬಿಟ್ಟರು. ರಾಜ್ಯದ ಜನತೆ ತನಗೆ ಬಹುಮತ ಮತ್ತು ಜನಾದೇಶ ನೀಡಿದೆ ಎಂದು ಎಂದು ಬಿಜೆಪಿ ಸುಳ್ಳು ಪ್ರಚಾರ ಮಾಡಿತು.

ಕಾಂಗ್ರೆಸ್ ಮತ್ತು ಜೆಡಿ(ಎಸ್) ಮೈತ್ರಿಕೂಟಕ್ಕೆ ಸ್ಪಷ್ಟವಾದ ಬಹುಮತವಿದ್ದರೂ ರಾಜ್ಯಪಾಲರು ನಿಷ್ಪಕ್ಷಪಾತಿಯಾಗಿ ವರ್ತಿಸುವ ಬದಲು ಅತಿ ಹೆಚ್ಚು ಶಾಸಕರನ್ನು ಹೊಂದಿದ ಪಕ್ಷವನ್ನು ಸರ್ಕಾರ ರಚಿಸಲು ಆಹ್ವಾನಿಸುವುದಾಗಿ ಹೇಳಿ ಯಡಿಯೂರಪ್ಪರವರಿಗೆ ಪ್ರಮಾಣ ವಚನ ಸ್ವೀಕರಿಸಲು ಅವಕಾಶ ನೀಡಿದರು ಮಾತ್ರವಲ್ಲ ವಿಶ್ವಾಸ ಮತಕ್ಕೆ ಯಡಿಯೂರಪ್ಪ ಕೇವಲ ಒಂದು ವಾರ ಸಮಯಾವಕಾಶ ಕೋರಿದರೂ ರಾಜ್ಯಪಾಲರು ಯಡಿಯೂರಪ್ಪಗೆ ಹೇಗಾದರೂ ಮಾಡಿ ಬಹುಮತ ಸಾಬೀತು ಪಡಿಸಲು ಅನುಕೂಲವಾಗುವಂತೆ 15 ದಿನಗಳ ಸಮಯವಕಾಶ ನೀಡಿದರು. ರಾಜ್ಯಪಾಲರು ಹೀಗೆ ಅಧಿಕಾರ ದುರುಪಯೋಗ ಮಾಡಿ ಕೇಂದ್ರ ಬಿಜೆಪಿ ಸರ್ಕಾರದ ಅಡಿಯಾಳಾಗಿ ವರ್ತಿಸಿದ್ದು ದೇಶಾದ್ಯಂತ ವ್ಯಾಪಕ ಖಂಡನೆಗೆ ಗುರಿಯಾಯಿತು. ರಾಜ್ಯಪಾಲರ ಈ ಸಂವಿಧಾನ ವಿರೋಧಿ ಕ್ರಮವನ್ನು ಕಾಂಗ್ರೆಸ್ ಪಕ್ಷವು ಎರಡು ಬಾರಿ ಸುಪ್ರಿಂ ಕೋರ್ಟ್ ಮುಂದೆ ಪ್ರಶ್ನಿಸಿತು. ಯಡಿಯೂರಪ್ಪರವರಿಗೆ ವಿಶ್ವಾಸ ಮತ ಕೋರಲು ರಾಜ್ಯಪಾಲರು 15 ದಿನಗಳ ಸಮಯವಕಾಶ ನೀಡಿದ್ದನ್ನು ಸುಪ್ರಿಂ ಕೋರ್ಟ್ ರದ್ದು ಪಡಿಸಿತು ಮಾತ್ರವಲ್ಲ ವಿಶ್ವಾಸ ಮತ ಕೋರಲು ಸಮಯವಕಾಶವನ್ನು ಕಡಿತಮಾಡಿ ಆದೇಶ ಹೊರಡಿಸಿತು. ಅದೇ ಸಮಯದಲ್ಲಿ ಆಂಗ್ಲೋ ಇಂಡಿಯನ್ ಒಬ್ಬರನ್ನು ಮೇಲ್ಮನೆಗೆ ನೇಮಕ ಮಾಡಿದ್ದನ್ನು ತಡೆಹಿಡಿಯಲಾಯಿತು. ಇದು ಪ್ರಜಾಪ್ರಭುತ್ವಕ್ಕೆ ಸಂದ ಜಯವಾಗಿತ್ತು.

ಯಡಿಯೂರಪ್ಪನವರಿಗೆ ಬಹುಮತ ಸಾಬೀತು ಪಡಿಸಲು ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರನ್ನೇ ನೆಚ್ಚುವ ಪರಿಸ್ಥಿತಿಯಲ್ಲದೆ ಬೇರೆ ದಾರಿ ಇರಲಿಲ್ಲ. ಯಾವುದೇ ಮುಚ್ಚುಮರೆ ಇಲ್ಲದ ಕುದುರೆ ವ್ಯಾಪರ ಅಥವ ಆಪರೇಷನ್ ಕಮಲ ಭರ್ಜರಿಯಾಗಿ ನಡೆಯಿತು. ಅಧಿಕಾರದ ದುರಾಸೆ ಮತ್ತು ನೂರಾರು ಕೋಟಿ ರೂಗಳ ಭಾರೀ ಮೊತ್ತದ ಹಣದ ಆಮಿಷವನ್ನು ಒಡ್ಡಲಾಯಿತು. ಕೇಂದ್ರ ಸರ್ಕಾರದ ಆದಾಯ ತೆರಿಗೆ ಮತ್ತು ಅಬಕಾರಿ ಇಲಾಖೆಯ ದಾಳಿಯ ಬೆದರಿಕೆ ಹಾಕಲಾಯಿತು. ಈ ಎಲ್ಲ ಅಕ್ರಮ ಪ್ರಯತ್ನಗಳ ನಂತರವೂ ಯಡಿಯೂರಪ್ಪನವರಿಗೆ ವಿಶ್ವಾಸ ಮತಗಳಿಸಲು ಸಾಧ್ಯವಾಗಲಿಲ್ಲ.

ಮೈತ್ರಿ ಸರಕಾರವನ್ನು ಅಸ್ತಿರಗೊಳಿಸಲು ಬಿಜೆಪಿಯ ತಂತ್ರ

ಬಿಜೆಪಿಯ ಸಂವಿಧಾನ ವಿರೋಧಿ ನಡೆಗಳನ್ನು, ಕೇಂದ್ರ ಸರ್ಕಾರದ ಮತ್ತು ರಾಜಭವನದ ಅಧಿಕಾರ ದುರುಪಯೋಗ ದೇಶಾದ್ಯಂತ ತೀವ್ರ ಟೀಕೆಗೆ ಒಳಗಾಯಿತು. ಮತೀಯವಾದಿ ಹಾಗೂ ಸರ್ವಾಧಿಕಾರಿ ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡಲು ಮತ್ತು ಅತಂತ್ರ ರಾಜಕೀಯ ಪರಿಸ್ಥಿತಿಯನ್ನು ತೊಲಗಿಸಲು ಹಾಗೂ ಜನತೆಯ ಮೇಲೆ ಇನ್ನೊಂದು ಚುನಾವಣೆ ಹೇರಲ್ಪಡುವುದನ್ನು ತಡೆಯಲು ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಮೈತ್ರಿ ಸರಕಾರದ ರಚನೆಯನ್ನು ಸಿಪಿಐ(ಎಂ) ಸ್ವಾಗತಿಸಿತು. ರಾಜ್ಯಪಾಲರು ತಮ್ಮ ಹುದ್ದೆಗೆ ರಾಜಿನಾಮೆ ನೀಡಿ ವಾಪಸ್ ಹೋಗಬೇಕೆಂದು ಪಕ್ಷದ ಸಮಿತಿಗಳು ಹಾಗೂ ಘಟಕಗಳು ಪ್ರತಿಭಟಿಸಿ ಒತ್ತಾಯಿಸಿದವು.

ರಾಜ್ಯಪಾಲರಿಗೆ ಮೈತ್ರಿಕೂಟವನ್ನು ಸರಕಾರ ರಚಿಸುವಂತೆ ಆಹ್ವಾನ ನೀಡದೆ ಬೇರೆ ಆಯ್ಕೆ ಇರಲಿಲ್ಲ. ಜೆಡಿಎಸ್‌ನ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ ಮತ್ತು ಕಾಂಗ್ರೆಸಿನ ಡಾ. ಜಿ. ಪರಮೇಶ್ವರ್‌ರವರು ಉಪಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಹೆಚ್.ಡಿ. ಕುಮಾರಸ್ವಾಮಿಯವರು ಬಹುಮತ ಸಾಬೀತು ಪಡಿಸುವ ಮೂಲಕ ವಿಶ್ವಾಸ ಮತವನ್ನು ಗೆದ್ದರು ಆದರೆ ಮೈತ್ರಿ ಕೂಟದ ಎರಡೂ ಪಕ್ಷಗಳಲ್ಲಿದ್ದ ಮಂತ್ರಿ ಸ್ಥಾನ ಆಕಾಂಕ್ಷಿಗಳ ನಡುವೆ ಅನಾರೋಗ್ಯಕರ ಸ್ಪರ್ಧೆ ತ್ರೀವ್ರಗೊಳ್ಳತೊಡಗಿತು. ಇಂತಹ ಸಂದರ್ಭಕ್ಕಾಗಿ ಹೊಂಚುಹಾಕುತ್ತಿದ್ದ ಬಿಜೆಪಿ ಪರಿಸ್ಥಿತಿಯ ಲಾಭ ಪಡೆಯಲು ಮುಂದಾಯಿತು. ಮಂತ್ರಿ ಖಾತೆ ಸಿಗದೆ ಅಸಂತೃಪ್ತರಾದ ಕಾಂಗ್ರೆಸ್-ಜೆಡಿಎಸ್ ಶಾಸಕರಿಗೆ ತಮ್ಮ ಪಕ್ಷಗಳನ್ನು ಬಿಟ್ಟು ಬಿಜೆಪಿ ಸೇರಲು ಬಹಿರಂಗ ಆಹ್ವಾನ ನೀಡುವ ಮೂಲಕ ಮೈತ್ರಿ ಸರ್ಕಾರವನ್ನು ಅಸ್ತಿರಗೊಳಿಸಲು ಬಿಜೆಪಿ ವಿಳಂಬ ಮಾಡಲಿಲ್ಲ. ಬಹುತೇಕ ದೃಶ್ಯ ಮಾಧ್ಯಮಗಳು ಬಿಜೆಪಿ ವಕ್ತಾರರಂತೆ ಕಾರ್ಯನಿರ್ವಹಿಸುತ್ತಾ ಕಾಂಗ್ರೆಸ್-ಜೆಡಿಸ್ ಪಕ್ಷಗಳು ಈ ಹಿಂದೆ ಪರಸ್ಪರ ಕೆಸರೆರಚಾಟದಲ್ಲಿ ತೊಡಗಿದ್ದನ್ನು ಜನತೆಗೆ ಪದೇ ಪದೇ ತೋರಿಸುವ ಮೂಲಕ ಮೈತ್ರಿ ಸರ್ಕಾರದ ಪಕ್ಷಗಳ ನಡುವಿನ ಬಿರುಕನ್ನು ಹಿಗ್ಗಿಸಲು ಕಾರಣವಾದವು. ಅಂತಿಮವಾಗಿ ಬಿಜೆಪಿಯ ತಂತ್ರ ಕುತಂತ್ರಗಳಿಗೆ ಒಳಗಾದ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ 14 ಜನ ಶಾಸಕರು ಮತ್ತು ಇಬ್ಬರು ಸ್ವತಂತ್ರ ಶಾಸಕರು ಪಕ್ಷಾಂತರ ಮಾಡಿ ಬಿಜೆಪಿಯ ಅಧಿಕಾರ ಲಾಲಸೆಯನ್ನು ತೃಪ್ತಿಪಡಿಸಿದರು.

ಕೋವಿಡ್-19 ರ ಹಾವಳಿ

ಈ ಅವಧಿಯಲ್ಲಿ ಧುತ್ತೆಂದು ತಲೆದೋರಿದ ಕೋವಿಡ್-19 ಅತ್ಯಂತ ಆಘಾತಕಾರಿ ಬೆಳವಣಿಗೆಯಾಗಿದೆ. ದೇಶಾದ್ಯಂತ ಮತ್ತು ರಾಜ್ಯದಲ್ಲಿ ಹಾಗೂ ದೇಶ ವಿದೇಶಗಳಲ್ಲಿ ಲಕ್ಷ ಲಕ್ಷಗಟ್ಟಲೆ ಅಮಾಯಕರನ್ನು ಅದು ಬಲಿ ಪಡೆಯಿತು. ದೂರದ ರಾಜ್ಯಗಳಿಂದ ಹೊಟ್ಟೆಪಾಡಿಗಾಗಿ ಕರ್ನಾಟಕದ ನಗರಗಳಿಗೆ ವಲಸೆ ಬಂದವರು ಅಕ್ಷರಶಃ ಬೀದಿಪಾಲಾದರು. ಅವರಿಗೆ ಕೆಲಸ ಇಲ್ಲದೆ ಇಲ್ಲಿಯೇ ಉಳಿಯಲು ಸಾಧ್ಯವಿರಲಿಲ್ಲ. ವಾಪಸ್ ತಮ್ಮ ಊರುಗಳಿಗೆ ತೆರಳಲು ಬಸ್, ರೈಲು ಪ್ರಯಾಣ ಸೌಕರ್ಯ ಇರಲಿಲ್ಲ. ಅವರಲ್ಲಿ ಹಲವರು ಅನಿವಾರ್ಯವಾಗಿ ನೂರಾರು ಕಿ.ಮೀ. ನಡೆದುಕೊಂಡೇ ಹೋಗಲು ಪ್ರಯತ್ನ ಪಟ್ಟರು. ದಾರಿಯಲ್ಲಿ ಊಟವಿಲ್ಲದೆ, ಕುಡಿಯಲು ನೀರು ದೊರೆಯದೆ ನರಳುವಂತಾಯಿತು.

ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಕೊರತೆ, ಕನಿಷ್ಠ ಚಿಕಿತ್ಸೆಯ ಕೊರತೆ, ಜೀವ ಉಳಿಸುವ ಆಮ್ಲಜನಕದ ಕೊರತೆ, ಶಾಲೆಗಳು ಮುಚ್ಚಿರುವುದರಿಂದ ಮಕ್ಕಳಿಗೆ ಶಿಕ್ಷಣವೂ ಇಲ್ಲ ಮಧ್ಯಾಹ್ನದ ಊಟವೂ ಇಲ್ಲ. ರೋಗಿಗಳು ಚಿಕಿತ್ಸೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವ ಪರಿಸ್ಥಿತಿ. ಹಸಿವು ತಾಳಲಾಗದೆ ಆತ್ಮಹತ್ಯೆ ಮಾಡಿಕೊಂಡವರು ಹಲವರು. ಸತ್ತವರ ಶವಗಳ ಅಂತ್ಯಸಂಸ್ಕಾರ ಮಾಡಲು ಸ್ಥಳವಿಲ್ಲ. ಕೆಲವು ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆಯಿಂದ ರೋಗಿಗಳಿಗೆ ಸೂಕ್ತ ಚಿಕಿತ್ಸೆ ದೊರೆಯುತ್ತಿರಲಿಲ್ಲ. ಕುಡಿಯಲು ಬಿಸಿ ನೀರು ದೊರೆಯದಂತಹ ಪರಿಸ್ಥಿತಿ ಕೆಲವು ಆಸ್ಪತ್ರೆಗಳಲ್ಲಿ ಕಂಡುಬಂದಿತ್ತು. ಸರ್ಕಾರದ ಪೂರ್ವಸಿದ್ಧತೆಯಿಲ್ಲದೆ ಲಾಕ್‌ಡೌನ್ ಹೊರತುಪಡಿಸಿ ಯಾವುದೇ ಪರಿಣಾಮಕಾರಿ ನೆರವು ಹರಿದು ಬರಲಿಲ್ಲ. ಬಡವರ ಪಾಲಿಗೆ ಈ ಲಾಕ್‌ಡೌನ್ ಬಹುತೇಕವಾಗಿ ಜೈಲು ಶಿಕ್ಷೆಗಿಂತ ಹೆಚ್ಚು ಭೀಕರವಾಗಿರುತ್ತಿತ್ತು, ಅವರ ಆದಾಯ ಹೆಚ್ಚಿಸದೆ, ಅವರಿಗೆ ಪೌಷ್ಠಿಕ ಆಹಾರ ದೊರೆಯದೆ ಅವರು ಸಾಂಕ್ರಾಮಿಕ ಮುಕ್ತರಾಗಲು ಸಾಧ್ಯವಿರಲಿಲ್ಲ.

ಆದರೂ ಅನೇಕ ಮಂದಿ ವೈದ್ಯರು, ಆರೋಗ್ಯ ಕಾರ್ಯಕರ್ತರ ಸೇವೆ ಶ್ಲಾಘನೀಯವಾಗಿದೆ. ಬಾಗೇಪಲ್ಲಿಯ ನಮ್ಮ ಡಾ. ಅನಿಲ್ ಕುಮಾರ್ ರಂತವರು ಸ್ವಯಂ ಸೇವಕ ತಂಡದೊಂದಿಗೆ ಹಳ್ಳಿ ಹಳ್ಳಿಗಳಿಗೆ ಸಂಚರಿಸಿ ಸಂತ್ರಸ್ತರಿಗೆ ಅವರು ಚಿಕಿತ್ಸೆ ನೀಡಿದ್ದಾರೆ. ನಮ್ಮ ಕಾರ್ಮಿಕ ರಂಗದ ಕಾರ್ಯಕರ್ತರು ಹಸಿವೆಯಿಂದ ಬಾಧಿತರಾದವರಿಗೆ ಆಹಾರದ ಕಿಟ್‌ಗಳನ್ನು ಅವರ ಮನೆಬಾಗಿಲಿಗೆ ತಲುಪಿಸಿದ್ದಾರೆ. ಕಾ. ಮಾರುತಿ ಮಾನ್ಪಡೆ, ಕಾ. ವಿಠಲ ಭಂಡಾರಿ, ಕಾಂ. ಪುರುಷೋತ್ತಮ ಕಲಾಲಬಂಡಿ ಮೊದಲಾದ ನಮ್ಮ ನೆಚ್ಚಿನ ಕಾರ್ಯಕರ್ತರು ಈ ಭೀಕರ ಸಾಂಕ್ರಾಮಿಕಕ್ಕೆ ತುತ್ತಾಗಿ ಪ್ರಾಣ ಕಳೆದುಕೊಂಡಿದ್ದಾರೆ. ಪಕ್ಷದ ಕಾರ್ಯಕರ್ತರು ಬಡ ಕುಟುಂಬಗಳಿಗೆ ಉಚಿತ ಪಡಿತರ, ತಿಂಗಳಿಗೆ ರೂ.7500/- ರಂತೆ ಪರಿಹಾರ ನೀಡಲು ಒತ್ತಾಯಿಸಿ ಹೋರಾಟಗಳನ್ನು ನಡೆಸಿದ್ದಾರೆ. ಎಲ್ಲರೂ ತಪ್ಪದೆ ಲಸಿಕೆ ಹಾಕಿಕೊಳ್ಳುವಂತೆ ಅವರ ಮನವೊಲಿಸುವ ಕೆಲಸವನ್ನು ಮಾಡಿದ್ದಾರೆ.

ನಮ್ಮ ಅಂಗನವಾಡಿ, ಬಿಸಿಯೂಟ, ಆಶಾ ಮೊದಲಾದ ಕಾರ್ಯಕರ್ತರು ತಮ್ಮ ಜೀವದ ಹಂಗು ತೊರೆದು ಸೋಂಕಿತರ ಸೇವೆಯನ್ನು ಮಾಡಿದ್ದಾರೆ. ಅವರಲ್ಲಿ ನೂರಾರು ಮಂದಿ ವಾರಿಯರ್ಸ್ ಸೋಂಕಿಗೆ ಒಳಗಾಗಿ ಪ್ರಾಣತೆತ್ತಿದ್ದಾರೆ. ಬೆಂಗಳೂರು, ಮಂಗಳೂರು, ಉಡುಪಿ, ತುಮಕೂರು ಮೊದಲಾದ ಕಡೆಗಳಲ್ಲಿ ನಮ್ಮ ಕಾರ್ಯಕರ್ತರು ಸೋಂಕಿತರಿಗೆ ಆಹಾರದ ಕಿಟ್, ಆಸ್ಪತ್ರೆಗಳಲ್ಲಿ ಹಾಸಿಗೆ, ಶವಗಳ ಅಂತ್ಯಸಂಸ್ಕಾರ ಮೊದಲಾದ ಕಾರ್ಯಗಳಲ್ಲಿ ತೊಡಗಿ ಮಾನವೀಯತೆಯನ್ನು ಮೆರೆದಿದ್ದಾರೆ.

ಕರ್ನಾಟಕ ರಾಜಕೀಯ ಪರಿಸ್ಥಿತಿ

(ಸಿಪಿಐ-ಎಂ ಕರ್ನಾಟಕ 23ನೆಯ ರಾಜ್ಯ ಸಮ್ಮೇಳನದ ಕರಡು ವರದಿಯ ಆಯ್ದ ಭಾಗಗಳು)

ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ-2020

ಮೇ 13, 2020 ರಂದು ಕರ್ನಾಟಕ ಸರಕಾರ ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ-2020 ನ್ನು ಪ್ರಕಟಿಸಿತು. ಜೂನ್ 11 ರಂದು ನಡೆದ ಮಂತ್ರಿ ಮಂಡಲದ ಸಭೆಯಲ್ಲಿ ಕರ್ನಾಟಕ ಭೂ ಸುಧಾರಣಾ ಕಾಯ್ದೆ-1961 ರ ಕಲಂ 5, 63,79,(ಎ)(ಬಿ)(ಸಿ) ಮತ್ತು 80 ಗಳಿಗೆ ತಿದ್ದುಪಡಿ ಮಾಡಲು ನಿರ್ಧರಿಸಿತು. ಈ ತಿದ್ದುಪಡಿಗಳು ರಾಜ್ಯದ ಕೃಷಿ ರಂಗದಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ನೆರವಾಗಲಿವೆ ಎಂದೂ ಮತ್ತು ಆ ಮೂಲಕ ಕೃಷಿ ಆಧಾರಿತ ಕೈಗಾರಿಕೆಗಳ ಹೆಚ್ಚಳಕ್ಕೆ ನೆರವಾಗಲಿವೆ ಎಂದೂ ಹಾಗೂ ನಿರುದ್ಯೋಗದ ನಿವಾರಣೆಗೆ ಸಾಧನವಾಗಲಿವೆ ಎಂದೂ ಹೇಳಲಾಗುತ್ತದೆ. ಕೃಷಿ ರಂಗದ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ವ್ಯಾಪಕವಾಗಿ ಹೆಚ್ಚಿಸಲು ಕೃಷಿಯಲ್ಲಿ ಆಸಕ್ತಿ ಹೊಂದಿರುವ ಯಾರು ಬೇಕಾದರೂ ಜಮೀನುಗಳನ್ನು ಹೊಂದಲು ಅವಕಾಶ ನೀಡುವುದಾಗಿ ಘೋಷಿಸಿದೆ. ವಿಧಾನ ಸಭೆಯನ್ನು ಕರೆದು ಅಲ್ಲಿ ಚರ್ಚಿಸಿ ನಿರ್ಧರಿಸುವ ಪ್ರಕ್ರಿಯೆ ವಿಳಂಬವಾಗುವುದರಿಂದ ತಡ ಮಾಡದೆ, ಸುಗ್ರೀವಾಜ್ಞೆಯನ್ನು ಹೊರಡಿಸಿದೆ.

ಸರ್ಕಾರದ ಈ ನಡೆ ಸಾರ್ವಜನಿಕವಾಗಿ ತೀವ್ರ ಟೀಕೆಗೊಳಗಾಗಿದೆ. ಇವು ಲೂಟಿಕೋರ ಕಾರ್ಪೋರೆಟ್ ಕಂಪನಿಗಳ ಪರವಾದವುಗಳೆಂದು ಹಾಗೂ ಕಪ್ಪು ಹಣವನ್ನು ಬಿಳಿ ಮಾಡುವ ಖದೀಮರಿಗೆ ನೆರವಾಗುವ ಉದ್ದೇಶದಿಂದ ತರಲಾಗಿವೆ ಎಂದು ಮತ್ತು ಉಳುವವರನ್ನು ಭೂ ಒಡೆಯರಾಗಿಸುವ ಪ್ರಗತಿಪರ ಭೂ ಸುಧಾರಣೆಗಳನ್ನು ಬುಡಮೇಲು ಮಾಡಿ ಉಳ್ಳವವರನ್ನು ಭೂ ಒಡೆಯರನ್ನಾಗಿಸುವ ಉದ್ದೇಶವನ್ನು ಹೊಂದಿವೆ ಎಂದು ಖಂಡನೆಗೆ ಒಳಗಾಗಿವೆ. ಫಲವತ್ತಾದ ಕೃಷಿ ಜಮೀನುಗಳನ್ನು ಸಂಕಷ್ಟದಲ್ಲಿರುವ ರೈತರ ಕೈಗಳಿಂದ ಕೃಷಿಯೇತರ ಉದ್ದೇಶದ ಹೆಸರಿನಲ್ಲಿ ಕಿತ್ತುಕೊಂಡು ರೈತರನ್ನು ಬೀದಿಪಾಲು ಮಾಡುವ ದುರುದ್ದೇಶಕ್ಕೆ ಸರಕಾರ ಬೆಂಬಲ ನೀಡಲು ಮುಂದಾಗಿದೆ. ಸರಕಾರದ ಈ ಕೃಷಿ ವಿರೋಧಿ, ಕೃಷಿಕ ವಿರೋಧಿ ನಡೆಯನ್ನು ಬಲವಾಗಿ ಎದುರಿಸಿ ಹಿಮ್ಮೆಟ್ಟಿಸಬೇಕಾಗಿದೆ.



ಎಪಿಎಂಸಿ ತಿದ್ದುಪಡಿ ಮಸೂದೆ-2020

ರೈತರಿಗೆ ತಮ್ಮ ಕೃಷಿ ಉತ್ಪನ್ನಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಅವಕಾಶ ಕಲ್ಪಿಸುವ ಹೆಸರಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ಬೃಹತ್ ಕಾರ್ಪೋರೇಟ್ ಕಂಪನಿಗಳ ಲೂಟಿಗೆ ತೆರೆದಿಡಲು ಕೇಂದ್ರ ಸರ್ಕಾರ ಮುಂದಾಗಿದೆ. ಕೃಷಿ ಮಾರುಕಟ್ಟೆಗಳನ್ನು ತಮ್ಮ ವಶದಲ್ಲಿಟ್ಟುಕೊಂಡು ರೈತರಿಗೆ ನಿರಂತರ ಮೋಸ ಮಾಡುವುದನ್ನು ತಡೆಗಟ್ಟುವ ಉದ್ದೇಶದಿಂದ 1960 ಮತ್ತು 1970ರಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ಆರಂಭಿಸಲಾಗಿತ್ತು. ಎಪಿಎಂಸಿಗಳ ಸ್ಥಾಪನೆಯಿಂದಾಗಿ ರೈತರ ಶೋಷಣೆ ಸ್ವಲ್ಪ ಮಟ್ಟಿಗಾದರೂ ನಿಯಂತ್ರಿಸಲ್ಪಟ್ಟಿತು. ಸರಕಾರಕ್ಕೆ ಗಣನೀಯ ಪ್ರಮಾಣದಲ್ಲಿ ತೆರಿಗೆ ಸಂಗ್ರಹ ಮಾಡಲು ಸಾಧ್ಯವಾಯಿತು. ಗಣನೀಯ ಸಂಖ್ಯೆಯಲ್ಲಿ ನಿರುದ್ಯೋಗಿ ಯುವಕರಿಗೆ, ಹಮಾಲಿ ಕಾರ್ಮಿಕರಿಗೆ ಎಪಿಎಂಸಿ ಆವರಣಗಳಲ್ಲಿ ಸರಕನ್ನು ಹೇರುವ, ಇಳಿಸುವ, ಸ್ವಚ್ಛಮಾಡುವ ಮೊದಲಾದ ಕೆಲಸ ದೊರೆಯುವಂತಾಯಿತು.

ಆದರೆ ಇಂದು ಕೇಂದ್ರ ಸರ್ಕಾರ ಕೃಷಿ ರಂಗವನ್ನೇ ಕಾರ್ಪೋರೇಟ್ ಕಂಪನಿಗಳಿಗೆ ಹಸ್ತಾಂತರ ಮಾಡಲು ಮುಂದಾಗಿದೆ. ಸುಧಾರಣೆ ಎಂದರೆ ಖಾಸಗೀಕರಣ ಎಂದು ಬಿಂಬಿಸುತ್ತದೆ. ಮುಕ್ತ ಮಾರುಕಟ್ಟೆಯಲ್ಲೇ ರೈತರಿಗೆ ಲಾಭದಾಯಕ ಬೆಲೆ ಸಿಗಲಿದೆ ಎಂದು ನಂಬಿಸುತ್ತಿದೆ. ಕೃಷಿ ಉತ್ಪನ್ನಗಳ ಸಾಗಣೆ ವಿಚಾರದಲ್ಲಿ ದಶಕಗಳಿಂದ ಇದ್ದ ನಿರ್ಬಂಧಗಳನ್ನು ತೆಗೆದುಹಾಕಲಾಗುತ್ತದೆ. ವರ್ತಕರ ಹಿಡಿತದಿಂದ ರೈತರನ್ನು ಮುಕ್ತಗೊಳಿಸಲಾಗುತ್ತದೆ. ಅಲ್ಲಿ ಸ್ಪರ್ಧೆಗೆ ಅವಕಾಶ ಇರುವುದರಿಂದ ರೈತರಿಗೆ ಲಾಭದಾಯಕ ಬೆಲೆ ಸಿಗುತ್ತದೆ ಎಂದು ವಾದಿಸಲಾಗುತ್ತದೆ.

ಕೃಷಿ ಮಾರುಕಟ್ಟೆ ರಾಜ್ಯದ ಪಟ್ಟಿಯಲ್ಲಿ ಬರುವ ವಿಷಯವಾದ್ದರಿಂದ ಕೇಂದ್ರ ಸರ್ಕಾರಕ್ಕೆ ನೇರವಾಗಿ ಕಾಯ್ದೆಯನ್ನು ಅಂಗೀಕರಿಸಲು ಸಾಧ್ಯವಾಗದಿರುವುದರಿಂದ ಮಾದರಿ ಕೃಷಿ ಉತ್ಪನ್ನ ಹಾಗೂ ಜಾನುವಾರು ಮಾರುಕಟ್ಟೆ ಕಾಯ್ದೆ 2017 ಅನ್ನು ರಚಿಸಿ ಎಲ್ಲಾ ರಾಜ್ಯಗಳಲ್ಲಿ ಅದೇ ಮಾದರಿಯಲ್ಲಿ ತಮ್ಮ ಎಪಿಎಂಸಿ ಕಾಯ್ದೆಗಳನ್ನು ತಿದ್ದುಪಡಿ ಮಾಡುವಂತೆ ಸೂಚಿಸಲಾಯಿತು. ಈ ಸೂಚನೆ ಪಾಲಿಸದಿದ್ದರೆ ಅನುದಾನ ನೀಡಲಾಗುವುದಿಲ್ಲ ಎಂಬ ಬೆದರಿಕೆಯನ್ನು ಸಹ ಹಾಕಲಾಯಿತು. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಎಪಿಎಂಸಿ ತಿದ್ದುಪಡಿ ಮಸೂದೆಯನ್ನು 2020ರಲ್ಲಿ ಅಂಗೀಕರಿಸಿತು.

ಎಪಿಎಂಸಿಗಳಲ್ಲಿ ನ್ಯೂನತೆಗಳು ಇಲ್ಲದಿರಲಿಲ್ಲ. ಆದರೆ ಸ್ವಲ್ಪ ಮಟ್ಟಿಗಾದರೂ ಅವು ರೈತರಿಗೆ ಸಹಾಯಕವಾಗಿದ್ದವು. ಒಂದಷ್ಟು ನಿಯಂತ್ರಣ ಇತ್ತು. ಈ ತಿದ್ದುಪಡಿಗಳಿಂದ ರೈತರು ಎಪಿಎಂಸಿ ಹೊರಗಡೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸಾಧ್ಯವಾಗುವುದರಿಂದ ಎಪಿಎಂಸಿಗಳು ನಿಧಾನವಾಗಿ ಬಂದ್ ಆಗುವುವು. ಕಾರ್ಪೋರೇಟ್ ಕಂಪನಿಗಳೇ ದೈತ್ಯ ಖರೀದಿದಾರರಾಗುತ್ತಾರೆ. ಕಾರ್ಪೋರೇಟ್‌ಕರಣದಿಂದ ಈಗಾಗಲೇ ಎಪಿಎಂಸಿಗಳು ನಷ್ಟ ಅನುಭವಿಸತೊಡಗಿವೆ. ಅರ್ಧದಷ್ಟು ಸಿಬ್ಬಂದಿಗಳನ್ನು ಕಡಿತ ಮಾಡಲಾಗಿದೆ. ಗ್ರಾಮೀಣ ನಿರುದ್ಯೋಗ ತೀವ್ರಗೊಂಡಿದೆ. ಗ್ರಾಮೀಣ ಕೆಲಸಗಾರರು ಹೊಟ್ಟೆಪಾಡಿಗಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಹೆಚ್ಚಾಗಿದೆ. ಕೇರಳದಲ್ಲಿ ಎಪಿಎಂಸಿ ಮಾರುಕಟ್ಟೆಗಳೇ ಇಲ್ಲ. ಆದರೂ ಅಲ್ಲಿಯ ಎಡ ರಂಗ ಸರ್ಕಾರ ರೈತರ ಪರ ಮಧ್ಯಪ್ರವೇಶ ಮಾಡುತ್ತಿರುತ್ತದೆ. ಅಲ್ಲಿ ಕೃಷಿ ರಂಗದ ಕಾಯ್ದೆಗಳು ರೈತ ಸ್ನೇಹಿಯಾಗಿವೆ. ಮೋದಿ ಸರ್ಕಾರದ ಕೃಷಿ ಕಾಯ್ದೆಗಳನ್ನು ಅಲ್ಲಿ ತಿರಸ್ಕರಿಸಲಾಗಿದೆ.

ಜಾನುವಾರು ಹತ್ಯಾ ನಿಷೇದ ಮಸೂದೆ

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಹಿಂಪಡೆದಿದ್ದ. ಜಾನುವಾರು ಹತ್ಯೆ ನಿಷೇದ ಮಸೂದೆಯನ್ನು ಪುನಃ ಯಾವುದೇ ಚರ್ಚೆಗೆ ಅವಕಾಶ ನೀಡದೆ ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರ ಅಂಗೀಕರಿಸಿದೆ. ಜಾನುವಾರು ಅಂದರೆ ಹಸು, ಎಮ್ಮೆ, ಅವುಗಳ ಕರುಗಳಾದ ಹೋರಿ, ಎತ್ತು, ಕೋಣಗಳಾಗಿವೆ. ಈ ಕಾಯ್ದೆ ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಜನತೆಯ ಆಹಾರದ ಹಕ್ಕನ್ನು ಅದು ನಾಶ ಮಾಡುತ್ತದೆ. ಯಾರು ಯಾವ ಆಹಾರ ಸೇವಿಸಬೇಕೆಂಬುದನ್ನು ಅವರವರೇ ತೀರ್ಮಾನಿಸಬೇಕೆ ಹೊರತು ಬಲವಂತವಾಗಿ ಅಲ್ಲ. ಅಸಂಖ್ಯಾತ ಜನ ಹೈನೋದ್ಯಮ, ಮಾಂಸೋದ್ಯಮ ಮತ್ತು ಚರ್ಮೋದ್ಯಮಗಳನ್ನು ಅವಲಂಭಿಸಿ ಜೀವನ ಸಾಗಿಸುತ್ತಿರುತ್ತಾರೆ. ಸರ್ಕಾರ ಈ ಕಾಯ್ದೆಯ ಮೂಲಕ ಕಾರ್ಪೋರೇಟ್ ಕಂಪೆನಿಗಳಿಗೆ ಪ್ರವೇಶ ನೀಡಿ ಲೂಟಿ ಮಾಡಲು ಅವಕಾಶ ನೀಡಲು ಮುಂದಾಗಿವೆ. ಈಗಾಗಲೇ ಬಾರೀ ಪ್ರಮಾಣದಲ್ಲಿ ಜಾನುವಾರುಗಳ ಹತ್ಯೆ ಮಾಡಿ ಮಾಂಸವನ್ನು ರಫ್ತು ಮಾಡುವ ಕಂಪೆನಿಗಳಿಗೆ ಬಾರೀ ಲಾಭಗಳಿಕೆ ಸಾಧ್ಯವಾಗಲಿದೆ. ಹೈನೋದ್ಯಮದಲ್ಲಿ ತೊಡಗಿರುವ ರೈತರಿಗೆ ಬಾರೀ ಹಾನಿ ಆಗಲಿದೆ. ಜನರ ಆಹಾರದ ಹಕ್ಕಿನ ಮೇಲೆ ದಾಳಿ ಮಾಡಲು ಹೊರಟಿರುವ ಸರ್ಕಾರ ಶಾಲಾ ಮಕ್ಕಳಿಗೆ ಬಿಸಿ ಊಟದಲ್ಲಿ ಮೊಟ್ಟೆಯನ್ನು ನೀಡುವ ಪ್ರಸ್ತಾವವನ್ನು ಕೈಬಿಡಲು ನಿರ್ಧರಿಸಿದೆ. ಇದರಿಂದಾಗಿ ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ನಿರಾಕರಿಸುವ ಹುನ್ನಾರ ನಡೆದಿದೆ. ಆಹಾರದ ಹಕ್ಕಿನ ಮೇಲಿನ ಈ ದಾಳಿಯನ್ನು ಬಲವಾಗಿ ವಿರೋಧಿಸಬೇಕಾಗಿದೆ.



ಕಾರ್ಮಿಕ ಕಾನೂನುಗಳ ತಿದ್ದುಪಡಿ ಸುಗ್ರೀವಾಜ್ಞೆ ವಿಧೇಯಕಕ್ಕೆ ಸೋಲು:

ಕೈಗಾರಿಕ ವಿವಾದಗಳ ಕಾಯ್ದೆಗೆ ತಿದ್ದುಪಡಿ ತಂದು ಕಾರ್ಖಾನೆಗಳ ಮುಚ್ಚಲು, ಲೇ ಆಫ್, ರಿಟ್ರೆಂಚ್ಮೆಂಟ್ ಮಾಡಲು ಸರ್ಕಾರದ ಅನುಮತಿಯ ಕಡ್ಡಾಯವನ್ನು 300 ಕ್ಕಿಂತ ಹೆಚ್ಚಿನ ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆಗಳಿಗೆ ಮಾತ್ರ ಕಡ್ಡಾಯ ಮಾಡುವ, ಕಾರ್ಖಾನೆ ಕಾಯ್ದೆಗೆ ತಿದ್ದುಪಡಿ ಮಾಡಿ ಕಾರ್ಖಾನೆಯ ಪರಿಭಾಷೆಯಿಂದ ವಿದ್ಯುತ್ ಸಹಿತ 10 ಕಾರ್ಮಿಕರ ಗರಿಷ್ಠ ಮಿತಿಯನ್ನು 20 ಕ್ಕೆ ಹಾಗು ವಿದ್ಯುತ್ ರಹಿತ 20 ಕಾರ್ಮಿಕರ ಗರಿಷ್ಠ ಮಿತಿಯನ್ನು 40 ಕ್ಕೆ ಹೆಚ್ಚಿಸುವ ಹಾಗು ಗುತ್ತಿಗೆ ಕಾರ್ಮಿಕರ ಕಾಯ್ದೆಗೆ ತಿದ್ದುಪಡಿ ತಂದು ಕಡ್ಡಾಯ ನೋಂದಣಿ ಮತ್ತು ಪರವಾನಗಿಗೆ ಅಗತ್ಯವಿರುವ ಕಾರ್ಮಿಕರ ಕನಿಷ್ಟ ಸಂಖ್ಯೆಯನ್ನು ಪ್ರಸ್ತುತ 20 ರಿಂದ 50 ಕ್ಕೆ ಹೆಚ್ಚಿಸುವ ಕಾರ್ಮಿಕ ಕಾನೂನುಗಳ ತಿದ್ದುಪಡಿ ಸುಗ್ರೀವಾಜ್ಞೆಯನ್ನು ಕೋವಿಡ್ ನೆಪದಲ್ಲಿ ಲಾಕ್ಡೌನ್ ವೇಳೆ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಹೊರಡಿಸಿತ್ತು. ಸದರಿ ಸುಗ್ರೀವಾಜ್ಞೆಯನ್ನು ವಿರೋಧಿಸಿ ಕಾರ್ಮಿಕ ಸಂಘಟನೆಗಳು ಹೋರಾಟವನ್ನು ತೀವ್ರವಾಗಿ ನಡಿಸಿದ್ದವು. ಸದರಿ ಸುಗ್ರೀವಾಜ್ಞೆಯ ವಿರುದ್ಧ ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಮತ್ತು ಜೆಡಿ(ಎಸ್) ಮತ ಚಲಾಯಿಸಿದ ಕಾರಣ ವಿಧೇಯಕಕ್ಕೆ ಸೋಲುಂಟಾಯಿತು. ಆನಂತರ ಸದರಿ ಸುಗ್ರೀವಾಜ್ಞೆಯನ್ನು ಮತ್ತೆ ಹೊರಡಿಸಲು ಯತ್ನಿಸಿದಾಗ ನಮ್ಮ ಪಕ್ಷವು ರಾಜಭವನದ ಮುಂದೆ ಪ್ರತಿಭಟನೆ ನಡೆಸಿ ಶಾಸನ ಸಭೆಯಲ್ಲಿ ಸೋತ ಸುಗ್ರೀವಾಜ್ಞೆಯನ್ನು ಮತ್ತೆ ಹೊರಡಿಸುವುದು ಅಸಿಂಧು ಎಂಬ ಸುಪ್ರೀಂ ಕೋರ್ಟ್ ಸಂವಿಧಾನ ಪೀಠದ ತೀರ್ಪನ್ನು ಉಲ್ಲೇಖಿಸಿ ಪ್ರಚಾರ ನಡೆಸಿತು. ಪರಿಣಾಮವಾಗಿ ಮತ್ತೆ ಸುಗ್ರೀವಾಜ್ಞೆಯನ್ನು ಹೊರಡಿಸಲಿಲ್ಲ. ಇದು ಕಾರ್ಮಿಕರ ಹೋರಾಟಕ್ಕೆ ಪ್ರಧಾನವಾಗಿ ಸಿಐಟಿಯು ನಡೆಸಿದ ಹೋರಾಟಕ್ಕೆ ಸಂದ ಜಯವಾಗಿದೆ. ಕೇಂದ್ರ ಸರ್ಕಾರ 29 ಕಾರ್ಮಿಕ ಕಾಯ್ದೆಗಳ ರದ್ದುಪಡಿಸಿ ರೂಪಿಸಿರುವ 4 ಕಾರ್ಮಿಕ ಸಂಹಿತೆಗಳಿಗೆ ನಿಯಮಾವಳಿ ರೂಪಿಸಿ ಜಾರಿಗೊಳಿಸುವ ಯತ್ನವನ್ನು ರಾಜ್ಯ ಬಿಜೆಪಿಯ ಸರ್ಕಾರ ನಡೆಸಿದೆ. ಆದರೆ ಕಾರ್ಮಿಕರ ಹೋರಾಟದ ಕಾರಣ ಅದರ ಜಾರಿ ಮುಂದೂಡುತ್ತಿದೆ.

ಕರ್ನಾಟಕ ರಾಜಕೀಯ ಪರಿಸ್ಥಿತಿ

(ಸಿಪಿಐ-ಎಂ ಕರ್ನಾಟಕ 23ನೆಯ ರಾಜ್ಯ ಸಮ್ಮೇಳನದ ಕರಡು ವರದಿಯ ಆಯ್ದ ಭಾಗಗಳು)

ಕಾರ್ಪೋರೇಟ್ ಲೂಟಿಗಾಗಿ ದುರ್ಬಲ ಸಮುದಾಯಗಳನ್ನು ಪರಸ್ಪರ ಮುಖಾಮುಖಿಯಾಗಿಸಿದ ಮೀಸಲಾತಿ ಸಮರ:

ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾಗಿರುವ ಬಿಜೆಪಿ ನೇತೃತ್ವದ ಒಕ್ಕೂಟ ಸರಕಾರ ಮೀಸಲಾತಿ ವಿರೋಧಿ ನಿಲುಮೆ ಹೊಂದಿದೆ. ಸಾಮಾಜಿಕ ನ್ಯಾಯವನ್ನು ಆಧರಿಸಿರುವ ಮೀಸಲಾತಿಯು ಸಾಮಾಜಿಕ ತಾರತಮ್ಯಕ್ಕೊಳಗಾದ ಜನ ಸಮುದಾಯಗಳಿಗೆ ದೊರಕದಂತೆ ಕಾರ್ಯ ನಿರ್ವಹಿಸುತ್ತಿದೆ.

ಸಾರ್ವಜನಿಕ ರಂಗದ ಕೈಗಾರಿಕೆಗಳು ಉದ್ದಿಮೆಗಳನ್ನು, ಸಾರ್ವಜನಿಕ ಶಿಕ್ಷಣವೂ ಸೇರಿದಂತೆ ಇತರೆ ಸಂಸ್ಥೆಗಳನ್ನು ಖಾಸಗೀಕರಣ ಮಾಡುತ್ತಿದೆ. ಅದೇ ರೀತಿ, ಸರಕಾರಿ ಇಲಾಖೆಗಳಲ್ಲಿನ ಖಾಲಿ ಇರುವ ಮತ್ತು ಬ್ಯಾಕ್ ಲಾಗ್ ಹುದ್ದೆಗಳನ್ನು ತುಂಬುತ್ತಿಲ್ಲ. ಬದಲಿಗೆ ಉದ್ಯೋಗಗಳನ್ನು ಕಡಿತ ಮಾಡುತ್ತಿದೆ ಮತ್ತು ಹೊರ ಗುತ್ತಿಗೆ ಮತ್ತು ಗುತ್ತಿಗೆ ಆಧಾರದಲ್ಲಿ ಕೆಲಸಗಾರರನ್ನು ನೇಮಿಸಿಕೊಳ್ಳುತ್ತಾ ಶಿಕ್ಷಣ ಹಾಗೂ ಸಾಮಾಜಿಕ ತಾರತಮ್ಯಕ್ಕೊಳಗಾದ ಸಮುದಾಯಗಳಿಗೆ ಅಲ್ಲಿ ಮೀಸಲಾತಿಯ ಮೂಲಕ ದೊರೆಯುತ್ತಿದ್ದ ಸೌಲಭ್ಯಗಳು ಸಿಗದಂತೆ ಲೂಟಿಕೋರ ಕಾರ್ಪೋರೇಟ್ ಕಂಪನಿಗಳಿಗೆ ನೆರವಾಗಿದೆ. ಇದೇ ನೀತಿಯನ್ನು ಕರ್ನಾಟಕದ ಬಿಜೆಪಿ ಸರಕಾರ ಅನುಸರಿಸುತ್ತಿದೆ.

ಹೀಗೆ ಶಿಕ್ಷಣ ಹಾಗೂ ಉದ್ಯೋಗಾವಕಾಶಗಳು ತೀವ್ರವಾಗಿ ಕಡಿತಗೊಳ್ಳುತ್ತಿರುವಾಗಲೇ ಪರಿಶಿಷ್ಠ ಜಾತಿ ಮತ್ತು ಪಂಗಡಗಳ ಸಮುದಾಯಗಳು, ಜನ ಸಂಖ್ಯೆಗನುಗುಣವಾಗಿ ಮೀಸಲಾತಿ ಹೆಚ್ಚಳವನ್ನು ಮತ್ತು ಪರಿಶಿಷ್ಠ ಜಾತಿ ಸಮುದಾಯಗಳು ಒಳ ಮೀಸಲಾತಿ ಪ್ರಶ್ನೆಗಾಗಿ ಹೋರಾಡುತ್ತಿವೆ.

ವಾಸ್ತವದಲ್ಲಿ, ಮೀಸಲಾತಿ ಉಳಿಸಿಕೊಳ್ಳಲು ಖಾಸಗೀಕರಣದ ನೀತಿಯ ವಿರುದ್ದ ಬಲವಾಗಿ ಧ್ವನಿ ಎತ್ತುತ್ತಾ ಸಾರ್ವಜನಿಕ ರಂಗದ ಉದ್ದಿಮೆಗಳನ್ನು ವಿಸ್ತರಿಸಲು ಮತ್ತು ಸಾರ್ವಜನಿಕ ರಂಗದ ಶಿಕ್ಷಣವನ್ನು ವಿಸ್ತರಿಸಿ ಬಲ ಪಡಿಸಲು ವ್ಯಾಪಕವಾಗಿ ಬಂಡವಾಳ ತೊಡಗಿಸುವಂತೆ ಒತ್ತಾಯಿಸುತ್ತಲೇ ಮೀಸಲಾತಿ ವಿಸ್ತರಣೆಗಾಗಿ ಈ ಸಮುದಾಯಗಳು

ಹೋರಾಡ ಬೇಕಿತ್ತು. ಇಲ್ಲವೇ ಎಲ್ಲ ದುರ್ಬಲ ಸಮುದಾಯಗಳ ಜೊತೆ ಮತ್ತು ಪ್ರಗತಿಪರರ ಜೊತೆ ಸೇರಿ ಸರ್ವರಿಗೂ ಶಿಕ್ಷಣ ಮತ್ತು ಸರ್ವರಿಗೂ ಉದ್ಯೋಗಕ್ಕಾಗಿ ಹೋರಾಡಬೇಕಿತ್ತು. ಹಾಗೇ ಮಾಡದೇ, ಒಂದೆಡೆ ಲೂಟಿಕೋರ ಕಾರ್ಪೋರೇಟ್ ಖಾಸಗೀಕರಣದ ಪರವಿರುವ ಕೇವಲ ಅಧಿಕಾರ ಲಾಲಸೆಯಿಂದ ಮೀಸಲಾತಿಪರವೆಂಬ ಸೋಗಲಾಡಿ ಕಾಂಗ್ರೆಸ್ ಪಕ್ಷವನ್ನು ನಂಬಿ, ಇರುವ ಮೀಸಲಾತಿ ಸೌಲಭ್ಯವನ್ನು ಕಳೆದು ಕೊಳ್ಳುವ, ಅಪಾಯವನ್ನು ಮೈಮೇಲೆ ಎಳೆದು ಕೊಳ್ಳುವ ಕೆಲಸದಲ್ಲಿ ತೊಡಗಿವೆ.

ಇದೇ ಸಂದರ್ಭದಲ್ಲಿ, ಜನಸಂಖ್ಯೆಗನುಗುಣವಾಗಿ ಮೀಸಲಾತಿ ಹೆಚ್ಚಿಸಬೇಕೆಂಬ ಪರಿಶಿಷ್ಠರ ಹಕ್ಕೊತ್ತಾಯವನ್ನು ಪರಿಗಣಿಸದ ಒಕ್ಕೂಟ ಸರಕಾರ ಮೀಸಲಾತಿ ಆಚೆ ಇರುವ ಶೇ 5 ಕ್ಕಿಂತಲೂ ಕಡಿಮೆ ಇರುವ ಮೇಲ್ಜಾತಿಗಳ ವಾರ್ಷಿಕ 8 ಲಕ್ಷ ರೂ ಆದಾಯ ಹೊಂದಿರುವ ಜನಗಳಿಗೆ ಶೇ 10 ರಷ್ಟು ಮೀಸಲಾತಿಯನ್ನು ಜಾರಿಗೊಳಿಸಿದೆ.

ಇದು ಸ್ಪಷ್ಟವಾಗಿ ಸಾಮಾಜಿಕ ತಾರತಮ್ಯಕ್ಕೊಳಗಾದ ಸಮುದಾಯಗಳ ಮೀಸಲಾತಿಯನ್ನು ಮತ್ತಷ್ಟು ಕುಗ್ಗಿಸುವ ಹುನ್ನಾರವೇ ಆಗಿದೆ.

ಕರ್ನಾಟಕದಲ್ಲಿ ಇದು, ಪರಿಶಿಷ್ಟ ಜಾತಿ ಸಮುದಾಯಗಳ ಒಳಗೆ ಒಳ ಮೀಸಲಾತಿ ವಿರೋದಿಸುವ ಹೆಸರಿನಲ್ಲಿ ಪರಸ್ಪರ ಸಮುದಾಯಗಳನ್ನು ಮುಖಾಮುಖಿಯಾಗಿಸಿ ತನ್ನ ರಾಜಕೀಯ ಬೆಂಬಲವನ್ನು ಬಿಜೆಪಿ ಹೆಚ್ಚಿಸಿಕೊಳ್ಳುತ್ತಿದೆ.

ಈ ಅವಧಿಯಲ್ಲಿ ಹಲವು ಶೂದ್ರ ಹಿಂದುಳಿದ ಜಾತಿ ಸಮುದಾಯಗಳು ತಮಗೂ ಪರಿಶಿಷ್ಠ ಜಾತಿ ಹಾಗೂ ಪಂಗಡಗಳ ಸಮುದಾಯಗಳ ಪಟ್ಟಿ ಒಳಗೆ ಪ್ರವೇಶ ಬೇಕೆಂದು ಹೋರಾಡುತ್ತಿವೆ. ಲಿಂಗಾಯಿತ



ಸಮುದಾಯದ ಕೆಲ ಒಳ ಜಾತಿ ಸಮುದಾಯವು ತಮಗೂ ಮೀಸಲಾತಿ ಬೇಕೆಂದು ಮಠಾಧೀಶರ ನೇತೃತ್ವದಲ್ಲಿ ಚಳುವಳಿಗಿಳಿದಿವೆ.

ಅದೇ ರೀತಿ, ಬಡ್ತಿ ಮೀಸಲಾತಿ ವಿಚಾರವೂ ನೌಕರರ ನಡುವೆ ಪರಸ್ಪರರನ್ನು ಮುಖಾಮುಖಿಯಾಗಿಸುತ್ತಿದೆ. ಮೀಸಲಾತಿ ವಿರೋಧಿ ಶಕ್ತಿಗಳು ಇತರರನ್ನು ಬಡ್ತಿ ಮೀಸಲಾತಿ ಪಡೆಯುವವರ ಮೇಲೆ ಎತ್ತಿಕಟ್ಟುತ್ತಿವೆ.

ಇದೆಲ್ಲವೂ ಅಧಿಕಾರದಾಹಿ ಬಂಡವಾಳಶಾಹಿ–ಭೂಮಾಲಕ ರಾಜಕಾರಣದಿಂದ ಸಾಮಾಜಿಕ ತಾರತಮ್ಯಕ್ಕೊಳಗಾದ ಜನ ಸಮುದಾಯಗಳನ್ನು ಪರಸ್ಪರರ ನಡುವೆ ಮುಖಾಮುಖಿಯಾಗಿಸುವ ಮತ್ತು ಆರ್ಥಿಕವಾಗಿ ದುರ್ಬಲವಾಗಿರುವ ಸಮುದಾಯಗಳನ್ನು ಈ ಎಲ್ಲಾ ಸಮುದಾಯಗಳ ವಿರುದ್ದ ಎತ್ತಿಕಟ್ಟುವ ಕ್ರಮಗಳಾಗಿವೆ. ಇವು ಜನ ಸಮುದಾಯಗಳನ್ನು ಒಡೆದಾಳುವ ನೀತಿಗಳ ಭಾಗವಾಗಿ ಬರುತ್ತಿವೆ.

ಈ ಮುಖಾಮುಖಿಯಾಗುವ ನೀತಿಯಿಂದಾಗಿ ಈ ಸಮುದಾಯಗಳು ಇರುವ ಮೀಸಲು ಸೌಲಭ್ಯವನ್ನು ಕಳೆದುಕೊಳ್ಳುವಂತಾಗುತ್ತದೆ. ಮಾತ್ರವಲ್ಲಾ, ಇದು, ಜಾತಿ ತಾರತಮ್ಯದ ವಿರುದ್ದ ಜಾಗೃತಿ ಪಡೆದು ಮೀಸಲಾತಿ ನೆರವು ಕೇಳುವ ಸಮುದಾಯಗಳನ್ನು, ಎಂದಿನಂತೆ ಪರಸ್ರರನ್ನು ದ್ವೇಷಿಸುವ ಜಾತಿವಾದಿಗಳನ್ನಾಗಿಸಿ, ಜಾತಿ ಪದ್ದತಿಯ ಜಾಲದೊಳಗೆ ಸಿಲುಕಿಸಿ ಬಿಡುತ್ತದೆ..

ಈ ಕುರಿತು ಜಾಗೃತಿ ಮೂಡಿಸುವ ಅಗತ್ಯವಿದೆ. ದುರ್ಬಲ ಜನ ಸಮುದಾಯಗಳು ಮತ್ತು ಸಾಮಾಜಿಕ ತಾರತಮ್ಯಕ್ಕೊಳಗಾದ ಜನ ಸಮುದಾಯಗಳು ಒಗ್ಗೂಡಿ ಎರಡೂ ಸರಕಾರಗಳ ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾದ ಖಾಸಗೀಕರಣ ನೀತಿಗಳನ್ನು ತೀವ್ರವಾಗಿ ಪ್ರತಿರೋಧಿಸುತ್ತಾ, ಸಾರ್ವಜನಿಕ ರಂಗವನ್ನು ಬಲ ಪಡಿಸಿ, ವಿಸ್ಥರಿಸುವ ಮತ್ತು ಬೆಳೆಯುತ್ತಿರುವ ಜನ ಸಂಖ್ಯೆಗನುಗುಣವಾಗಿ ಸಾರ್ವಜನಿಕ ಶಿಕ್ಷಣ ಬಲಪಡಿಸುವ ಮತ್ತು ಸರಕಾರಿ ಉದ್ಯೋಗಗಳನ್ನು ವಿಸ್ಥರಿಸುವ ಖಾಲಿ ಇರುವ ಉದ್ಯೋಗ ಹಾಗೂ ಬ್ಯಾಕ್ ಲಾಗ್ ಉದ್ಯೋಗಗಳನ್ನು ತುಂಬುವಂತೆ ಒತ್ತಾಯಿಸಬೇಕಾಗಿದೆ.

ಪರಿಶಿಷ್ಟರ ಜನ ಸಮುದಾಯಗಳಿಗನುಗುಣವಾಗಿ ಮೀಸಲಾತಿ ಹೆಚ್ಚಳಕ್ಕೆ ಅದೇ ರೀತಿ, ಕೆನೆಪದರವನ್ನು ಹೊರತು ಪಡಿಸಿದ ಹಿಂದುಳಿದ ಜಾತಿ ಸಮುದಾಯಗಳ ಜನ ಸಂಖ್ಯೆಗನುಗುಣವಾದ ಮೀಸಲಾತಿ ಹೆಚ್ಚಳಕ್ಕೆ ಮತ್ತು ಬಡ್ತಿ ಮೀಸಲಾತಿಯಲ್ಲೂ ಇತರೆ ಹಿಂದುಳಿದ ಜಾತಿ ಸಮುದಾಯಗಳಿಗೂ ವ್ಯವಸ್ಥೆ ಮಾಡಲು ಒತ್ತಾಯಿಸುವ ಮೂಲಕ ಜನ ಸಮುದಾಯಗಳನ್ನು ಪರಸ್ಪರರ ವಿರುದ್ಧ ಎತ್ತಿಕಟ್ಟುವ ಮತ್ತು ಕಾರ್ಪೋರೇಟ್ ಕಂಪನಿಗಳ ಲೂಟಿಕೋರ ರಾಜಕಾರಣವನ್ನು ಸೆಣಸಲು ಕ್ರಮವಹಿಸ ಬೇಕಾಗಿದೆ.

ಬೊಮ್ಮಾಯಿ ಸರ್ಕಾರದಿಂದ ಏನನ್ನು ನಿರೀಕ್ಷಿಸಬಹುದು?

ಬಿಜೆಪಿ ಅಖಿಲ ಭಾರತ ವರಿಷ್ಠರ ನಿರ್ದೇಶನದಂತೆ ಹಾವೇರಿ ಜಿಲ್ಲೆ ಶಿಗ್ಗಾವಿ ಕ್ಷೇತ್ರದ ಶಾಸಕ ಬಸವರಾಜ ಬೊಮ್ಮಾಯಿ ರಾಜ್ಯದ 30 ನೇ ಮುಖ್ಯ ಮಂತ್ರಿಯಾಗಿ ಆಯ್ಕೆಯಾಗಿದ್ದಾರೆ. ಅವರು ರಾಜ್ಯದ ಮುಖ್ಯಮಂತ್ರಿಯಾಗುತ್ತಿರುವ 23 ನೇ ವ್ಯಕ್ತಿ. ಅವರ ತಂದೆ ಎಸ್. ಆರ್. ಬೊಮ್ಮಾಯಿ ರಾಜ್ಯದ 11 ನೇ ಮುಖ್ಯಮಂತ್ರಿಯಾಗಿ 1988 ರಿಂದ 1989 ರ ವರೆಗೆ ಸೇವೆ ಸಲ್ಲಿಸಿದ್ದರು. ಬಸವರಾಜ ಬೊಮ್ಮಯಿಯವರು ಬಿ.ಎಸ್. ಯಡಿಯೂರಪ್ಪರವರ ಪರಮಾಪ್ತರಲ್ಲಿ ಒಬ್ಬರಾಗಿದ್ದು ಸಹಜವಾಗಿ ಅವರ ಉತ್ತರಾಧಿಕಾರಿಯಾಗಿ ಮುಖ್ಯಮಂತ್ರಿ ಸ್ಥಾನವನ್ನು ಗಿಟ್ಟಿಸಿಕೊಂಡಿದ್ದಾರೆ.

ಬಸವರಾಜ ಬೊಮ್ಮಾಯಿಯವರು ತಂದೆಗೆ ತಕ್ಕ ಮಗ ಎಂದು ಹೇಳುವವರಿದ್ದಾರೆ. ಅಪ್ಪನ ಹಾದಿಯಲ್ಲೇ ನಡೆದು ಹೆಸರು ಮಾಡುತ್ತಾರೆ ಎಂದು ಅವರ ಅಭಿಮಾನಿಗಳ ನಿರೀಕ್ಷೆ. ಆದರೆ ಬಸವರಾಜ ಬೊಮ್ಮಾಯಿಯವರು ತನ್ನ ತಂದೆ ತುಳಿದ ರಾಜಕೀಯ ಹಾದಿಯನ್ನು ತ್ಯಜಿಸಿ ವರ್ಷಗಳೇ ಕಳೆದಿವೆ. ಎಸ್. ಆರ್. ಬೊಮ್ಮಾಯಿಯವರು ರಾಯಿಸ್ಟ್ ಸಮಾಜವಾದಿ ಸಿದ್ಧಾಂತವನ್ನು ಮೈಗೂಡಿಸಿಕೊಂಡವರು. ತಂದೆಯ ರಾಜಕೀಯ ಪಯಣವನ್ನು ಬಾಲ್ಯದಿಂದಲೇ ಗಮನಿಸುತ್ತಾ ಬಂದಿದ್ದ ಬಸವರಾಜ ಬೊಮ್ಮಾಯಿಯವರು ಸಮಾಜವಾದಿ ಚಿಂತನೆಯ ರಾಜಕೀಯವನ್ನೇ ಆಯ್ಕೆಮಾಡಿಕೊಂಡರು. ಬಹುಬೇಗ ಜನತಾ ಪರಿವಾರದ ಸಂಘಟನೆಯಲ್ಲಿ ಕ್ರಿಯಾಶೀಲರಾದರು. ಜಯಪ್ರಕಾಶ ನಾರಾಯಣ, ಲೋಹಿಯಾ ಸಿದ್ದಾಂತಗಳನ್ನು ಅಧ್ಯಯನ ಮಾಡಿದರು. ಆದರೆ ವಿಧಾನ ಪರಿಷತ್ತಿಗೆ ಆಯ್ಕೆಯಾಗುವ ಮೂಲಕ ಬಿಜೆಪಿಗೆ ಹತ್ತಿರವಾದರು. ಯಡಿಯೂರಪ್ಪರವರ ಪರಮಾಪ್ತರಾದರು. ಮುಂದೆ ಯಡಿಯೂರಪ್ಪರವರು ಬಿಜೆಪಿ ಬಿಟ್ಟು ಕೆಜೆಪಿ ಪಕ್ಷ ಕಟ್ಟಿದಾಗ ಬೊಮ್ಮಾಯಿರವರು ಬಿಜೆಪಿಯಲ್ಲಿಯೇ ಉಳಿದರು ಮಾತ್ರವಲ್ಲ ಯಡಿಯೂರಪ್ಪರವರನ್ನು ಮರಳಿ ಬಿಜೆಪಿಗೆ ಕರೆತರುವಲ್ಲಿಯೂ ಬಸವರಾಜ ಬೊಮ್ಮಾಯಿ ಪ್ರಮುಖ ಪಾತ್ರ ವಹಿಸಿದ್ದರು. ಇದರಿಂದಾಗಿ ಬಿಜೆಪಿ ವರಿಷ್ಠರಲ್ಲಿ ಬೊಮ್ಮಾಯಿ ಬಗ್ಗೆ ವಿಶ್ವಾಸ ಗಟ್ಟಿಗೊಳ್ಳಲು ಒಂದು ಕಾರಣವಾಯಿತು.

ಲಿಂಗಾಯತರ ಪೈಕಿ ಪಂಚಮಶಾಲಿ, ಬಣಜಿಗ ಮತ್ತು ಗಾಣಿಗೇರರು ರಾಜಕೀಯವಾಗಿ ಪ್ರಭಾವಿಗಳು. ಅವರೆಲ್ಲರನ್ನು ಒಂದುಗೂಡಿಸಿ ಯಡಿಯೂರಪ್ಪ ಅವರ ನಾಯಕರಾಗಿ ಹೊರಹೊಮ್ಮಿದ್ದರು. ಲಿಂಗಾಯತರ ಪೈಕಿ 'ಸಾದರು' ಅತಿ ಚಿಕ್ಕ ಉಪಪಂಗಡಕ್ಕೆ ಸೇರಿದವರಾಗಿದ್ದಾರೆ. ಬೊಮ್ಮಾಯಿಯವರು 'ಸಾದರ' ಒಳಪಂಗಡಕ್ಕೆ ಸೇರಿದವರು. ಮುಂದಿನ ದಿನಗಳಲ್ಲಿ ಲಿಂಗಾಯತರು ಒಳಪಂಗಡಗಳ ಆಧಾರದಲ್ಲಿ ತಿರುಗಿಬಿದ್ದರೆ ಅಚ್ಚರಿಯೇನಲ್ಲ.

ಅನಿರೀಕ್ಷಿತವಾಗಿ ರಾಜ್ಯದ ಮುಖ್ಯ ಮಂತ್ರಿಯಾಗಿರುವ ಬಸವರಾಜ ಅವರಿಂದ ಜನತೆ ಏನನ್ನು ನಿರೀಕ್ಷಿಸಬಹುದು. "ಪಕ್ಷದ ಸಿದ್ಧಾಂತ, ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ" ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದ್ದಾರೆ. ಬಿಜೆಪಿಯ ತತ್ವ ಸಿದ್ಧಾಂತಗಳು ಆರ್‌ಎಸ್‌ಎಸ್ ಸಿದ್ಧಾಂತಗಳೇ ಆಗಿರುತ್ತವೆ ಎಂಬ ವಿಷಯ ಎಲ್ಲರಿಗೂ ತಿಳಿದಿರುವುದೆ. ಬೊಮ್ಮಾಯಿ ಮಾತುಗಳಲ್ಲಿ ಯಾವುದೇ ಹೊಸತನವಿಲ್ಲ. ಸಮಾಜವಾದಿ ದಾರಿಯನ್ನು ತ್ಯಜಿಸಿ ಕೋಮುವಾದಿ ಪಥವನ್ನು ಆಯ್ಕೆಮಾಡಿಕೊಂಡಿರುವ ಬಸವರಾಜ ಬೊಮ್ಮಾಯಿಯವರಿಂದ ಯಾವ ಒಳ್ಳೆಯ ದಿನಗಳನ್ನು ನಿರೀಕ್ಷಿಸಬಹುದು? ಬೊಮ್ಮಾಯಿರವರು ಮೋದಿಯವರನ್ನು ಅವಲಂಬಿಸಿ ಆಡಳಿತ ನಡೆಸಬೇಕು. ಅವರಿಂದ ಯಾವ ಸ್ವತಂತ್ರ ಕಾರ್ಯಾಚರಣೆ ಸಾಧ್ಯವಿಲ್ಲ. ವ್ಯಕ್ತಿ ಬದಲಾವಣೆ ಮುಖ್ಯವಲ್ಲ. ಧೋರಣೆಗಳು ಬದಲಾಗಬೇಕು. ಜನತೆಯ ಆದಾಯ ಹೆಚ್ಚಿಸುವ, ನಿರುದ್ಯೋಗವನ್ನು ನಿರ್ಮೂಲನೆ ಮಾಡುವ, ರೈತರಿಗೆ ನ್ಯಾಯವನ್ನು ದೊರಕಿಸುವ, ಅಸ್ಪೃಶ್ಯತೆ, ಅಸಮಾನತೆ ಕಿತ್ತುಹಾಕುವ, ಮಹಿಳೆಯರಿಗೆ ರಕ್ಷಣೆಯನ್ನು ನೀಡುವ, ಜವಾಬ್ದಾರಿಯುತ ಆಡಳಿತವನ್ನು ನೀಡಲಾಗದೆ ಬೊಮ್ಮಾಯಿ ಸರ್ಕಾರ ಜನತೆಗೆ ಏನು ಒಳ್ಳೆಯದನ್ನು ಮಾಡಲು ಸಾಧ್ಯ. ಬೊಮ್ಮಾಯಿ ಅವರ ಆಡಳಿತ ಜನವಿರೋಧಿಯಾಗಿಯೇ ಮುಂದುವರೆದರೆ ಆಶ್ಚರ್ಯವೇನಿಲ್ಲ. ಅಷ್ಟು ಮಾತ್ರವಲ್ಲ. ಬೊಮ್ಮಾಯಿ ಆಡಳಿತ ಆರೆಸ್ಸೆಸ್ ಪ್ರೇರಿತ ಆಗಿರುವುದು ಖಚಿತ. ಕ್ರಿಯೆಗೆ ಪ್ರತಿಕ್ರಿಯೆ ಇರುತ್ತದೆ ಎಂದು ಹೇಳುವ ಮೂಲಕ ಅವರು ಹಿಂದುತ್ವ ಶಕ್ತಿಗಳಿಗೆ ಕುಮ್ಮಕ್ಕು ನೀಡಲು ಮತ್ತು ಆ ಮೂಲಕ ಆರೆಸ್ಸೆಸ್ ಮೆಚ್ಚಿಸಲು ಮುಂದಾಗುತ್ತಿದ್ದಾರೆ.

ಹಗರಣಗಳು, ಭ್ರಷ್ಟಾಚಾರ ಮತ್ತು ಬಿಜೆಪಿ ಸರ್ಕಾರ:

ರಾಜ್ಯದಲ್ಲಿನ ಗುತ್ತಿಗೆದಾರರು ಪ್ರಸಕ್ತ ಬಿಜೆಪಿ ಸರ್ಕಾರದಡಿ 40 ಶೇಕಡ ಲಂಚ ಕೇಳುವ ದುಸ್ಥಿತಿಯಿದೆ ಎಂದು ಪ್ರಧಾನಮಂತ್ರಿಗಳಿಗೆ ಪತ್ರ ಬರೆದು ಮಧ್ಯಪ್ರವೇಶಿಸಲು ಕೋರುವ ಹಂತಕ್ಕೆ ರಾಜ್ಯದಲ್ಲಿನ ಭ್ರಷ್ಟಾಚಾರ ತಲುಪಿದೆ. ಜನರನ್ನು ವಂಚಿಸಿದ ಐಎಂಎ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಹೇಳಲಾಗಿರುವ ಶಾಸಕರು ಬಿಜೆಪಿಗೆ ಸೇರ್ಪಡೆಯಾಗಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಯತ್ನದಲ್ಲಿದ್ದಾರೆ. ಇಡೀ ಹಗರಣದ ತನಿಖೆ ವಿಳಂಬವಾಗಿ ದಿಕ್ಕು ತಪ್ಪಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ.

ಅದರ ಬೆನ್ನ ಹಿಂದೆ ಮಾಜಿ ಸಿಎಂ ಯಡಿಯೂರಪ್ಪನವರ ಕಚೇರಿ ಸಿಬ್ಬಂದಿ ಮತ್ತು ಮತ್ತು ಆಪ್ತರ ಮನೆ ಮೇಲಿನ ದಾಳಿಯಲ್ಲಿ ಪತ್ತೆಯಾದ ನೂರಾರು ಕೋಟಿ ರೂಗಳು ಎಸಿಬಿ ದಾಳಿ ಮೇಲೆ ಸರ್ಕಾರಿ ಅಧಿಕಾರಿಗಳ ಮನೆ ಮುಂತಾದೆಡೆ ಲಭಿಸಿರುವ ಹಣ, ಚಿನ್ನಾಭರಣಗಳು ಭ್ರಷ್ಟಚಾರದ ಆಳ ಅಗಲವನ್ನು ತೋರುತ್ತದೆ.

ಬಿಬಿಎಂಪಿ ಯಲ್ಲಿ ಹಗರಣಗಳು 2018–19 ರ ಸಾಲಿನ ಆಡಿಟ್ ವರದಿಯಿಂದ ಬಹಿರಂಗಗೊಂಡಿವೆ. ಅಧಿಕಾರಿ ಮತ್ತು ಗುತ್ತಿಗೆದಾರರಿಂದ 144 ಕೋಟಿ ವಸೂಲಿಗೆ ಶಿಫಾರಸ್ಸು, 828 ಕೋಟಿ ರೂಗಳ ದುರ್ಬಳಕೆ, ಬೆಂಗಳೂರಿನಲ್ಲಿ ಇಲ್ಲದ ಜಮೀನು–ಕಟ್ಟಡಗಳಿಗೆ ಅಕ್ರಮವಾಗಿ ಅಭಿವೃದ್ಧಿ ಹಕ್ಕುಪತ್ರ (ಟಿಡಿಆರ್) ಪಡೆದು ರೂ.27.68 ಕೋಟಿಗೆ ಮಾರಾಟ ಮಾಡಿರುವ ದಲ್ಲಾಳಿಗಳು ಮತ್ತು ಅಧಿಕಾರಿಗಳ ಭ್ರಷ್ಟಾಚಾರ, ನಗರಾಭಿವೃದ್ಧಿ ಪ್ರಾಧಿಕಾರಗಳ ಅಪಾರ ಅಕ್ರಮಗಳು ರಾಜ್ಯವನ್ನು ಭ್ರಷ್ಟಾಚಾರದಲ್ಲಿ ನಂಬರ್ ಒಂದು ರಾಜ್ಯವನ್ನಾಗಿಸಿದೆ.

ಇತ್ತೀಚಿನ ಬಿಟ್‌ಕಾಯಿನ್ ಹಗರಣದ ಆರೋಪಿ ಶ್ರೀಕಿ ಸರ್ಕಾರಿ ಇಲಾಖೆಗಳ ಅಂತರ್ಜಾಲಗಳನ್ನು ಹ್ಯಾಕ್ ಮಾಡಿ ನೂರಾರು ಕೋಟಿ ರೂಗಳನ್ನು ಲಪಟಾಯಿಸಿರುವ ವರದಿಗಳು, ಆತನೊಂದಿಗಿನ ಕೆಲವು ರಾಜಕೀಯ ಪ್ರಭಾವಿಗಳ ನಂಟು, ಅದರ ಕುರಿತು ಸಮಗ್ರ ತನಿಖೆಗೆ ಕ್ರಮವಹಿಸದ ನಡೆಗಳು ಭ್ರಷ್ಟಾಚಾರ, ಹಗರಣಗಳಿಗೂ ಬಿಜೆಪಿ ಸರ್ಕಾರಕ್ಕೂ ಇರುವ ನೇರ ನಂಟನ್ನು ತೋರುತ್ತದೆ. ಹಾಗಾಗಿಯೇ ಬಿಬಿಎಂಪಿ ವ್ಯಾಪ್ತಿಯ 3 ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದಿರುವ ಭ್ರಷ್ಟಾಚಾರ ಕುರಿತು ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ವರದಿ ಸಲ್ಲಿಸಿ ವರ್ಷಗಳೆ ಕಳೆದರು ಕ್ರಮವಹಿಸದೆ ಇರುವ ನಡೆಗಳು ರಾಜ್ಯದ ಆರ್ಥಿಕ ಸಂಪನ್ಮೂಲ–ಜನತೆಯ ತೆರಿಗೆ ಹಣ ಭ್ರಷ್ಟರ ಪಾಲಾಗಿ, ಅಭಿವೃದ್ಧಿ ಕಾರ್ಯಗಳು ಸಮರ್ಥವಾಗಿ ನಡೆಯದ ದುಸ್ಥಿತಿ ನಿರ್ಮಿತವಾಗಿದೆ.

ಮಹಾಸೋಂಕು ಮತ್ತು ವರ್ಗವಿಭಜನೆ





ನೈಸರ್ಗಿಕ ವಿಕೋಪಗಳು, ಅಂಟುಜಾಡ್ಯಗಳು ಹಾಗೂ ಪರಿಸರ ನಾಶ ಇವುಗಳ ಪರಿಣಾಮಗಳು ಎಲ್ಲ ವರ್ಗಗಗಳ ಮೇಲೂ ಒಂದೇ ತೆರನಾಗಿರುವುದಿಲ್ಲ. ಇವುಗಳಿಂದಾಗಿ ಹೆಚ್ಚು ಬಾಧೆಪಡುವುದು ಬಡವರೇ.ಈ ಮಹಾಸೋಂಕಿನ ಸಮಯದಲ್ಲಿ ಶೇರು ಮಾರುಕಟ್ಟೆಯು ಬಹಳ ಮುಂಚೆಯೇ ಚೇತರಿಸಿಕೊಂಡಿತು ಮತ್ತು ಹಣಕಾಸಿನ ಲಾಭಗಳು ಹೆಚ್ಚಾದವು. ತಂತ್ರಜ್ಞಾನದ ದೈತ್ಯ ಕಂಪನಿಗಳ ಲಾಭಗಳು ವಿವಿಧ ರೂಪದಲ್ಲಿ ಹೆಚ್ಚಾದವು ಮತ್ತು ದೊಡ್ಡ ಚಿಲ್ಲರೆ ವ್ಯಾಪಾರಿಗಳ ಆನ್‌ಲೈನ್ ಖರೀದಿಯು ಈ ಸಮಯದಲ್ಲಿಯೇ ವ್ಯಾಪಕವಾಗಿ ವಿಸ್ತಾರಗೊಂಡಿದೆ. ಮುಖೇಶ್ ಅಂಬಾನಿಯವರು ಇದೇ ಸಮಯದಲ್ಲಿ ಜಗತ್ತಿನ ಅತ್ಯಂತ ದೊಡ್ಡ ಶ್ರೀಮಂತರಾಗಿ ಹೊರಹೊಮ್ಮಿದ್ದಾರೆ.ಚಿಕ್ಕಟ್ಟಿನ ಸಂದರ್ಭಗಳಲ್ಲಿ ಕಾರ್ಪೊರೇಟ್‌ಗಳನ್ನು ಪಾರು ಮಾಡಲಾಗುತ್ತದೆ ಮತ್ತು ಸಂಪಾದನೆಯಲ್ಲಿ ನಷ್ಟ, ನಿರುದ್ಯೋಗ, ಹಸಿವು, ಸಾವು ಮತ್ತು ಹಾನಿಯ ರೂಪದಲ್ಲಿ ಮಹಾಸೋಂಕಿನ ಅತ್ಯಂತ ಕೆಟ್ಟ ಪರಿಣಾಮಗಳನ್ನು ಬಡವರು ಅನುಭವಿಸಬೇಕಾಗುತ್ತದೆ.

ಸಂಜಯ್ ರಾಯ್ ಅನು: ಟಿ. ಸುರೇಂದ್ರ ರಾವ್

ಮಹಾಸೋಂಕು ಮತ್ತು ಅದರ ಪರಿಣಾಮಗಳು ಜಗತ್ತಿನ ವಿವಿಧ ಭಾಗಗಳಲ್ಲಿ ಪ್ರಕಟಗೊಂಡಿವೆ, ಬಹಳ ಮುಖ್ಯವಾಗಿ, ಜನವರ್ಗಗಳು ಹಾಗೂ ಜನವಿಭಾಗಗಳ ಮೇಲೆ ಬೀರಿದ ಅದರ ವಿಭಿನ್ನ ಪರಿಣಾಮಗಳು, ಬಂಡವಾಳಶಾಹಿ ತನ್ನ ಸಂಚಯನದ ಪ್ರಕ್ರಿಯೆಯಲ್ಲಿ ಆಳವಾದ ಕಂದರಗಳನ್ನು ಹಾಗೂ ಸಂರಚನಾ ವಿಭಜನೆಗಳನ್ನು ಹುಟ್ಟುಹಾಕುತ್ತದೆ ಎಂಬುದನ್ನು ಹೊರಗೆಡಹಿವೆ.

ಇಪ್ಪತ್ತನೇ ಶತಮಾನದಲ್ಲಿ 1918 ರ 'ಸ್ಪ್ಯಾನಿಶ್ ಫ್ಲೂ'ನ ನಂತರ ನಾವು ಎರಡು ಮಹಾಸೋಂಕುಗಳನ್ನು (1957 ರ ಏಶಿಯನ್ ಫ್ಲೂ ಮತ್ತು 1968 ರ ಹಾಂಗ್‌ಕಾಂಗ್ ಫ್ಲೂ) ಎದುರಿಸಿದ್ದೇವೆ. ಇಪ್ಪತ್ತೊಂದನೇ ಶತಮಾನದಲ್ಲಿ ನಾವು ಈಗಾಗಲೇ 2009 ರಲ್ಲಿ ಏವಿಯನ್ ಫ್ಲೂ, 2002 ರಲ್ಲಿ ಸಾರ್ಸ್(SARS), 2012 ರಲ್ಲಿ ಮೆರ್ಸ್(MERS) ಮತ್ತು 2013-14 ರಲ್ಲಿ ಎಬೋಲಾ ಅಂತಿಮವಾಗಿ ಈಗ 2020ರಲ್ಲಿ ಕೋವಿಡ್-19 ಕಾಣುತ್ತಿದ್ದೇವೆ.

ಈ ಮಹಾಸೋಂಕುಗಳ ಪುನರಾವರ್ತನೆಯು ಕಾಲ ಸರಿದಂತೆ ಹೆಚ್ಚಾಗುತ್ತಲೇ ಇದೆ ಮತ್ತು ಬಹು ಮುಖ್ಯವಾಗಿ, ನಂತರದ ಈ ಬಹುತೇಕ ಮಹಾಸೋಂಕುಗಳ ಮೂಲವನ್ನು ದಕ್ಷಿಣ ಗೋಳಾರ್ಧದಲ್ಲಿ ಪತ್ತೆಹಚ್ಚಲಾಗಿದೆ. ಇತ್ತೀಚಿನ ಪ್ರಕರಣಗಳಲ್ಲಿ ಮಾನವ-ಮಾನವರ ನಡುವಿನ ಹರಡಿಕೆ ಉಂಟಾಗಿರುವುದು ದಕ್ಷಿಣ ಗೋಳಾರ್ಧ,' ವಿಶೇಷವಾಗಿ ಜಾಗತಿಕ ಕೃಷಿ ವ್ಯಾಪಾರದ ಕೇಂದ್ರಗಳಾದ ಪಟ್ಟಣಗಳಲ್ಲಿ; ವಾಣಿಜ್ಯ ಮಾರ್ಗಗಳು ಮತ್ತು ಜಾಗತಿಕ ಮೌಲ್ಯ ಸರಪಳಿಗಳ ಮೂಲಕ ಅದು ಜಾಗತಿಕವಾಗಿ ಹಬ್ಬಿದೆ; ಬಹುವಾಗಿ ಪಟ್ಟಣಗಳ, ಜನನಿಬಿಡ ಕೊಳಚೆ ಪ್ರದೇಶಗಳು, ಕೈಗಾರಿಕಾ ಪ್ರದೇಶಗಳು ಹಾಗೂ ವಲಸಿಗರ ಸಮೂಹಗಳಲ್ಲಿ ಆ ವೈರಾಣುವು ಬಹುವಾಗಿ ಹರಡುತ್ತದೆ ಎಂದು ಪರಿಗಣಿಸಲಾಗಿದೆ. ಆದರೆ ಈ ಬಾರಿ ಅದರ ಹರಡಿಕೆ, ಹಿಂದಿನ ರೋಗಗಳಂತೆ ಜಗತ್ತಿನ ಕತ್ತಲ ಹಾಗೂ ಬಡವರ ಪ್ರದೇಶಕ್ಕೆ ಸೀಮಿತವಾಗಲಿಲ್ಲ; ಬದಲಿಗೆ ಅದು ಬಂಡವಾಳವಾದದ ಕೋಟೆಗೆ ಲಗ್ಗೆಯಿಟ್ಟಿದೆ, ಶ್ರೀಮಂತರು ಹಾಗೂ ಸಂಪದ್ಭರಿತ ಕೇಂದ್ರಗಳು ತಾವು ಇದರಿಂದ ದೂರವಿರುತ್ತೇವೆ, ಬಡವರಿಗೆ ನೆರವು ಒದಗಿಸುವವರಾಗಿಯೇ ಇರುತ್ತೇವೆ ಎಂದು ಕಾಣುವುದು ಸಾಧ್ಯವಾಗಲಿಲ್ಲ.

ನಿರ್ದಯ ಲಾಭಕೋರತನ

ಬಂಡವಾಳಶಾಹಿಯು ತನ್ನ ನವ-ಉದಾರವಾದಿ ಹಂತದಲ್ಲಿ ನಿಸರ್ಗವನ್ನು ನಿರ್ದಯವಾಗಿ ತನ್ನ ಲಾಭದಾಸೆಗೆ ಬಳಸಿಕೊಳ್ಳುತ್ತದೆ ಮತ್ತು ಶ್ರಮ ಹಾಗೂ ನಿಸರ್ಗ ಸುಲಭವಾಗಿ ಕಡಿಮೆ ಬೆಲೆಗೆ ಸಿಗುವಂತಹ ಸ್ಥಳಗಳಿಗೆ ತನ್ನ ಉತ್ಪಾದನಾ ಚಟುವಟಿಕೆಗಳನ್ನು ವರ್ಗಾಯಿಸುತ್ತದೆ. ಲಾಭ ಗಳಿಕೆಗಾಗಿಯೇ ಜಾನುವಾರು ಕ್ರಾಂತಿ ಮತ್ತು ಅದರ ಪರಿಣಾಮವಾಗಿ ಆಹಾರ ಉತ್ಪನ್ನಗಳ ಸರಕೀಕರಣ, ಲಂಬಾತ್ಮಕ ಸಮಗ್ರೀಕರಿಸಿದ ಸಂರಚನೆಗಳಲ್ಲಿ ದೊಡ್ಡ ಪ್ರಮಾಣದ ಉತ್ಪಾದನೆ, ಜೈವಿಕ ತಂತ್ರಜ್ಞಾನದ ಹೊಸ ಶೋಧಗಳು ಮತ್ತು ಅಂತಹ ಮೌಲ್ಯ ಸರಪಳಿಗಳ ಕಾರ್ಪೊರೇಟೀಕರಣ ಇವುಗಳನ್ನೆಲ್ಲ ವಿಮರ್ಶಾತ್ಮಕವಾಗಿ ನೋಡಬೇಕಾದ ಅಗತ್ಯವಿದೆ.

ಜಾನುವಾರು ತಳಿ ಬೆಳೆಸುವಿಕೆ, ಜಲಕೃಷಿ, ತೋಟಗಾರಿಕೆ ಮತ್ತು ದೊಡ್ಡ ಪ್ರಮಾಣದ ಕೋಳಿ ಸಾಕಾಣಿಕೆ ಹಾಗೂ ಹಂದಿ ಸಾಕಾಣಿಕೆ ಉದ್ದಿಮೆಯನ್ನು ಕಾರ್ಪೊರೇಟೀಕರಣಗೊಳಿಸಲಾಗಿದೆ. ಇದರಲ್ಲಿ ಅಪಾರ ಪ್ರಮಾಣದ ಹೂಡಿಕೆಗಳು ಮತ್ತು ದೇಶದ ಉದ್ದಗಲಕ್ಕೂ ಮೌಲ್ಯ ಸರಪಳಿಗಳು ಉಂಟಾಗಿವೆ. ಉತ್ಪಾದನೆಗಳನ್ನು ದಕ್ಷಿಣ ಗೋಳಾರ್ಧದಲ್ಲಿ ನೆಲೆಗೊಳಿಸಲಾಗಿದೆ; ಏಕೆಂದರೆ ಅಲ್ಲಿ ಮೇವು ಉತ್ಪಾದನೆ, ಬಹು ನಿರ್ದಿಷ್ಟವಾಗಿ ಕಾಳುಗಳ ಉತ್ಪಾದನೆಯ ವೆಚ್ಚ ಬಹಳ ಕಡಿಮೆ, ಕೂಲಿದರಗಳು ಮುಂದುವರಿದ ದೇಶಗಳ ಸರಾಸರಿಗಿಂತ ಬಹಳ ಕಡಿಮೆ ಇರುತ್ತವೆ ಮತ್ತು ಪರಿಸರ ನಿಯಮಗಳು ಸಡಿಲವಾಗಿವೆ. ಅಂತಹ ಕೃಷಿವಾಣಿಜ್ಯ ಸರಪಳಿಗಳ ಕೊನೆತಾಣಗಳು ವೈರಾಣುಗಳ ಸಾರಿನ ತಟ್ಟೆಗಳಾಗಿವೆ, ಅಲ್ಲಿ ಮನುಷ್ಯರು ಪ್ರಾಣಿಗಳು, ಪಕ್ಷಿಗಳ ಜತೆ ಹತ್ತಿರದ ಸಂಪರ್ಕ ಪಡೆಯುತ್ತಾರೆ, ಮನುಷ್ಯರ ದೇಹಕ್ಕೆ ಅಲ್ಲಿ ರೋಗಕಾರಕಗಳು ಸುಲಭವಾಗಿ ಪ್ರವೇಶ ಪಡೆಯುತ್ತವೆ.

ವಾತಾವರಣ ಬದಲಾವಣೆ, ಅರಣ್ಯನಾಶ ಮತ್ತು ಮನುಷ್ಯರಿಂದ ಜೀವವೈವಿಧ್ಯ ಹಸ್ತಕ್ಷೇಪಗಳು ಕೆಲವು ವೇಳೆ ಪರಿಸರ ಅಸಮತೋಲನಕ್ಕೆ ಕಾರಣವಾಗುತ್ತವೆ ಹಾಗೂ ಕಾಡುಪ್ರಾಣಿಗಳ, ಪಕ್ಷಿಗಳ ಹಾಗೂ ಕೀಟಗಳ ಆವಾಸಸ್ಥಾನಗಳು ನಾಶವಾಗುತ್ತವೆ; ಅಂತಿಮವಾಗಿ ಈ ಆವಾಸಸ್ಥಾನಗಳಿಗೆ ಬಹಳ ಸಮೀಪದಲ್ಲಿರುವ ಜನರಿಗೆ ರೋಗ ಅಂಟಿಕೊಳ್ಳುತ್ತದೆ. ನಿಜ ಹೇಳಬೇಕೆಂದರೆ ಬೇರೆಲ್ಲಾ ಜೀವಿಗಳಿಗೆ ಇಲ್ಲದ ಅನುಕೂಲಗಳು ಮನುಷ್ಯರಿಗೆ ಸಂತಾನೋತ್ಪತ್ತಿಗೆ ಅನುಕೂಲಕರ ವಾತಾವರಣ ಸೃಷ್ಟಿಮಾಡಿಕೊಳ್ಳುವ ಅಸಾಧಾರಣ ಸಾಮರ್ಥ್ಯ ಇರುತ್ತದೆ; ಮತ್ತು ಅವರು ತಮ್ಮ ಸುತ್ತಮುತ್ತಲ ವಾತಾವರಣವನ್ನು ಬದಲಾಯಿಸುವ ಸಾಮರ್ಥ್ಯ ಹೊಂದಿರುತ್ತಾರೆ ಹಾಗೂ ಆ ಪ್ರಕ್ರಿಯೆಯಲ್ಲಿ ಅವರು ಕೂಡ ಬದಲಾಗುತ್ತಾರೆ. ಆದರೆ ಮನುಷ್ಯರು ನಿಸರ್ಗದ ಅವಿಭಾಜ್ಯ ಅಂಗವೇ ಆಗಿದ್ದಾರೆ, ಅದರೊಳಗೇ ಬದುಕುತ್ತಾರೆ ಮತ್ತು ಲಾಭವನ್ನು ಬೆನ್ನತ್ತುವ ಬಂಡವಾಳವಾದವು ನಿಯಂತ್ರಣವೇ ಇಲ್ಲದೆ ನಿಸರ್ಗವನ್ನು ಸ್ವಾಧೀನಪಡಿಸಿಕೊಳ್ಳುವ ಸ್ವಾಯತ್ತ ಪ್ರಕ್ರಿಯೆಗೆ ಶಕ್ತಿತುಂಬುತ್ತದೆ, ಅದು ಅಂತಿಮವಾಗಿ ಬಂಡವಾಳವಾದಕ್ಕಷ್ಟೇ ಅಲ್ಲ, ಅಂತಿಮವಾಗಿ, ಮಾನವ ಕುಲಕ್ಕೇ ಬಿಕ್ಕಟ್ಟನ್ನು ಸೃಷ್ಟಿ ಮಾಡುತ್ತದೆ.

ಏನೆಂದರೆ ಲಾಭಕ್ಕಾಗಿನ ಲಂಗುಲಗಾಮಿಲ್ಲದ ಹಂಬಲದ ಕಾರಣ ನೈಸರ್ಗಿಕ ಪ್ರಕ್ರಿಯೆಯಲ್ಲಿ ಮನುಷ್ಯನ ಹಸ್ತಕ್ಷೇಪವಾಗುತ್ತಿರುವುದು ಮತ್ತು ಆ ಕಾರಣ ಪರಸ್ಪರ ಸಂಬಂಧವಿರುವ ಪ್ರಕ್ರಿಯೆಗಳ ಪರಿಣಾಮಗಳ ಬಗ್ಗೆ ಸ್ವಲ್ಪವೂ ಕಾಳಜಿಯಿಲ್ಲದೇ ನಿಯಂತ್ರಣಕ್ಕೆ ಒಳಪಡಿಸುವ ಪ್ರಯತ್ನ ನಡೆಯುತ್ತದ ಎಂಬುದನ್ನು ಪ್ರಸ್ತುತ ಮಹಾಸೋಂಕು ಮತ್ತೊಮ್ಮೆ ಒತ್ತಿ ಹೇಳುತ್ತಿದೆ.ಇದು ಒಂದು ನಿರ್ದಿಷ್ಟ ವರ್ಗ ಪ್ರಕ್ರಿಯೆ, ಅಂದರೆ ಬಂಡವಾಳ ಸಂಬಂಧಗಳ ವರ್ಗ ಪ್ರಕ್ರಿಯೆಯ ಗುಣಲಕ್ಷಣಗಳೇ ಹೊರತು ಹೊರತು ವಿಶಿಷ್ಟ ಗುಣಲಕ್ಷಣಗಳು; ಎಲ್ಲಾ ರೀತಿಯ ಮನುಷ್ಯನ ತೊಡಗುವಿಕೆಗೆ ನಿಸರ್ಗ ತೋರುವ ಅನಿವಾರ್ಯ ಪ್ರತೀಕಾರವಂತೂ ಖಂಡಿತಾ ಅಲ್ಲ.

ನೈಸರ್ಗಿಕ ವಿಕೋಪಗಳು, ಅಂಟುಜಾಡ್ಯಗಳು ಹಾಗೂ ಪರಿಸರ ನಾಶ ಇವುಗಳ ಪರಿಣಾಮಗಳು ಎಲ್ಲ ವರ್ಗಗಗಳ ಮೇಲೂ ಒಂದೇ ತೆರನಾಗಿರುವುದಿಲ್ಲ. ಇವುಗಳಿಂದಾಗಿ ಹೆಚ್ಚು ಬಾಧೆಪಡುವುದು ಬಡವರೇ ಸರಿ. ಏಕೆಂದರೆ ಅದನ್ನು ಸರಿಪಡಿಸಲು ಅಥವಾ ಸುರಕ್ಷತಾ ಉಪಕರಣಗಳನ್ನು ಕೊಳ್ಳಲು ಅಥವಾ ರೋಗ ವಾಸಿಮಾಡಿಕೊಳ್ಳಲು ಖರ್ಚು ಮಾಡುವ ಪರಿಸ್ಥಿತಿಯಲ್ಲಿ ಅವರು ಇಲ್ಲ. ಪೌಷ್ಟಿಕಾಂಶಗಳ ಕೊರತೆಯಿರುವವರು ರೋಗದಿಂದ ರಕ್ಷಣೆ ಪಡೆಯಲು ಸಾಧ್ಯವಿಲ್ಲ; ಬಡವರು ಜನನಿಬಿಡ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಾರೆ ಮತ್ತು ಬಹಳ ಸುಲಭವಾಗಿ ರೋಗಕ್ಕೆ ಸಿಲುಕಿಕೊಳ್ಳುತ್ತಾರೆ, ಅವರು ಮನೆಯಲ್ಲಿ ಇರಲು ಸಾಧ್ಯವಿಲ್ಲ, ದುಡಿಯಲು ಹೊರಗೆ ಹೋಗಲೇ ಬೇಕಾಗುತ್ತದೆ, ಅವರ ಬಳಿ ಯಾವ ಉಳಿತಾಯದ ಹಣವೂ ಇರುವುದಿಲ್ಲ, ಮನೆಯಿಂದ ಕೆಲಸ ಮಾಡುವ ಆಯ್ಕೆ ಅವರಿಗಿರುವುದಿಲ್ಲ; ಅನೌಪಚಾರಿಕ ಕೆಲಸಗಾರರು, ವಲಸೆ ಕಾರ್ಮಿಕರು ಮತ್ತು ಸ್ವಯಂಉದ್ಯೋಗಿಗಳು ತಮ್ಮ ಕೆಲಸ ಹಾಗೂ ಆದಾಯ ಕಳೆದುಕೊಳ್ಳುತ್ತಾರೆ; ಆದರೆ ಶ್ರೀಮಂತರು ತಮ್ಮ ಹಣ, ಅಧಿಕಾರ ಹಾಗೂ ಸಾಮಾಜಿಕ ಬಂಡವಾಳವನ್ನು ಬಳಸಿ ಕಷ್ಟದ ದಿನಗಳಲ್ಲೂ ಹೇಗೋ ಪಾರಾಗುತ್ತಾರೆ.

ಮಾನಸಿಕ ಹಾಗೂ ದೈಹಿಕ ಶ್ರಮದ ನಡುವಿನ ವಿಭಜನೆ ಮತ್ತು ವರ್ಗ ವಿಭಜಿತ ಸಮಾಜಗಳು ಸೃಷ್ಟಿಸಿರುವ ಕಲ್ಪಿತ ಶ್ರೇಣಿವ್ಯವಸ್ಥೆಯು ಹಿಂದೆಂದಿಗಿಂತಲೂ ಈಗ ಹೆಚ್ಚು ಸ್ಪಷ್ಟವಾಗಿದೆ. ಉತ್ಪಾದನೆಯ ತೀವ್ರತರದ ಚಟುವಟಿಕೆಗಳಲ್ಲಿ ಸಮಾಜದ ಕಡುಬಡವ ವಿಭಾಗಗಳು ಪ್ರಮುಖವಾಗಿ ದೈಹಿಕ ಶ್ರಮವನ್ನು ಪೂರೈಸುತ್ತಾರೆ, ಅದೇ ಸಮಯದಲ್ಲಿ ಮಾನಸಿಕ ಶ್ರಮವನ್ನು ದೂರದಿಂದಲೇ ನಿರ್ವಹಿಸುವಲ್ಲಿ ಶ್ರೀಮಂತರು ಹಾಗೂ ಮಧ್ಯಮ ವರ್ಗದವರು ಬಹುವಾಗಿ ತೊಡಗಿಕೊಳ್ಳುವುದನ್ನು ಕಾಣುತ್ತೇವೆ. ಇದಕ್ಕೂ ಮಿಗಿಲಾಗಿ, ವಾಸ್ತವವಾಗಿ ಕೆಲಸಮಾಡುವ ಶ್ರಮಜೀವಿಗಳು ಸೋಂಕು ತಗುಲುವ ಅಪಾಯದಲ್ಲಿ ಇರುತ್ತಾರೆ ಮತ್ತು ಅವರನ್ನು 'ಕೊರೋನಾ ವಾಹಕ'ರು ಎಂದು ಹೀಯಾಳಿಸಲಾಗುತ್ತಿದೆ; ಈ ಕಾರಣದಿಂದಾಗಿ ಅವರನ್ನು ಮೆಟ್ರೋ ನಗರಗಳಿಂದ ಉಚ್ಚಾಟಿಸುವುದು ಒಂದು ಕಡೆಯಾದರೆ, ಸರ್ಕಾರಗಳು ಹಾಗೂ ಜನಸಮುದಾಯ ಅವರ ಮೇಲೆ ಕಳಂಕ ಹೊರಿಸಿ ಅಪಪ್ರಚಾರ ಮಾಡುತ್ತಿರುವುದರಿಂದಾಗಿ ಶ್ರಮಜೀವಿಗಳ ಊರುಗಳಲ್ಲಿ ಕೂಡ ಅವರನ್ನು ಸೇರಿಸಿಕೊಳ್ಳದಿರುವ ಅಮಾನವೀಯ ಸ್ಥಿತಿಯನ್ನು ತಲುಪಿದೆ.

ಬಡವರೇ ಹೆಚ್ಚು ಕಷ್ಟ ಅನುಭವಿಸುತ್ತಾರೆ

ಈ ಮಹಾಸೋಂಕು ಎಲ್ಲರಿಗೂ ಒಂದೇ ಸಮನಾಗಿ ಕೆಟ್ಟದಾಗಿಲ್ಲ. ವಾಸ್ತವದಲ್ಲಿ, ಈ ಮಹಾಸೋಂಕಿನ ಸಮಯದಲ್ಲಿ ಶೇರು ಮಾರುಕಟ್ಟೆಯು ಬಹಳ ಮುಂಚೆಯೇ ಚೇತರಿಸಿಕೊಂಡಿತು ಮತ್ತು ಹಣಕಾಸಿನ ಲಾಭಗಳು ಹೆಚ್ಚಾದವು. ತಂತ್ರಜ್ಞಾನದ ದೈತ್ಯ ಕಂಪನಿಗಳ ಲಾಭಗಳು ವಿವಿಧ ರೂಪದಲ್ಲಿ ಹೆಚ್ಚಾದವು ಮತ್ತು ದೊಡ್ಡ ಚಿಲ್ಲರೆ ವ್ಯಾಪಾರಿಗಳ ಆನ್‌ಲೈನ್ ಖರೀದಿಯು ಈ ಸಮಯದಲ್ಲಿಯೇ ವ್ಯಾಪಕವಾಗಿ ವಿಸ್ತಾರಗೊಂಡಿದೆ. ಮುಖೇಶ್ ಅಂಬಾನಿಯವರು ಇದೇ ಸಮಯದಲ್ಲಿ ಜಗತ್ತಿನ ಅತ್ಯಂತ ದೊಡ್ಡ ಶ್ರೀಮಂತರಾಗಿ ಹೊರಹೊಮ್ಮಿದ್ದಾರೆ. ಅವರು ಈಗ ಒಂದು ಗಂಟೆಗೆ ರೂ.90 ಕೋಟಿ ಸಂಪಾದನೆ ಮಾಡುತ್ತಿದ್ದಾರೆ, ಆದರೆ ಅದೇ ಸಂದರ್ಭದಲ್ಲಿ ಶೇಕಡಾ 24 ರಷ್ಟು ಭಾರತೀಯರು ಮಾಸಿಕ ರೂ..3000/- ಕಿಂತಲೂ ಕಡಿಮೆ ಸಂಪಾದನೆ ಮಾಡುತ್ತಿದ್ದಾರೆ. ಇಂತಹ ಅಸಾಧಾರಣ ಕಾಲದಲ್ಲಿ ಭಾರತೀಯ ಬಿಲಿಯನರುಗಳ ಸಂಪತ್ತು 35% ಏರಿಕೆಯಾಗಿದೆ

ಪುಟ 14 ನೋಡಿ



ಲಾಕ್‌ಡೌನ್‌ನಲ್ಲಿ ಅಡುಗೆ
"ಮಕ್ಕಳಿಗೆ ಇವತ್ತೇನು ಮಾಡಲಿ?"





ನ್ಯಾಯಯುತ ಪರಿಹಾರ ನೀಡುವಲ್ಲಿ ಸರ್ಕಾರ ವಿಫಲ – ಜಿ.ಸಿ. ಬಯ್ಯಾರೆಡ್ಡಿ

ಬಂಗಾರಪೇಟೆ ತಾಲ್ಲೂಕಿನ ಕಲ್ಲುಕೆರೆ ಗ್ರಾಮದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೂ ಕೆಪಿಆರ್‌ಎಸ್ ಸಮಿತಿ ವತಿಯಿಂದ ಬೆಂಗಳೂರು–ಚೆನ್ನೈ ಎಕ್ಸ್ ಪ್ರೆಸ್‌ವೇ ಸಂತ್ರಸ್ತ ರೈತರಿಗೆ ನ್ಯಾಯಯುತ ಪರಿಹಾರ ನೀಡಲು ಒತ್ತಾಯಿಸಿ ಹಮ್ಮಿಕೊಂಡಿದ್ದ ಪಾದಯಾತ್ರೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಮಾತನಾಡಿದ ಅವರು, ನಾನು ಈಗಾಗಲೇ ಜಿಲ್ಲಾಧಿಕಾರಿಗಳ ಬಳಿ ಮಾತನಾಡಿದ್ದೇನೆ, ಜನವರಿ 1 ರಂದು ನೀವು ಸೂಚಿಸುವ ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಬರಲಿದ್ದಾರೆ, ನಮ್ಮ ಸಮಸ್ಯೆಗಳನ್ನು ಅವರ ಗಮನಕ್ಕೆ ತಂದು ಶಾಂತಿಯುತವಾಗಿ ಬಗೆಹರಿಸಿಕೊಳ್ಳೋಣ, ನಿಮಗೆ ಜಯ ಸಿಗುವವರೆಗೂ ನಿಮ್ಮೊಂದಿಗೆ ಇರುತ್ತೇನೆ, ಪಾದಯಾತ್ರೆ ಹಿಂದಕ್ಕೆ ಪಡೆಯಬೇಕೆಂದು ಮನವಿ ಮಾಡಿದರು.

ಕೆಪಿಆರ್‌ಎಸ್‌ನ ರಾಜ್ಯಾಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ ಮಾತನಾಡಿ, ನಾವು ರಸ್ತೆ ಬೇಡ ಎಂದು ಹೇಳಿಲ್ಲ, ರೈತರಿಗೆ ನ್ಯಾಯಯುತ ಪರಿಹಾರ ನೀಡಬೇಕು, ರೈತರು ಸಂಪೂರ್ಣ ಭೂಮಿ ಕಳೆದುಕೊಂಡರೆ ಸರ್ಕಾರವೇ ಪುನರ್ ವಸತಿ ಮಾಡಬೇಕೆಂದು ಆದೇಶವಿದೆ ಎಂದರು. ನ್ಯಾಯಯುತ ಪರಿಹಾರ ನೀಡುವಲ್ಲಿ ಸರ್ಕಾರ ವಿಫಲವಾಗಿದೆ ಎಂದರು. ಜನವರಿ 7 ರವರೆಗೆ ಮಾತುಕತೆ ನಡೆಯುವವರೆಗೆ ಪಾದಯಾತ್ರೆಯನ್ನು ಹಿಂದಕ್ಕೆ ಪಡೆಯುತ್ತಿರುವುದಾಗಿ ಪ್ರಕಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಕಲಾವಿದಸ್ವಾಮಿ ವಹಿಸಿದ್ದರು. ಕಾರ್ಮಿಕ ಮುಖಂಡ ಗಾಂಧಿನಗರ ನಾರಾಯಣಸ್ವಾಮಿ, ಜನವಾದಿ ಮಹಿಳಾ ಸಂಘಟನೆಯ ಗೀತಾ, ಕೆಪಿಆರ್‌ಎಸ್ ಪ್ರಧಾನ ಕಾರ್ಯದರ್ಶಿ ಪಿ. ಶ್ರೀನಿವಾಸ್, ಮರಗಲ್ ಶ್ರೀನಿವಾಸ್, ಟಿ.ಎನ್. ರಾಮೇಗೌಡ, ಪ್ರಸನ್ನಕುಮಾರ್ ಇದ್ದರು.

ಬೀಡಿ ಕಾರ್ಮಿಕರಿಗೆ ಜೀವನ ಭದ್ರತೆ ಒದಗಿಸಬೇಕು

ಬೀಡಿ ಕಾರ್ಮಿಕರ 27 ನೇ ತಾಲೂಕು ವಾರ್ಷಿಕ ಮಹಾಸಭೆಯಲ್ಲಿ ಆಗ್ರಹ

ಕರಾವಳಿಯಲ್ಲಿ ಬೀಡಿ ಕಾರ್ಮಿಕರ ಜೀವನ ದುಸ್ತರವಾಗುತ್ತಿದೆ. ಕೆಲಸವನ್ನೇ ನಂಬಿದ ಸಾವಿರಾರು ಕುಟುಂಬಗಳು ತಮ್ಮ ದೈನಂದಿನ ಖರ್ಚು ವೆಚ್ಚಗಳಿಗಾಗಿ ಹೆಣಗಾಡುತ್ತಿವೆ. ಸರಕಾರ ಕೂಡಲೇ ಸಾವಿರ ಬೀಡಿಗೆ ರೂ.350/– ನಿಗದಿ ಮಾಡಿ ಆದೇಶ ಹೊರಡಿಸಬೇಕೆಂದು ಸಿಐಟಿಯು ಸಂಚಾಲಕ ಎಚ್. ನರಸಿಂಹ ಹೇಳಿದರು. ಅವರು ಹಂಚು ಕಾರ್ಮಿಕರ ಭವನದಲ್ಲಿ ನಡೆದ 27 ನೇ ತಾಲೂಕು ಮಹಾಸಭೆಯಲ್ಲಿ ಮಾತನಾಡಿದರು.

ಸಂಘದ ಅಧ್ಯಕ್ಷರಾದ ಮಹಾಬಲ ವಡೇರ ಹೋಬಳಿ ಮಾತನಾಡಿ, ಡಿಸೆಂಬರ್ 28, ಭವಿಷ್ಯ ನಿಧಿ ಸದಸ್ಯರ ಕೆವೈಸಿ ಮತ್ತು ಇ–ನೋಮಿನೇಷನ್ ಮಾಡಲು ಸಮಯಾವಕಾಶ ನೀಡಬೇಕು. ಜಿಲ್ಲೆಯ ಕಾರ್ಮಿಕರ ಭವಿಷ್ಯ ನಿಧಿ (ಪಿ.ಎಫ್.) ಕೇಂದ್ರದಲ್ಲಿ ವಿವಿಧ ಸಂಸ್ಥೆಗಳಲ್ಲಿ ದುಡಿಯುವ ಕಾರ್ಮಿಕರು ಸದಸ್ಯರಾಗಿದ್ದಾರೆ. ಇವರಲ್ಲಿ ಶೇ.75 ರಷ್ಟು ಬೀಡಿ ಕಾರ್ಮಿಕರು. 1976–77ರ ಸಂದರ್ಭದಲ್ಲಿ ಯಾವುದೇ ಸರಿಯಾದ ದಾಖಲೆಗಳಿಲ್ಲದೆ ಪಿ.ಎಫ್. ಸಂಸ್ಥೆಯು ಸದಸ್ಯರನ್ನಾಗಿ ಸೇರಿಸಿದೆ. ಹೆಚ್ಚಿನ ಕಾರ್ಮಿಕರು ತಮ್ಮ ಹಾಗೂ ಕುಟುಂಬದ ವಿವರಗಳನ್ನು ಅಂದಾಜಿಗೆ ನೀಡಿರುತ್ತಾರೆ. ಇದೀಗ ಕೇಂದ್ರ ಸರಕಾರವು ಡಿಜಿಟಲೀಕರಣದ ಹೆಸರಿನಲ್ಲಿ ಆನ್ಲೈನ್ ಪ್ರಕ್ರಿಯೆಯನ್ನು ಆರಂಭಿಸಿತು. ಡಿಸೆಂಬರ್ 31 ರೊಳಗೆ ಎಲ್ಲಾ ಕಾರ್ಮಿಕರು ಕೆವೈಸಿ ಮತ್ತು ಇ–ನೋಮಿನೇಷನ್ ಮಾಡಬೇಕೆಂದೂ, ಇಲ್ಲವಾದರೆ ಮಾಲಿಕರ ಮೇಲೆ ಕ್ರಮ ಜರುಗಿಸಲಾಗುವುದೆಂದೂ ಎಚ್ಚರಿಸಿದೆ. ಬೀಡಿ ಮಾಲೀಕರು ಡಿಸೆಂಬರ್ 31 ರೊಳಗಾಗಿ ಕೆವೈಸಿ ಮತ್ತು ಇ–ನೋಮಿನೇಷನ್ ಕಾರ್ಮಿಕರು ಮಾಡದಿದ್ದರೆ ಕೆಲಸದಿಂದ ಕಿತ್ತು ಹಾಕುವ ಎಚ್ಚರಿಕೆಯನ್ನು ನೀಡಿದ್ದಾರೆ. ಇದರಿಂದಾಗಿ ಜಿಲ್ಲೆಯ ಸಾವಿರಾರು ಕಾರ್ಮಿಕರು ಕೆಲಸ ಕಳೆದುಕೊಳ್ಳುವ ಬೀತಿಯಲ್ಲಿದ್ದಾರೆ. ಬೀಡಿ ಕಾರ್ಮಿಕರಲ್ಲಿ ಹೆಚ್ಚಿನವರು ಅವಿದ್ಯಾವಂತರಾಗಿದ್ದು, ಅವರಲ್ಲಿ ಜನನ ಪ್ರಮಾಣ ಪತ್ರ, ಶಾಲೆಯ ಸರ್ಟಿಫಿಕೇಟ್ಗಳು ಇಲ್ಲದಿರುವುದರಿಂದ ಪಿ.ಎಫ್. ದಾಖಲೆಗಳನ್ನು ಸರಿಪಡಿಸಲು ಅಸಾಧ್ಯವಾಗಿದೆ. ಭವಿಷ್ಯನಿಧಿ ಅಧಿಕಾರಿಗಳು ಕೊರೋನಾದ ಆತಂಕದ ಸಂದರ್ಭದಲ್ಲಿ ಬಡ ಕಾರ್ಮಿಕರಿಗೆ ಮಾನಸಿಕ ಹಿಂಸೆ ನೀಡುವುದು ಸರಿಯೇ?

ಭವಿಷ್ಯನಿಧಿ ಸಂಸ್ಥೆಯಲ್ಲಿ ನುರಿತ ಕಾರ್ಮಿಕರ ಸಂಖ್ಯೆಯು ಕಡಿಮೆಯಿದ್ದು, ಕಾರ್ಮಿಕರ ಅರ್ಜಿಗಳು ಇತ್ಯರ್ಥವಾಗದೆ ವಿಳಂಬವಾಗುತ್ತಿದೆ ಇದರ ವಿರುದ್ಧ ಎಲ್ಲಾ ಕಾರ್ಮಿಕರು ಒಗ್ಗಟ್ಟಾಗಿ ಹೋರಾಟ ನಡೆಸಬೇಕಾಗಿದೆ ಎಂದರು.

ವಾರ್ಷಿಕ ವರದಿಯನ್ನು ಸಂಘದ ಪ್ರಧಾನ ಕಾರ್ಯದರ್ಶಿ ಬಲ್ಕೀಸ್ ಅವರು ಮಂಡಿಸಿದರು. ಕೋಶಾಧಿಕಾರಿ ಗಿರೀಜ ಲೆಕ್ಕಪತ್ರ ಮಂಡಿಸಿದರು. ವರದಿ ಲೆಕ್ಕಪತ್ರ ಮೇಲೆ ಚರ್ಚೆ ನಡೆದು ಅಂಗೀಕಾರ ಮಾಡಲಾಯಿತು. ಹೊಸ ಸಮಿತಿ ಆಯ್ಕೆ ಮಾಡಲಾಯಿತು. ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಕೆ.ಶಂಕರ್, ಸುರೇಶ್ ಕಲ್ಲಾಗರ ಮಹಾಸಭೆ ಉದ್ದೇಶಿಸಿ ಮಾತನಾಡಿದರು.

ವಿವಾಹದ ವಯಸ್ಸು ಏರಿಕೆ ಹುಡುಗಿಯರ ಸಮಸ್ಯೆಗಳಿಗೆ.......... ಪುಟ 6 ರಿಂದ

ತೆರನ ಕಳವಳಕಾರೀ ಪರಿಸ್ಥಿತಿಯೇ ಮುಂದುವರೆದಿದೆ. ಗರ್ಭಿಣಿ ಸ್ತ್ರೀಯರಲ್ಲಿ ಇರುವ ರಕ್ತಹೀನತೆ ಬಹುತೇಕ ಹೆರಿಗೆ ಸಂದರ್ಭದ ಮಾತೃಮರಣಗಳಿಗೆ ಮತ್ತು ಶಿಶು ಮರಣದ ಪ್ರಮಾಣಕ್ಕೂ ಅದು ಕಾರಣವಾಗುತ್ತದೆ ಎನ್ನುತ್ತವೆ ಅಧ್ಯಯನಗಳು. ಅಲ್ಲದೆಯೇ ಮಕ್ಕಳ ಬೆಳವಣಿಗೆ ಕುಂಠಿತಗೊಳ್ಳುವುದು, ಮಾನಸಿಕ ಸ್ಥಿತಿಯಲ್ಲಿ ಬೆಳವಣಿಗೆಯಾಗದಿರುವುದು ಇವೆಲ್ಲವುಗಳ ಮೂಲ ಕಾರಣ ಇಲ್ಲಿದೆ ಎಂಬುದೂ ಸತ್ಯ. ಅದನ್ನು ನಿವಾರಿಸಲೆಂದೇ ಬಹಳ ವರ್ಷಗಳ ಹೋರಾಟಗಳ ಭಾಗವಾಗಿ ಆಹಾರ ಸುರಕ್ಷಾ ಕಾಯ್ದೆಯೊಂದು ಬಂತು. ಮಹಿಳೆಯರ ಸಂಪೂರ್ಣ ಪೌಷ್ಟಿಕಾಂಶಯುಕ್ತ ಆಹಾರದ ಅಗತ್ಯಗಳ್ನು ಅದು ಪೂರೈಸದಿದ್ದರೂ ಏನೂ ಇಲ್ಲದ ಸ್ಥಿತಿಗಿಂತ ಇದು ಉತ್ತಮವೆನ್ನಿಸುವಂತೆ ಇತ್ತು. ಅದನ್ನು ಇನ್ನಷ್ಟು ಪರಿಪೂರ್ಣಗೊಳಿಸಿದ್ದರೆ ಸುಧಾರಣೆ ಕಾಣಬಹುದಾಗಿತ್ತು.

ಹಳ್ಳಕ್ಕೆ ಬಿದ್ದ ಪೋಷಣ್ ಅಭಿಯಾನ್ ಯೋಜನೆ:

ಸರಕಾರ ಯೋಜನೆಗಳ ಮೇಲೆ ಯೋಜನೆಗಳನ್ನು ಪ್ರಕಟಿಸುತ್ತಿದೆ. 2018ರಲ್ಲಿಯೇ ನರೇಂದ್ರ ಮೋದಿ ಸರಕಾರ ಪೋಷಣ್ ಅಭಿಯಾನ ಹೆಸರಿನ ಯೋಜನೆಯೊಂದನ್ನು ಪ್ರಕಟಿಸಿ ಜಾರಿಗೆ ತರಲಾಯಿತು. ಅದರ ಪ್ರಕಾರ 2022ರ ಹೊತ್ತಿಗೆ ಐ.ಸಿ.ಡಿ.ಎಸ್ ಮೂಲಕ ಪೌಷ್ಟಿಕಾಂಶ ಪೂರೈಕೆಯ ಪ್ರಮಾಣವನ್ನು ಸದೃಢಗೊಳಿಸಿ, ದೇಶದ ಎಲ್ಲ ಜಿಲ್ಲೆಗಳಿಗೆ ವಿಸ್ತರಿಸುವುದು. ಆದರೆ 2021ರ ಚಳಿಗಾಲದ ಅಧಿವೇಶನದಲ್ಲಿ ಮಾನ್ಯ ಮಹಿಳಾ ಮತ್ತು ಮಕ್ಕಳ ಸಚಿವರು, ಸಂಸದರೊಬ್ಬರು ಪೋಷಣ್ ಅಭಿಯಾನ್ ಟ್ರಾಕರ್ ಕಾರ್ಯ ವೈಖರಿಯ ಮಾಹಿತಿ ಸಾರ್ವಜನಿಕವಾಗಿ ಸಿಗುತ್ತಿಲ್ಲ ಎಂದು ಕೇಳಿದ ಪ್ರಶ್ನೆಗೆ ದೇಶದ ಮಹಿಳೆಯರ ಮತ್ತು ಮಕ್ಕಳ ವೈಯಕ್ತಿಕ ಗೋಪ್ಯತೆಯನ್ನು ಕಾಪಾಡುವ ಕಾರಣದಿಂದ ಪ್ರಕಟಿಸುತ್ತಿಲ್ಲ ಎಂದು ಹೇಳಿದರು. ರಕ್ತ ಹೀನತೆ, ಅಪೌಷ್ಟಿಕತೆಯನ್ನು ನಿವಾರಿಸಲು ಸಾರ್ವಜನಿಕರ ಹಣವನ್ನು ವ್ಯಯಮಾಡುವ ಸರಕಾರ, ಅದರ ಫಲಶ್ರುತಿಯನ್ನು ತಿಳಿಸದೇ ಅದೊಂದು ಗೌಪ್ಯ ಮಾಹಿತಿ ಎಂದು ಮುಚ್ಚಿಡುತ್ತಿದೆ. ಮತ್ತು ಮಾತೃ ಮರಣ ತಪ್ಪಿಸಲು ಮಾಡಬೇಕಾದ ಈ ಕೆಲಸಕ್ಕೆ ಗಮನ ನೀಡದೇ ಮದುವೆಯ ವಯಸ್ಸನ್ನು ಹೆಚ್ಚಿಸುವ ಪ್ರಸ್ತಾಪ ಮುಂದಿಟ್ಟಿದೆ.

ಅದೇ ಸಂದರ್ಭದಲ್ಲಿ ಈ ಯೋಜನೆಗಾಗಿ 2019–20 ರ ಬಜೆಟ್ ನಲ್ಲಿ ನೀಡಲಾದ ಮೊತ್ತದಲ್ಲಿ 1500 ಕೋಟಿ ರೂಪಾಯಿಗಳನ್ನು ಬಳಸದೇ 'ಉಳಿತಾಯ' ಮಾಡಲಾಗಿದೆ ಎಂದು ಸದನ ಸಮಿತಿಯು ಗುರುತಿಸಿದೆ ಮತ್ತು ಮಹಿಳಾ ಮತ್ತು ಮಕ್ಕಳ ಸಚಿವಾಲಯವು ಹೀಗೆ ಉಳಿತಾಯ ಮಾಡುವ ಬದಲು ಇತರ ಸಂಬಂಧಿಸಿದ ಸಚಿವಾಲಯಗಳ ಜೊತೆ ಸಮಾಲೋಚಿಸಿ ಬಜೆಟ್‌ನ ಸಮರ್ಥ ಬಳಕೆ ಮಾಡಬೇಕು ಮತ್ತು ಅದು ಪರಿಣಾಮಕಾರಿಯಾಗಿ ಫಲಾನುಭವಿಗಳಿಗೆ ತಲುಪಿ, ಪರಿಸ್ಥಿತಿಯಲ್ಲಿ ಉತ್ತಮ ಸುಧಾರಣೆಗಳಾಗುವಂತೆ ಮುಂದಿನ ವರ್ಷಗಳಲ್ಲಿ ಗಮನ ಹರಿಸಬೇಕು ಎಂದೂ ಹೇಳಿದೆ.

ವಿಶ್ವದ ಹಲವು ದೇಶಗಳಲ್ಲಿ ನಡೆಯುವ ಅಧ್ಯಯನಗಳು ಮತ್ತು ನಮ್ಮದೇ ದೇಶದಲ್ಲಿನ ಅನುಭವಗಳು ಮಹಿಳೆಯರಿಗೆ ಸಿಗುವ ಶಿಕ್ಷಣದ ಅವಕಾಶ ಮತ್ತು ಆರ್ಥಿಕ ಸಬಲತೆಗಳು ಅವರ ರಕ್ತಹೀನತೆಯನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂಬುದನ್ನು ತಿಳಿಸುತ್ತವೆ. ಇದೇ ಅವಧಿಯಲ್ಲಿಯೇ ಬಂದ ಮತ್ತೊಂದು ವರದಿ(ಗ್ಲೋಬಲ್ ಹೆಲ್ತ್ ಆಕ್ಷನ್) 2016–18 ರ ಅವಧಿಯಲ್ಲಿ ರಾಜ್ಯವಾರು ಮಾತೃ ಮರಣ ಮತ್ತು ಶಿಶು ಮರಣಗಳ ಪ್ರಮಾಣವನ್ನಿಟ್ಟುಕೊಂಡು ಮಾಡಿದ ಅಧ್ಯಯನವೂ ಕೂಡಾ ಬಹಳ ಸ್ಪಷ್ಟವಾಗಿ ಜನರ ಬದುಕಿನ ಮಟ್ಟವನ್ನು ಸುಧಾರಿಸುವ ಕುರಿತು ಹೇಳಿದೆ. ಅಸ್ಸಾಂ, ಬಿಹಾರ್, ಚತ್ತೀಸಘಡ್, ಜಾರ್ಖಂಡ್, ಮಧ್ಯಪ್ರದೇಶ, ಒರಿಸ್ಸಾ, ರಾಜಸ್ಥಾನ ಮತ್ತು ಉತ್ತರ ಪ್ರದೇಶ್ ರಾಜ್ಯಗಳಲ್ಲಿ ಇರುವ ಸ್ಥಿತಿಯನ್ನು ಅದು ಅವಲೋಕಿಸಿದೆ. ದೇಶದ ಜನಸಂಖ್ಯೆಯ ಸರಿಸುಮಾರು ಅರ್ಧದಷ್ಟು ಈ ರಾಜ್ಯಗಳಲ್ಲಿಯೇ ಇದ್ದು, 62% ಮಾತೃ ಮರಣಗಳು, 71% ಶಿಶು ಮರಣಗಳು ಇಲ್ಲಿ ಸಂಭವಿಸುತ್ತವೆ ಎಂದಿದೆ ಆ ವರದಿ. ಭಾರತದಲ್ಲಿ ಪ್ರತಿ 1 ಲಕ್ಷ ಹೆರಿಗೆಗಳಿಗೆ 113 ಮಾತೃ ಮರಣಗಳಾಗುತ್ತವೆ. ಆದರೆ ಈ 9 ರಾಜ್ಯಗಳಲ್ಲಿ 1 ಲಕ್ಷ ಹೆರಿಗೆಗೆ 161 ಸಾವು ಸಂಭವಿಸುತ್ತಿದ್ದು ಇದು ಅತ್ಯಂತ ಕಳವಳಕಾರಿ ಪ್ರಮಾಣವಾಗಿದೆ. ಸಮಾಜೋ ಆರ್ಥಿಕ ಸಂಗತಿಗಳ ಆಧಾರದಲ್ಲಿ ಬಡತನವೇ ಮದುವೆಯ ವಯಸ್ಸಿಗಿಂತ ಹೆಚ್ಚು ಈ ಪರಿಸ್ಥಿತಿಗೆ ಕಾರಣವೆನ್ನುತ್ತದೆ ಈ ಅಧ್ಯಯನ. ಇದರ ಜೊತೆಯೇ ಸಾಂಸ್ಥಿಕ ಹೆರಿಗೆ ಸೌಲಭ್ಯಗಳ ಲಭ್ಯತೆ, ಶಿಕ್ಷಣ, ಆರೋಗ್ಯ ಸಹಾಯಕಿಯರ ಜೊತೆ ಸಮಾಲೋಚನೆಯ ಅವಕಾಶ, ಮುಂತಾದ ಅಂಶಗಳೇ ವಿವಾಹದ ವಯಸ್ಸಿಗಿಂತಲೂ ಹೆಚ್ಚು ಪರಿಣಾಮ ಬೀರಿವೆ ಎಂಬುದನ್ನು ಈ ವರದಿಯೂ ಗುರುತಿಸಿದೆ. ಇಲ್ಲಿ ಎನ್.ಎಫ್.ಎಚ್.ಎಸ್. 5 ರ ವರದಿಯನ್ನೊಮ್ಮೆ ನೆನಪಿಸಿಕೊಳ್ಳಬೇಕು. ಮಹಿಳೆಯರ ಜೀವಿತ ಕಾಲದ ಫಲವಂತಿಕೆಯ ವಿಷಯದಲ್ಲಿ ಕೂಡಾ ಈ ಮೇಲಿನ ಅಂಶಗಳೇ ಪ್ರಧಾನ ಪಾತ್ರ ವಹಿಸಿವೆ.


ಸದನ ಸಮಿತಿ ಹೇಳಿದ್ದೇನು ಸರಕಾರ ಮಾಡುತ್ತಿರುವುದೇನು?

ಜನರ ಕಣ್ಣಿಗೆ ಮಣ್ಣೆರಚುವ ಎಲ್ಲ ಪ್ರಯತ್ನ ಮಾಡುವ ಸರಕಾರ ಮಾತೃ ಮತ್ತು ಶಿಶು ಮರಣ ಪ್ರಮಾಣದ ಬಗ್ಗೆ ತನಗಿರುವ ಕಳಕಳಿಯನ್ನು ತೋರಿಸಿಕೊಳ್ಳಲು ಸಮತಾ ಪಕ್ಷದ ಸಂಸದೆ ಜಯಾ ಜೈಟ್ಲಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿ ವರದಿಯನ್ನು ಕೇಳಿತು. ವರದಿಯನ್ನು ಮಂಡಿಸುವಾಗ ತನ್ನ ಹಲವು ಪ್ರಸ್ತಾಪಗಳಲ್ಲಿ ಮದುವೆಯ ವಯಸ್ಸನ್ನು 21ಕ್ಕೆ ಏರಿಸುವುದೂ ಒಂದು ಪ್ರಸ್ತಾಪವನ್ನು ಆ ಸಮಿತಿ ಮಂಡಿಸಿತು. ಜಯಾ ಜೈಟ್ಲಿಯವರೇ ಹೇಳಿದಂತೆ 'ವಿವಾಹದ ವಯಸ್ಸನ್ನು ಏರಿಸುವುದು ನಮ್ಮ ಪ್ರಸ್ತಾಪಗಳಲ್ಲಿ ಒಂದಾಗಿತ್ತು. ಪಿತೃಪ್ರಧಾನ ಪಾಳೆಯಗಾರಿ ಮನಃಸ್ಥಿತಿಯನ್ನು ಬದಲಿಸುವುದು, ಬಾಲಕಿಯರಿಗೆ ಶಿಕ್ಷಣ ಮತ್ತು ಶಾಲೆಗಳಲ್ಲಿ ಸ್ವಚ್ಛ ಮತ್ತು ಸುರಕ್ಷಿತ ಶೌಚಾಲಯಗಳ ಲಭ್ಯತೆ, ಸ್ಯಾನಿಟರಿ ನ್ಯಾಪಕಿನ್‌ಗಳ ಪೂರೈಕೆ, ದೇಹ ವಿಜ್ಞಾನದ ಕುರಿತ ಸರಿಯಾದ ತಿಳುವಳಿಕೆಗಾಗಿ ಲೈಂಗಿಕ ಶಿಕ್ಷಣ, ಇದರ ಜೊತೆಗೆ ವೃತ್ತಿಪರ ತರಬೇತಿ ಮತ್ತು ಜೀವನ ವಿಧಾನ ಆಯ್ಕೆಯ ಸೌಲಭ್ಯಗಳನ್ನು ಒದಗಿಸಬೇಕೆಂದು ಹೇಳಿದ್ದೆವು. ಆದರೆ ಈ ಎಲ್ಲವನ್ನೂ ಸಮಗ್ರವಾಗಿ ಮಾಡದೆಯೇ ಕೇವಲ ವಿವಾಹದ ವಯಸ್ಸು ಏರಿಸುವ ಮೂಲಕ ಉತ್ತಮ ರಸ್ತೆ ಮತ್ತು ರಸ್ತೆ ದೀಪಗಳನ್ನೇ ಅಳವಡಿಸದೇ ರಸ್ತೆ ನಿಯಮಗಳನ್ನು ರೂಪಿಸಿದಂತೆ ಮಾಡಲಾಗಿದೆ'.

ಹೆಚ್ಚಲಿದೆ ಬಾಲಾಪರಾಧ ಮತ್ತು ಬಾಲ್ಯ ವಿವಾಹಗಳು:

ಈ ಮೊದಲೇ ಅಧಿಕೃತ ವಯಸ್ಸು 18 ಇದ್ದಾಗಲೇ ಬಾಲ್ಯ ವಿವಾಹಗಳನ್ನು ತಡೆಯಲಾಗದ ಸ್ಥಿತಿಯಲ್ಲಿ ಸರಕಾರ ಸಮಾಜ ಎರಡೂ ಇರುವಾಗ ಈಗಿನ್ನು 21 ಮಾಡಿದ ಮೇಲೆ ಅದರ ಪ್ರಮಾಣ ಇನ್ನೂ ಹೆಚ್ಚಾಗಲಿವೆ. ಜೊತೆಗೆ ಆಧುನಿಕ ಬದುಕಿನ ಸೆಳೆತಕ್ಕೆ ಸಿಕ್ಕು ದೈಹಿಕ ಮಾನಸಿಕವಾಗಿ ಶೀಘ್ರ ಪ್ರೌಢಾವಸ್ಥೆಗೆ ಕಾಲಿಡುತ್ತಿರುವ ಯುವ ಸಮೂಹ ಇನ್ನಷ್ಟು ಮತ್ತಷ್ಟು ಅಪರಾಧಗಳ ಸುಳಿಯಲ್ಲಿ ಸಿಲುಕಿಕೊಳ್ಳುತ್ತಾರೆ. ಇತ್ತೀಚೆಗೆ ವರದಿಯಾಗುತ್ತಿರುವ ಅತ್ಯಾಚಾರದ ಪ್ರಕರಣಗಳಲ್ಲಿ ಬಾಲಾಪರಾಧಿಗಳ ಸಂಖ್ಯೆ ಕಾಣಿಸಿಕೊಳ್ಳುತ್ತಿರುವುದು ಮತ್ತು ಅವು ಸಾಮೂಹಿಕ ಅತ್ಯಾಚಾರ ಪ್ರಕರಣಗಳೂ ಆಗುತ್ತಿರುವುದು ಕೂಡ ಈ ಸಂಗತಿಗಳನ್ನು ದೃಢಪಡಿಸುತ್ತಿದೆ. ಈ ಎಲ್ಲ ಅಂಶಗಳನ್ನು ಪರಿಗಣನೆಗೇ ತೆಗೆದುಕೊಳ್ಳದೆಯೇ ತರ ಹೊರಟಿರುವ ಈ ಬದಲಾವಣೆಯನ್ನು ಒಪ್ಪಲು ಸಾಧ್ಯವೇ ಇಲ್ಲ. ಇದು ವಾಸ್ತವಕ್ಕೆ ಹತ್ತಿರವಿರುವುದೂ ಅಲ್ಲ.

ಖಾಸಗೀಕರಣ ಸಂವಿಧಾನದ ಮೂಲ ತತ್ವಕ್ಕೇ ವಿರುದ್ಧ



ಸಾರ್ವಜನಿಕ ವಲಯದ ಖಾಸಗೀಕರಣವೆಂದರೆ ಕೆಲವು ದೊಡ್ಡ ಏಕಸ್ವಾಮ್ಯ ಮನೆತನಗಳಿಗೆ ಅಥವಾ ದೊಡ್ಡ ಅಂತರಾಷ್ಟ್ರೀಯ ಉದ್ಯಮಗಳಿಗೆ ಸ್ವತ್ತುಗಳನ್ನು ಮಾರಾಟ ಮಾಡುವುದು ಎಂದೇ ಅರ್ಥ, ಏಕೆಂದರೆ ಅವುಗಳನ್ನು ಖರೀದಿಸಲು ಅಗತ್ಯವಿರುವ ಸಂಪನ್ಮೂಲಗಳನ್ನು ಕ್ರೋಢೀಕರಿಸುವಷ್ಟು ದೊಡ್ಡವರು ಬೇರೆ ಯಾರೂ ಇಲ್ಲ. ಆದ್ದರಿಂದ ಇದು ಪ್ರಭುತ್ವದ ಜವಾಬ್ದಾರಿಯನ್ನು ಕೈಬಿಡುವುದು ಮತ್ತು ಅರ್ಥವ್ಯವಸ್ಥೆಯ ಮರುವಸಾಹತೀಕರಣದ (ಅರ್ಥವ್ಯವಸ್ಥೆಯ "ಪ್ರಬಲ ಔನ್ನತ್ಯ"ವನ್ನು ಸ್ವಾತಂತ್ರ್ಯದ ಮುಕ್ಕಾಲು ಶತಮಾನದ ನಂತರ ಮತ್ತೆ ಮಹಾನಗರೀಯ ಬಂಡವಾಳಕ್ಕೆ ವಹಿಸಿಕೊಡುವ) ಪ್ರಕ್ರಿಯೆಯೊಂದಿಗೆ, ಸಂವಿಧಾನದಲ್ಲಿ ವಿಧಿಸಿರುವ ಪ್ರಭುತ್ವ ನೀತಿಯ ನಿರ್ದೇಶನ ತತ್ವಗಳನ್ನು ಕೈಬಿಡುವ ಪ್ರಕ್ರಿಯೆಯೂ ಆಗುತ್ತದೆ. ಸಂಕ್ಷಿಪ್ತವಾಗಿ, ಇದು ಸಂವಿಧಾನದ ಸಾಮಾಜಿಕ ತತ್ವಶಾಸ್ತ್ರಕ್ಕೆ ತದ್ವಿರುದ್ಧವಾದ ಒಂದು ಸಾಮಾಜಿಕ ತತ್ವಶಾಸ್ತ್ರವನ್ನು(ಅದನ್ನು ಹಾಗೆಂದು ಕರೆಯಬಹುದಾದರೆ) ಪ್ರತಿಪಾದನೆಯಾಗಿ ಬಿಡುತ್ತದೆ; ಮೆಟ್ರೋಪಾಲಿಟನ್ ಬಂಡವಾಳಕ್ಕೆ ಅಡಿಯಾಳುತನವನ್ನು, ಒಂದು ಕಲ್ಯಾಣ ಪ್ರಭುತ್ವಕ್ಕೆ ಬದ್ಧತೆಯನ್ನು ತ್ಯಜಿಸುವುದರೊಂದಿಗೆ ಸಂಯೋಜಿಸುವ ಒಂದು ಸಾಮಾಜಿಕ ತತ್ವಶಾಸ್ತ್ರವಾಗಿ ಬಿಡುತ್ತದೆ.

ಪ್ರೊ.ಪ್ರಭಾತ್ ಪಟ್ನಾಯಕ್
ಅನು: ಕೆ.ವಿ.

ಸಾರ್ವಜನಿಕ ವಲಯ ಮತ್ತು ಸಾರ್ವಜನಿಕ ಸೇವೆಗಳನ್ನು ಕುರಿತ ಜನತಾ ಆಯೋಗ ತನ್ನ ಇತ್ತೀಚಿನ ವರದಿಯಲ್ಲಿ ಸಾರ್ವಜನಿಕ ವಲಯದ ಆಸ್ತಿಗಳನ್ನು ಸಾರಾಸಗಟು ಖಾಸಗೀಕರಣಗೊಳಿಸುವ ಮೋದಿ ಸರ್ಕಾರದ ತೀರಾ ಅಸಂವಿಧಾನಿಕ ನಡೆಯ ಬಗ್ಗೆ ಗಮನ ಸೆಳೆದಿದೆ. ದೇಶದ ಸಂವಿಧಾನವು ಕೇವಲ ರಾಜಕೀಯ ಆಡಳಿತಕ್ಕೆ ಸಂಬಂಧಿಸಿದ ಕಾರ್ಯವಿಧಾನಗಳು ಮತ್ತು ನಿಯಮಗಳ ಕಂತೆಯಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅದು ಒಂದು ನಿರ್ದಿಷ್ಟ ಸಾಮಾಜಿಕ ತತ್ವಶಾಸ್ತ್ರವನ್ನು ಅಭಿವ್ಯಕ್ತಗೊಳಿಸುತ್ತದೆ, ಈ ತತ್ವಶಾಸ್ತ್ರ ಪ್ರಭುತ್ವದ ವಿವಿಧ ಅಂಗಗಳ ನಡವಳಿಕೆಯ ಬಗ್ಗೆ ಹೇಳುತ್ತದೆ ಮತ್ತು ರಾಷ್ಟ್ರ ಯಾವ ಆಧಾರಭೂತ ನಂಬಿಕೆಗಳ ಸುತ್ತ ಅಸ್ತಿತ್ವಕ್ಕೆ ಬಂದಿದೆಯೋ ಅವುಗಳನ್ನು ಒಳಗೊಂಡಿದೆ. ವಸಾಹತುಶಾಹಿ–ವಿರೋಧಿ ಹೋರಾಟದ ಪರಿಣಾಮವಾಗಿ ರಾಷ್ಟ್ರದ ರಚನೆಯು ಐತಿಹಾಸಿಕವಾಗಿ ಅಭೂತಪೂರ್ವ ಏಕತೆಯ ಪ್ರದರ್ಶನದಲ್ಲಿ ಜನರನ್ನು ಒಟ್ಟುಗೂಡಿಸಿದ ಮಾಜಿ–ವಸಾಹತುಶಾಹಿ ರಾಷ್ಟ್ರಗಳ ವಿಷಯದಲ್ಲಂತೂ ಇದು ವಿಶೇಷವಾಗಿ ಸತ್ಯ. ಹೊಸದಾಗಿ ರೂಪುಗೊಂಡ ರಾಷ್ಟ್ರ–ಪ್ರಭುತ್ವದ ಸಂವಿಧಾನದ ತಳಹದಿಯಲ್ಲಿರುವ ಸಾಮಾಜಿಕ ತತ್ವಶಾಸ್ತ್ರವು ಈ ರೀತಿ ಒಟ್ಟುಗೂಡಲು ಒಟ್ಟುಗೂಡಿಸುವ ಪರಿಕಲ್ಪನೆಯ ಆಧಾರವನ್ನು ಒದಗಿಸುತ್ತದೆ.

ಭಾರತದ ಸರ್ವೋಚ್ಚ ನ್ಯಾಯಾಲಯವು ಸಂವಿಧಾನದ "ಮೂಲ ರಚನೆ"ಯ ಸಿದ್ಧಾಂತವನ್ನು ಪ್ರತಿಪಾದಿಸಿದೆ; ಆದರೆ ಈ "ಮೂಲ ರಚನೆ"ಯ ಅತ್ಯಂತ ಮೂಲಭೂತವಾಗಿರುವಂತದ್ದು ಸಂವಿಧಾನದ ತಳಹದಿಯಾಗಿರುವ ಸಾಮಾಜಿಕ ತತ್ವಶಾಸ್ತ್ರವಾಗಿದೆ. ಈ ಸಾಮಾಜಿಕ ತತ್ವಶಾಸ್ತ್ರವನ್ನು ಬದಲಾಯಿಸಬೇಕಾದರೆ ಸಂವಿಧಾನದ ಬದಲಾವಣೆಯೇ ಆಗಬೇಕಾಗುತ್ತದೆ. ಅಂದರೆ ಸಂವಿಧಾನದಲ್ಲಿ ನಿಗದಿಪಡಿಸಿದ ಕಟ್ಟುನಿಟ್ಟಾದ ಕಾರ್ಯವಿಧಾನಗಳನ್ನು ಅನುಸರಿಸಬೇಕು,ಮಾತ್ರವಲ್ಲ, ಈ ಬಗ್ಗೆ ಒಟ್ಟಾರೆ ಸಮಾಜದಲ್ಲಿ ಅತ್ಯಂತ ವ್ಯಾಪಕವಾದ ಚರ್ಚೆಯೂ ಸಹ ಅಗತ್ಯವಾಗಿರುತ್ತದೆ, ಈ ಮೂಲಕ ರಾಷ್ಟ್ರ–ಪ್ರಭುತ್ವವನ್ನು ಸೃಷ್ಟಿಸಿದ ಜನರ ಐಕ್ಯತೆಯ ಆಧಾರಕ್ಕೇ ಧಕ್ಕೆಯಾಗಬಾರದು.. ಇದನ್ನು ಸಂಸತ್ತಿನಲ್ಲಿ ಬಹುಮತವನ್ನು ಹೊಂದಿರುವ ಸರ್ಕಾರ ತನ್ನ ಬಹುಮತವನ್ನು ಬಳಸಿಕೊಂಡು ಬದಲಾವಣೆಯನ್ನು ಮುಂದೊತ್ತುವುದು ಖಂಡಿತವಾಗಿಯೂ ಸಲ್ಲ. ಆದರೂ ಮೋದಿ ಸರ್ಕಾರ ಸಾರ್ವಜನಿಕ ವಲಯದ ಆಸ್ತಿಗಳ ಖಾಸಗೀಕರಣ ಮತ್ತು "ನಗದೀಕರಣ"ದ ತನ್ನ ಅಜೆಂಡಾದೊಂದಿಗೆ ಮಾಡಲು ಪ್ರಯತ್ನಿಸುತ್ತಿರುವುದು ಇದನ್ನೇ–ಆಯಕಟ್ಟಿನದಲ್ಲದ ವಲಯಗಳಲ್ಲಿ ಸಾರ್ವಜನಿಕ ವಲಯವನ್ನು ಹೆಚ್ಚು ಕಡಿಮೆ ಮುಚ್ಚಿಬಿಡುವುದು, ಮತ್ತು ಆಯಕಟ್ಟಿನ ವಲಯಗಳಲ್ಲಿ ಅವುಗಳ ಉಪಸ್ಥಿತಿ ಮುಂದುವರೆದರೂ ಅದನ್ನು ಸಾಂಕೇತಿಕವಾಗಿ ಮಾತ್ರ ಇಡುವುದು.


ಭಾರತದಲ್ಲಿ ಸಾರ್ವಜನಿಕ ವಲಯವನ್ನು ಹಲವಾರು ಕಾರಣಗಳಿಗಾಗಿ ರಚಿಸಲಾಗಿದೆ: ವಿದೇಶಿ ಬಂಡವಾಳದ ಹಿಡಿತದಿಂದ ದೇಶದ ಕಚ್ಚಾ ವಸ್ತುಗಳ ಸಂಪನ್ಮೂಲಗಳ ಮೇಲೆ(ಉದಾ, ತೈಲ ವಲಯ) ಬಿಡಿಸಿ ಹತೋಟಿ ಪಡೆಯುವುದು; ತಂತ್ರಜ್ಞಾನದಲ್ಲಿ ಸ್ವಾವಲಂಬನೆಯನ್ನು ಉತ್ತೇಜಿಸುವುದು, ಈ ಮೂಲಕ, ವಿದೇಶಿ ಬಂಡವಾಳದ ಮೇಲೆ ಅವಲಂಬಿತವಾಗುವುದನ್ನು ಮತ್ತು ಅದರ ಪ್ರಾಬಲ್ಯಕ್ಕೆ ಒಳಗಾಗುವುದನ್ನು ತಪ್ಪಿಸುವುದು (ಉದಾ, ಭಾರೀ ವಿದ್ಯುತ್ ವಲಯದಲ್ಲಿ); ಅಗತ್ಯ ಸೇವೆಗಳನ್ನು ಸಾರ್ವಜನಿಕರಿಗೆ ಕಡಿಮೆ ಅಥವಾ ಶೂನ್ಯ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡುವುದು(ಉದಾ, ಆರೋಗ್ಯ, ಶಿಕ್ಷಣ, ವಿದ್ಯುತ್); ಖಾಸಗಿ ಸಂಪನ್ಮೂಲಗಳು ಸಂಪೂರ್ಣವಾಗಿ ಅಥವಾ ಸಾಕಷ್ಟು ಪ್ರಮಾಣದಲ್ಲಿ ಕಾರ್ಯರೂಪಕ್ಕೆ ಬರದ ನಿರ್ದಿಷ್ಟ ವಲಯಗಳಲ್ಲಿ (ಉದಾಹರಣೆಗೆ, ಮೂಲಸೌಕರ್ಯ) ಸಾರ್ವಜನಿಕ ಸಂಪನ್ಮೂಲಗಳನ್ನು ವಿನಿಯೋಗಿಸುವ ವಿಧಾನಗಳನ್ನು ಒದಗಿಸುವುದು; ಕೃಷಿ ಉತ್ಪನ್ನವನ್ನು ಸಮಂಜಸವಾದ ಬೆಲೆಯಲ್ಲಿ ಸಂಗ್ರಹಿಸುವ ಮೂಲಕ ರೈತ ಕೃಷಿಗೆ ಬೆಂಬಲವನ್ನು ಒದಗಿಸುವುದು(ಉದಾ, ಎಫ್‌ಸಿಐ); ಸಾಲ ಸಿಗದೇ ಬಳಲಬೇಕಾಗುವ ಪುಟ್ಟ ಉತ್ಪಾದನಾ ವಲಯಕ್ಕೆ ಸಾಲವನ್ನು ಒದಗಿಸುವುದು; (ಉದಾ, ಸಾರ್ವಜನಿಕ ವಲಯದ ಬ್ಯಾಂಕುಗಳು). ಸಾರ್ವಜನಿಕ ವಲಯ ಮೂಡಿಬರಲು ಇದ್ದ ಇವೆಲ್ಲ ಕಾರಣಗಳು ಆರ್ಥಿಕ ವಸಾಹತೀಕರಣವನ್ನು ಕಳಚಿ ಹಾಕುವ ಪ್ರಕ್ರಿಯೆಯ ಭಾಗವಾಗಿತ್ತು ಮತ್ತು ಇವೆಲ್ಲ ಸಂವಿಧಾನದಲ್ಲಿ ನಿರೂಪಿಸಿದ ಪ್ರಭುತ್ವ ನೀತಿಯ ನಿರ್ದೇಶನ ತತ್ವಗಳಲ್ಲಿ ವ್ಯಕ್ತಪಡಿಸಿದ ಕಣ್ನೋಟಕ್ಕೆ ಅನುಗುಣವಾಗಿದ್ದವು. ವಾಸ್ತವವಾಗಿ ಸಾರ್ವಜನಿಕ ವಲಯ ಮತ್ತು ಸಾರ್ವಜನಿಕ ಸೇವೆಗಳ ಮೇಲಿನ ಜನತಾ ಆಯೋಗದ ವರದಿಯು ಒತ್ತಿಹೇಳುವಂತೆ, ಈ ಕಣ್ನೋಟಕ್ಕೆ ಅನುಗುಣವಾಗಿ ಭಾರತದಲ್ಲಿ ಕಲ್ಯಾಣ ಪ್ರಭುತ್ವವನ್ನು ಸಾಧಿಸಲು ಸಾರ್ವಜನಿಕ ವಲಯವನ್ನು ಒಂದು ಅತ್ಯಗತ್ಯ ಸಾಧನವಾಗಿ ರಚಿಸಲಾಗಿತ್ತು.

ಸಾರ್ವಜನಿಕ ವಲಯದ ಖಾಸಗೀಕರಣವೆಂದರೆ ಕೆಲವು ದೊಡ್ಡ ಏಕಸ್ವಾಮ್ಯ ಮನೆತನಗಳಿಗೆ ಅಥವಾ ದೊಡ್ಡ ಅಂತರಾಷ್ಟ್ರೀಯ ಉದ್ಯಮಗಳಿಗೆ ಸ್ವತ್ತುಗಳನ್ನು ಮಾರಾಟ ಮಾಡುವುದು ಎಂದೇ ಅರ್ಥ, ಏಕೆಂದರೆ ಅವುಗಳನ್ನು ಖರೀದಿಸಲು ಅಗತ್ಯವಿರುವ ಸಂಪನ್ಮೂಲಗಳನ್ನು ಕ್ರೋಢೀಕರಿಸುವಷ್ಟು ದೊಡ್ಡವರು ಬೇರೆ ಯಾರೂ ಇಲ್ಲ. ಆದ್ದರಿಂದ ಇದು ಪ್ರಭುತ್ವದ ಜವಾಬ್ದಾರಿಯನ್ನು ಕೈಬಿಡುವುದು ಮತ್ತು ಅರ್ಥವ್ಯವಸ್ಥೆಯ ಮರುವಸಾಹತೀಕರಣದ (ಅರ್ಥವ್ಯವಸ್ಥೆಯ "ಪ್ರಬಲ ಔನ್ನತ್ಯ"ವನ್ನು ಸ್ವಾತಂತ್ರ್ಯದ ಮುಕ್ಕಾಲು ಶತಮಾನದ ನಂತರ ಮತ್ತೆ ಮಹಾನಗರೀಯ ಬಂಡವಾಳಕ್ಕೆ ವಹಿಸಿಕೊಡುವ) ಪ್ರಕ್ರಿಯೆಯೊಂದಿಗೆ, ಸಂವಿಧಾನದಲ್ಲಿ ವಿಧಿಸಿರುವ ಪ್ರಭುತ್ವ ನೀತಿಯ ನಿರ್ದೇಶನ ತತ್ವಗಳನ್ನು ಕೈಬಿಡುವ ಪ್ರಕ್ರಿಯೆಯನ್ನು ಸಂಯೋಜಿಸುವ ಕ್ರಿಯೆಯಯಾಗುತ್ತದೆ. ಸಂಕ್ಷಿಪ್ತವಾಗಿ, ಇದು ಸಂವಿಧಾನದ ಸಾಮಾಜಿಕ ತತ್ವಶಾಸ್ತ್ರಕ್ಕೆ ತದ್ವಿರುದ್ಧವಾದ ಒಂದು ಸಾಮಾಜಿಕ ತತ್ವಶಾಸ್ತ್ರವನ್ನು(ಅದನ್ನು ಹಾಗೆಂದು ಕರೆಯಬಹುದಾದರೆ) ಪ್ರತಿಪಾದನೆಯಾಗಿ ಬಿಡುತ್ತದೆ; ಮೆಟ್ರೋಪಾಲಿಟನ್ (ಮಹಾನಗರೀಯ) ಬಂಡವಾಳಕ್ಕೆ ಅಡಿಯಾಳುತನವನ್ನು, ಒಂದು ಕಲ್ಯಾಣ ಪ್ರಭುತ್ವಕ್ಕೆ ಬದ್ಧತೆಯನ್ನು ತ್ಯಜಿಸುವುದರೊಂದಿಗೆ ಸಂಯೋಜಿಸುವ ಒಂದು ಸಾಮಾಜಿಕ ತತ್ವಶಾಸ್ತ್ರವಾಗಿ ಬಿಡುತ್ತದೆ.



ಈ ಸ್ವತ್ತುಗಳನ್ನು **ಹೆಚ್ಚಾಗಿ,** ಅವುಗಳ ನಿಜವಾದ ಮೌಲ್ಯಕ್ಕಿಂತ ಕಡಿಮೆ ಬೆಲೆಯಲಿಯ್ಲೇ ಮಾರಲಾಗುವುದರಿಂದ, ಅದು ಬಂಡವಾಳದ ಆದಿ ಸಂಚಯದ ಪ್ರಕ್ರಿಯೆಯೇ ಆಗುತ್ತದೆ. ಉದಾಹರಣೆಗೆ, ಖರೀದಿಸುವ ಮೆಟ್ರೋಪಾಲಿಟನ್ ಬಂಡವಾಳದ ಅಥವಾ ದೊಡ್ಡ ಭಾರತೀಯ ಗುಂಪಿನ ಆಸ್ತಿಗಳಿಗೆ 100 ರೂ.ಗಳನ್ನು ಸೇರಿಸಿದರೂ, ಅದಕ್ಕೆ ಪ್ರತಿಯಾಗಿ ಪಡೆಯುವುದು ರೂ 50 ಮಾತ್ರ. ಇದು ದೇಶದಲ್ಲಿ ಸಂಪತ್ತಿನ ಅಸಮಾನತೆಯನ್ನು ಹದಗೆಡಿಸುತ್ತದೆ; ಮತ್ತು ಆದಾಯದ ಅಸಮಾನತೆಯು ಸಂಪತ್ತಿನ ಅಸಮಾನತೆಯಿಂದ ಹುಟ್ಟಿಕೊಂಡಿರುವುದರಿಂದ, ಇದು ಆದಾಯದ ಅಸಮಾನತೆಯನ್ನು ಇನ್ನಷ್ಟು ಹದಗೆಡಿಸುತ್ತದೆ. ಇವೆಲ್ಲವೂ ಸ್ಪಷ್ಟವಾಗಿಯೂ ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವ ದೇಶ ಆಡಲಿತದ ಗುರಿಗೆ ಮತ್ತು ಸಂವಿಧಾನದ ನಿರ್ದೇಶನ ತತ್ವಗಳಿಗೆ ವಿರುದ್ಧವಾದ ಸಂಗತಿ. ಆದ್ದರಿಂದ ಸಂವಿಧಾನಕ್ಕೆ ಎದುರಾಗಿ ಮೋದಿ ಸರ್ಕಾರದ ಪಾಪವು ಕೇವಲ ಲೋಪವಲ್ಲ, ತಪ್ಪು ಕೃತ್ಯದ ಅತ್ಯಂತ ಲಜ್ಜೆಗೆಟ್ಟ ರೂಪವೇ ಆಗುತ್ತದೆ.

ವಿಪರ್ಯಾಸವೆಂದರೆ, ಸಂವಿಧಾನದ ಸಾಮಾಜಿಕ ತತ್ವಶಾಸ್ತ್ರವನ್ನು ಈ ರೀತಿ ಕೈಬಿಡುವ ಬಗ್ಗೆ ಯಾವುದೇ ಸಾರ್ವಜನಿಕ ಚರ್ಚೆ ನಡೆದಿಲ್ಲವಷ್ಟೇ ಅಲ್ಲ, ಅದಕ್ಕೆ ಕಾರಣಗಳನ್ನು ಸಹ ಸರ್ಕಾರವು ವಿವರಿಸಿಲ್ಲ.



ಮೋದಿ ಸರಕಾರದ ಕ್ಲಿಯರೆನ್ ಸೇಲ್
ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೊಳ್ಳಿ

ಈಗ ಅಸ್ತಿತ್ವದಲ್ಲಿರುವಂತೆ ಸಾರ್ವಜನಿಕ ವಲಯವನ್ನು ಖಾಸಗೀಕರಣಗೊಳಿಸಬೇಕಾಗಿರುವುದಾದರೂ ಏತಕ್ಕೆ ಎಂಬುದನ್ನು ಎಂದೂ ಸ್ಪಷ್ಟಪಡಿಸಲಾಗಿಲ್ಲ; ಖಾಸಗೀಕರಣಕ್ಕೆ ಒದಗಿಸಲಾದ ಏಕೈಕ ಸಮರ್ಥನೆಯೆಂದರೆ ಸಾರ್ವಜನಿಕ ವಲಯವು ಅರ್ಥವ್ಯವಸ್ಥೆಯಲ್ಲಿ ಕನಿಷ್ಠ ಅಸ್ತಿತ್ವವನ್ನು ಮಾತ್ರ ಹೊಂದಿರಬೇಕು ಎಂಬ ಮೋದಿಯವರ ಪ್ರತಿಪಾದನೆಯಷ್ಟೇ. ಲೆವಿಸ್ ಕ್ಯಾರೊಲ್ ಅವರ "ದಿ ಹಂಟಿಂಗ್ ಆಫ್ ದಿ ಸ್ನಾರ್ಕ್" ಎಂಬ ಅಸಂಗತ ಪದ್ಯದಲ್ಲಿ ಒಂದು ಪಾತ್ರವು "ವಾಟ್ ಐ ಟೆಲ್ ಯು ಥ್ರೀ ಟೈಮ್ಸ್ ಈಸ್ ಟ್ರೂ" ಅಂದರೆ ನಾನು ಮೂರು ಬಾರಿ ಹೇಳುವಂತದ್ದು ಸತ್ತ ಎಂದು ಹೇಳುವಂತೆ, ಮೋದಿಯವರು ಮೂರು ಬಾರಿ ಹೇಳುವುದು ನಿಜವೆಂದು ಭಾವಿಸಲಾಗಿದೆ, ಯಾವುದೇ ವಾದ ಮತ್ತು ಚರ್ಚೆಯ ಅಗತ್ಯವಿಲ್ಲ. ಇದು ಸಂವಿಧಾನಕ್ಕೆ ತಿರಸ್ಕಾರದ ಪ್ರದರ್ಶನವಾಗಿದ್ದು, ಇದನ್ನು ಒಪ್ಪಲು ಸಾಧ್ಯವಿಲ್ಲ, ಯಾವುದೇ ಬೆಲೆ ತೆತ್ತಾದರೂ ಅದನ್ನು ಪ್ರತಿರೋಧಿಸಬೇಕಾಗಿದೆ.

ಕೆಳಹಂತದ ಅಧಿಕಾರಿಗಳು, ಒತ್ತಿ ಕೇಳಿದಾಗ, ಮೋದಿ ಸರ್ಕಾರದ ಬೃಹತ್ ಖಾಸಗೀಕರಣ ಯೋಜನೆಗಳನ್ನು ಬೆಂಬಲಿಸಲು ಯಾವುದೇ ವಾದವನ್ನು ನೀಡುವುದಿಲ್ಲ, ಆದರೆ ಸರ್ಕಾರದ ಬಜೆಟ್‌ಗೆ ಸಂಪನ್ಮೂಲಗಳನ್ನು ಸಂಗ್ರಹಿಸುವ ಸಾಧನ ಎಂದಷ್ಟೇ ಒಟ್ಟಾರೆಯಾಗಿ ಖಾಸಗೀಕರಣದ ಪ್ರಯೋಜನಗಳನ್ನು ಉಲ್ಲೇಖಿಸುತ್ತಾರೆ. ಆದರೆ **ಇದು ತಾರ್ಕಿಕವಾಗಿ ಸಂಪೂರ್ಣವಾಗಿ ದೋಷಪೂರಿತವಾದ ವಾದವಾಗಿದೆ. ಸಂಪನ್ಮೂಲ ಕ್ರೋಢೀಕರಣದ ಸಾಧನವಾಗಿ ಖಾಸಗೀಕರಣವು ವಿತ್ತೀಯ ಕೊರತೆಯ ವಿಧಾನಕ್ಕಿಂತ ಭಿನ್ನವೇನೂ ಆಗಿಲ್ಲ. ಆದರೆ ಅದರ ಪರಿಣಾಮಗಳು ಮಾತ್ರ ಮಾರಕವಾಗಿವೆ.**

ಇಲ್ಲಿ ನಾವು "ಸ್ಟಾಕ್"(ದಾಸ್ತಾನು)ಗಳು ಮತ್ತು "ಫ್ಲೋ"(ಹರಿವು)ಗಳ ನಡುವೆ ವ್ಯತ್ಯಾಸವನ್ನು ನೋಡಬೇಕು. ಹಣಕಾಸಿನ ಕೊರತೆಯು ಸರ್ಕಾರದ ವರಮಾನಕ್ಕಿಂತ ಸರ್ಕಾರದ ವೆಚ್ಚ ಎಷ್ಟು ಅಧಿಕವಾಗಿರುತ್ತದೆ ವಂಬುದನ್ನು ಸೂಚಿಸುತ್ತದೆ; ವೆಚ್ಚ ಮತ್ತು ವರಮಾನ ಎರಡೂ ಹರಿವುಗಳು.

ಪುಟ 14 ನೋಡಿ

ಖಾಸಗೀಕರಣ ಸಂವಿಧಾನದ ಮೂಲ ತತ್ವಕ್ಕೇ ವಿರುದ್ಧ

ಪುಟ 13 ರಿಂದ



ಇದು ಅರ್ಥವ್ಯವಸ್ಥೆಯಲ್ಲಿ ಒಟ್ಟು ಬೇಡಿಕೆಯ ಮಟ್ಟವನ್ನು ಹೆಚ್ಚಿಸುತ್ತದೆ; ಮತ್ತು ಅಂತಹ ಸೇರ್ಪಡೆಯು ಉತ್ಪಾದನೆ ಮತ್ತು ಉದ್ಯೋಗದ ಮಟ್ಟವನ್ನು ಹೆಚ್ಚಿಸಲು ಅಥವಾ ದುಡಿಯುವ ಜನರ ಹಣದ ಆದಾಯಕ್ಕೆ ಹೋಲಿಸಿದರೆ ಬೆಲೆಗಳ ಮಟ್ಟವನ್ನು ಹೆಚ್ಚಿಸಲು (ಉತ್ಪನ್ನದ ಹೆಚ್ಚಳ ಸಾಧ್ಯವಾಗದಿದ್ದರೆ)ಕಾರಣವಾಗುವುದರಿಂದ, ಅದು ಖಾಸಗಿ ಉಳಿತಾಯವನ್ನು ಎರಡೂ ರೀತಿಯಲ್ಲಿ ಹೆಚ್ಚಿಸುತ್ತದೆ ಮತ್ತು ಆದ್ದರಿಂದ ಉಳಿತಾಯದಲ್ಲಿನ ಈ ಹೆಚ್ಚಳವನ್ನು ಎರವಲು ಪಡೆಯಲು ಸರ್ಕಾರವನ್ನು ಶಕ್ತಗೊಳಿಸುತ್ತದೆ. ಸರ್ಕಾರವು ಎರವಲು ಪಡೆಯುವ ಉಳಿತಾಯವು ಅದು ಖಾಸಗಿ ಕೈಗಳಿಗೆ ಹಾಕಿದ ಮೊತ್ತಕ್ಕೆ ಸಮನಾಗಿರುತ್ತದೆ (ಸರಳತೆಗಾಗಿ, ಮುಚ್ಚಿದ ಆರ್ಥಿಕತೆ ಎಂದು ಊಹಿಸಲಾಗಿದೆ). ಹೀಗಾಗಿ ಖಾಸಗಿ ಉಳಿತಾಯವು ಉಳಿತಾಯ ಮಾಡುವವರು ಬಳಕೆಯಲ್ಲಿ ಯಾವುದೇ ತ್ಯಾಗವನ್ನು ಮಾಡದೆಯೇ ಖಾಸಗಿ ಹೆಚ್ಚಾಗುತ್ತದೆ; ಮತ್ತು ಎಲ್ಲಾ ಉಳಿತಾಯಗಳು ಸಂಪತ್ತಿಗೆ ಸೇರ್ಪಡೆಗಳಾಗಿರುವುದರಿಂದ, ವಿತ್ತೀಯ ಕೊರತೆಯು ಸಂಪತ್ತಿನ ಅಸಮಾನತೆಯನ್ನು ನಿಷ್ಕಾರಣವಾಗಿ ಹೆಚ್ಚಿಸುತ್ತದೆ.

ವಿತ್ತೀಯ ಕೊರತೆಯ ಬದಲಿಗೆ, ಸರ್ಕಾರವು ಹಣವನ್ನು ಸಂಗ್ರಹಿಸಲು ಸಾರ್ವಜನಿಕ ವಲಯದ ಆಸ್ತಿಗಳನ್ನು ಮಾರಾಟ ಮಾಡಿದರೆ ಈ ಸಂಪೂರ್ಣ ಪ್ರಕ್ರಿಯೆಯು ಸ್ವಲ್ಪವೂ ಬದಲಾಗುವುದಿಲ್ಲ. ಒಂದೇ ವ್ಯತ್ಯಾಸವೆಂದರೆ, ವಿತ್ತೀಯ ಕೊರತೆಗೆ ಹಣಕಾಸು ನೀಡಲು ಸರ್ಕಾರವು ಬ್ಯಾಂಕ್‌ಗಳಿಂದ ಸಾಲ ಪಡೆಯುವ (ಇದು ನಂತರ ಒಂದು ಸಮಾನವಾದ ಮೊತ್ತ ಠೇವಣಿಗಳಾಗಿ ಬ್ಯಾಂಕ್‌ಗಳಿಗೆ ಹರಿಯುವಂತೆ ಮಾಡುತ್ತದೆ) ಬದಲು, ಬಂಡವಾಳಶಾಹಿಗಳು ಸಾರ್ವಜನಿಕ ವಲಯದ ಆಸ್ತಿಗಳನ್ನು ಖರೀದಿಸಲು ಬ್ಯಾಂಕ್‌ಗಳಿಂದ ಸಾಲ ಪಡೆಯುತ್ತಾರೆ ಮತ್ತು ಖರ್ಚು ಮಾಡಲು ಸರ್ಕಾರಕ್ಕೆ ಹಣವನ್ನು ಹಸ್ತಾಂತರಿಸುತ್ತಾರೆ. ಅದರ ಸ್ಥೂಲ ಆರ್ಥಿಕ ಪರಿಣಾಮವೆಂದರೆ, ಪರೋಕ್ಷವಾಗಿ, ಸರ್ಕಾರಿ ವೆಚ್ಚಕ್ಕಾಗಿ ಬ್ಯಾಂಕ್ ಹಣಕಾಸು ಪಡೆಯುವ ಈ ವಿಧಾನವು ಸರ್ಕಾರಿ ವೆಚ್ಚಗಳಿಗೆ ನೇರವಾಗಿ ಬ್ಯಾಂಕ್ ಹಣಕಾಸು ಪಡೆಯುವುದಕ್ಕಿಂತ ಭಿನ್ನವಾಗಿರುವುದಿಲ್ಲ: ಇದು ಒಟ್ಟಾರೆ ಬೇಡಿಕೆಗೆ ಅದೇ ಮೊತ್ತವನ್ನು ಸೇರಿಸುತ್ತದೆ ಮತ್ತು ಸಂಪತ್ತಿನ ಅಸಮಾನತೆಯ ಹೆಚ್ಚಳಕ್ಕೆ ಕಾರಣವಾಗುತ್ತದೆ. ಹಣಕಾಸಿನ ಕೊರತೆಯ ಸಂದರ್ಭದಲ್ಲಿ ಖಾಸಗಿ ವಲಯವು ನೇರವಾಗಿ ಅಥವಾ ಪರೋಕ್ಷವಾಗಿ (ಬ್ಯಾಂಕ್‌ಗಳ ಮೂಲಕ), ಸರ್ಕಾರದ ಮೇಲಿನ ಕಾಗದದ ಹಕ್ಕುಗಳನ್ನು (ಸರ್ಕಾರಿ ಬಾಂಡ್‌ಗಳ ರೂಪದಲ್ಲಿ) ಹೊಂದಿದೆ; ಖಾಸಗೀಕರಣದ ಸಂದರ್ಭದಲ್ಲಿ ಅದು ಸಾರ್ವಜನಿಕ ವಲಯದ ಕಂಪನಿಗಳಲ್ಲಿ ಇಕ್ವಿಟಿಯನ್ನು ಹೊಂದಿದೆ (ಮತ್ತು ಆ ಮೂಲಕ ಅವುಗಳನ್ನು ನಿಯಂತ್ರಿಸುತ್ತದೆ). ಹೀಗಾಗಿ ಸ್ಥೂಲ ಆರ್ಥಿಕ ಪರಿಣಾಮಗಳು ಒಂದೇ ಆಗಿರುವಾಗ, ಖಾಸಗೀಕರಣವು ಲಾಭ ಗಳಿಸುವ ಉದ್ದೇಶದಿಂದ ಕಂಪನಿಗಳ ನಿರ್ವಹಣೆಯನ್ನು ಖಾಸಗಿ ವಲಯಕ್ಕೆ ತೆಗೆದುಕೊಳ್ಳಲು ಅನುಮತಿಸುತ್ತದೆ, ಅದರಿಂದ ಜನರಿಗೆ ಪ್ರಯೋಜನವಾಗುವುದಿಲ್ಲ.

ವಿತ್ತೀಯ ಕೊರತೆಯು ಸರ್ಕಾರಕ್ಕೆ ಋಣಭಾರವನ್ನು ಉಂಟುಮಾಡಿದರೆ, ಖಾಸಗೀಕರಣವು ಸಾಲ-ಸೃಷಿಸುವಂತದ್ದು ಆಗಿರುವುದಿಲ್ಲ ಮತ್ತು ಅದರಿಂದಾಗಿ ಸರ್ಕಾರವು ನಂತರ ಬಡ್ಡಿ ಪಾವತಿಯ ಬಾಧ್ಯತೆಗಳನ್ನು ಹೊಂದಿರಯುವುದಿಲ್ಲ ಎಂದು ಕೆಲವೊಮ್ಮೆ ವಾದಿಸಲಾಗುತ್ತದೆ. ಆದರೆ ಈ ವಾದದಲ್ಲಿ, ಖಾಸಗೀಕರಣವು ಸರಕಾರಕ್ಕೆ ಬರಬಹುದಾಗಿದ್ದ ಪ್ರತಿಫಲದ ಹರಿವನ್ನು ಖಾಸಗಿಯವರ ಕೈಗೆ ಹಾಕುತ್ತದೆ ಎಂಬ ಸಂಗತಿ ಕಾಣೆಯಾಗಿದೆ. ಪ್ರತಿಫಲ (ರಿಟರ್ನ್)ಗಳನ್ನು ಬಿಟ್ಟುಕೊಡುವುದು ಎಂದರೆ ಬಡ್ಡಿ ಪಾವತಿ ಮಾಡಿದಂತೆಯೇ. ಆದ್ದರಿಂದ ಎರಡೂ ಸಂದರ್ಭಗಳಲ್ಲಿ ಸರ್ಕಾರಕ್ಕೆ ವರಮಾನ ನಷ್ಟದ ಹರಿವು ಇರುತ್ತದೆ; ಸರ್ಕಾರವು ಆದಾಯ ಅಥವಾ ಸಂಪತ್ತಿನ ತೆರಿಗೆಯ ಮೂಲಕ ಸಂಪನ್ಮೂಲಗಳನ್ನು ಸಂಗ್ರಹಿಸಿದರೆ ಮಾತ್ರ ಈ ಹರಿವು ಇರುವುದಿಲ್ಲ, ಹೊರತು ಖಾಸಗೀಕರಣದ ಮೂಲಕ ಸಂಪನ್ಮೂಲಗಳನ್ನು ಸಂಗ್ರಹಿಸಿದರೆ ಅಲ್ಲ.

ಹೀಗಾಗಿ, ದೋಷಪೂರಿತ ಆರ್ಥಿಕ ತರ್ಕಗಳ ಆಧಾರದ ಮೇಲೆ, ಮೋದಿ ಸರ್ಕಾರವು ಸಂವಿಧಾನದ ತಳಹದಿಯಾಗಿರುವ ಸಾಮಾಜಿಕ ತತ್ವವನ್ನು ಕೈಬಿಟ್ಟು ಸಾರ್ವಜನಿಕ ವಲಯವನ್ನು ತಮಗೆ ಒಲವುಳ್ಳ ಕೆಲವು ಬಂಟರಿಗೆ ಹತಾಂತರಿಸುತ್ತದೆ. ತಮ್ಮ ಸರ್ಕಾರ ಭ್ರಷ್ಟಾಚಾರ ಮುಕ್ತವಾಗಿದೆ ಎಂದು ಮೋದಿ ಆಗಾಗ ಬಡಾಯಿ ಕೊಚ್ಚಿಕೊಳ್ಳುತ್ತಾರೆ. ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದ ಪ್ರಸ್ತಾವನೆಯು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಭ್ರಷ್ಟಾಚಾರದ ಅತ್ಯಂತ ಹಗರಣಾತ್ಮಕ ನಿದರ್ಶನವಾಗಿದೆ.



ಮಹಾಸೋಂಕು ಮತ್ತು ವರ್ಗವಿಭಜನೆ



ಪುಟ 11 ರಿಂದ

ಮತ್ತು ಕೃಷಿ ಕ್ಷೇತ್ರವನ್ನು ಹೊರತುಪಡಿಸಿ ಹಣಕಾಸಿನ ಕ್ಷೇತ್ರ ಈ ಸಮಯದಲ್ಲಿ ಹೆಚ್ಚು ತೊಂದರೆಗೆ ಒಳಗಾಗಿಲ್ಲ, ಏಕೆಂದರೆ ಅದರ ವ್ಯವಹಾರಗಳು ಡಿಜಿಟಲ್ ರೂಪದಲ್ಲಿ ನಡೆದಿವೆ.

ಬಡವರು ಮತ್ತು ಮಧ್ಯಮ ವರ್ಗದ ಮೇಲೆ ಈ ಮಹಾಸೋಂಕು ಬೀರಿದ ಪರಿಣಾಮಗಳಲ್ಲಿ ಗಮನಾರ್ಹವಾದ ವ್ಯತ್ಯಾಸಗಳಿವೆ. ತಿಂಗಳಿಗೆ ರೂ.60,000 ಪಡೆಯುವ ಜನರ ಆದಾಯವು ಶೇಕಡಾ 10 ರಷ್ಟು ಕಡಿಮೆಯಾಗಿದ್ದರೆ, ರೂ.20,000 ಕಿಂತಲೂ ಕಡಿಮೆ ಆದಾಯ ಪಡೆಯುತ್ತಿರುವವರು ಸರಾಸರಿ ಶೇಕಡಾ 37 ರಷ್ಟು ನಷ್ಟ ಅನುಭವಿಸುತ್ತಿದ್ದಾರೆ. ಇದು ಇನ್ನೂ ಮುಂದುವರೆದು, ಡಿಜಿಟಲ್ ವಿಭಜನೆ ಬಡವರು ಮತ್ತು ಬಡವರಲ್ಲದವರ ನಡುವೆ ಬಹು ದೊಡ್ಡ ಕಂದರವನ್ನು ಸೃಷ್ಟಿಮಾಡಿದೆ. ಶಿಕ್ಷಣ ಪಡೆಯುವಲ್ಲಿ, ಆರೋಗ್ಯ ಸೌಲಭ್ಯ, ಲಸಿಕೆ ಪಡೆಯುವಲ್ಲಿ ಹಾಗೂ ವಸ್ತುಗಳ ಖರೀದಿ ಹಾಗೂ ಮಾರಾಟದಲ್ಲಿ ಕೂಡ ಈ ವಿಭಜನೆಯನ್ನು ಸ್ಪಷ್ಟವಾಗಿ ಕಾಣಬಹುದು.

ಆಕ್ಸ್‌ಫಾಮ್ ಸಮೀಕ್ಷೆಯ ಪ್ರಕಾರ 32 ಕೋಟಿ ವಿದ್ಯಾರ್ಥಿಗಳು, ಬಹುತೇಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಕೋವಿಡ್-19 ರ ಸಮಯದಲ್ಲಿ ಶಿಕ್ಷಣ ಪಡೆಯಲು ಸಾಧ್ಯವಾಗಲಿಲ್ಲ, ಏಕೆಂದರೆ ಕೇವಲ ಶೇಕಡಾ 4 ರಷ್ಟು ವಿದ್ಯಾರ್ಥಿಗಳು ಮಾತ್ರ ಗಣಕಯಂತ್ರ(ಕಂಪ್ಯೂಟರ್) ಪಡೆಯಲು ಮತ್ತು ಶೇಕಡಾ 5 ರಷ್ಟು ವಿದ್ಯಾರ್ಥಿಗಳಿಗೆ ಮಾತ್ರ ಅಂತರ್ಜಾಲ ಸಂಪರ್ಕ(ಇಂಟರ್ನೆಟ್ ಅಕ್ಸೆಸ್) ದೊರೆಯಿತು. ಸಮೀಕ್ಷೆಯು ಇನ್ನೂ ಮುಂದುವರೆದು ಹೇಳುವ ಪ್ರಕಾರ ಮೂರನೇ ಒಂದರಷ್ಟು ವಿದ್ಯಾರ್ಥಿಗಳು ಮತ್ತೆ ಶಾಲೆಗೆ ಹಿಂದಿರುಗುವುದಿಲ್ಲ ಎಂದು ಶೇಕಡಾ 40 ರಷ್ಟು ಶಿಕ್ಷಕರು ಅಭಿಪ್ರಾಯಪಡುತ್ತಾರೆ. ಮುಂದಿನ ದಿನಗಳಲ್ಲಿ ಇದು ಗುರಿ ತಲುಪುವ ಹಾಗೂ ಸಂಪಾದನೆ ಮಾಡುವ ನಿಟ್ಟಿನಲ್ಲಿ ಉಳ್ಳವರು ಹಾಗೂ ಬಡವರ ನಡುವೆ ಇನ್ನೂ ಹೆಚ್ಚಿನ ಕಂದರ ಉಂಟುಮಾಡುತ್ತದೆ. ಸಿಎಂಐಇ (ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ – ಭಾರತದ ಆರ್ಥಿಕತೆಯ ಮೇಲ್ವಿಚಾರಣೆ ಕೇಂದ್ರ)ನ ಒಂದು ಅಂದಾಜಿನ ಪ್ರಕಾರ ಅದರ ಪಟ್ಟಿಯಲ್ಲಿರುವ ಕಂಪನಿಗಳು ಮಾರ್ಚ್ 2021 ರ ತ್ರೈಮಾಸಿಕದ ಕೊನೆಯಲ್ಲಿ ಕಳೆದ ದಶಕದಲ್ಲೇ ಮಿಗುತಾಯ ಹಾಗೂ ಮೀಸಲು ಹಣದಲ್ಲಿ ಅತ್ಯುತ್ತಮ ಬೆಳವಣಿಗೆಯ ಮೂಲಕ ಅತ್ಯಧಿಕ ಲಾಭವನ್ನು ಗಳಿಸಿವೆ, ಆದರೆ ಅದೇ ಸಮಯದಲ್ಲಿ ಸಣ್ಣ ಉದ್ದಿಮೆಗಳು ನಾಶವಾದವು, ಏಕೆಂದರೆ ಅವರ ಬಳಿ ತೊಡಗಿಸಿದ ಬಂಡವಾಳ(ವರ್ಕಿಂಗ್ ಕ್ಯಾಪಿಟಲ್) ಬಹಳ ಕಡಿಮೆ ಇದ್ದ ಕಾರಣ ಮುಂದುವರಿಸಲಾಗಲಿಲ್ಲ. ವಾಸ್ತವದಲ್ಲಿ, ಚೇತರಿಸಿಕೊಂಡ ಮೇಲೂ ನಿಧಿಯನ್ನು ಮತ್ತೆ ಭರ್ತಿ ಮಾಡಲು ಉಳಿತಾಯಗಳು ಬಹುತೇಕ ಬರಿದಾಗಿದ್ದವು ಮತ್ತು ತೊಡಗಿಸಿದ ಬಂಡವಾಳ ಬಹಳಷ್ಟು ಮುಗಿದಿದ್ದವು. ದೊಡ್ಡ ಕಾರ್ಪೊರೇಟ್ ಕಂಪನಿಗಳು ಚಿಕ್ಕ ಕಂಪನಿಗಳನ್ನು ವಶಪಡಿಸಿಕೊಂಡಿದ್ದರಿಂದಾಗಿ ಹೆಚ್ಚಿನ ಕ್ರೋಢೀಕರಣಕ್ಕೆ ಕಾರಣವಾಯಿತು ಮತ್ತು ಏಕಸ್ವಾಮ್ಯ ಕಾರ್ಪೊರೇಟ್‌ಗಳು ಬೆಳೆದವು.

ಈ ಮಹಾಸೋಂಕಿನ ಸನ್ನಿವೇಶವನ್ನು ಹಲವಾರು ಹಂತಗಳಲ್ಲಿ ಅಧಿಕಾರವನ್ನು ಚಲಾಯಿಸಲು ಹಾಗೂ ಕ್ರೋಢೀಕರಿಸಲು ಕೂಡ ಬಳಸಲಾಯಿತು. ಕುಟುಂಬಗಳಲ್ಲಿ, ಪುರುಷಪ್ರಾಧಾನ್ಯತೆಯ ತೀವ್ರಗೊಂಡ ಪ್ರತಿಪಾದನೆಯ ಭಾಗವಾಗಿ ಕೌಟುಂಬಿಕ ಹಿಂಸೆಯ ಘಟನೆಗಳು ಹೆಚ್ಚಾಗಿರುವುದನ್ನು ನೋಡುತ್ತೇವೆ. ಮತ್ತೊಂದೆಡೆ, ಅನೇಕ ಸಂಘಟನೆಗಳು ಹಾಗೂ ಸಂಸ್ಥೆಗಳಲ್ಲಿ, ಸೋಂಕು ಹರಡುವುದನ್ನು ತಡೆಯುವ ಸಲುವಾಗಿ ಎಲ್ಲರೂ ಪಾಲಿಸಲೇಬೇಕಾದ ಏಕಾಂತದ ಅನುಕೂಲವನ್ನು ಬಳಸಿಕೊಂಡು ಅಧಿಕಾರದಲ್ಲಿದ್ದ ಜನರು ತಮ್ಮ ಕೆಳಗಿನವರ ಮೇಲೆ ಸವಾರಿ ಮಾಡಲು ಶುರುಮಾಡಿದರು. ಕರಾಳ ಕಾರ್ಮಿಕ ಕಾನೂನುಗಳು ಮತ್ತು ಕೃಷಿ ಮಸೂದೆಗಳನ್ನು ಈ ಮಹಾಸೋಂಕಿನ ಸಮಯದಲ್ಲಿಯೇ ಯಾವುದೇ ಚರ್ಚೆಯಿಲ್ಲದೇ ಸಂಸತ್ತಿನಲ್ಲಿ ಅಂಗೀಕರಿಸಲಾಯಿತು. ಈ ಕಷ್ಟದ ಸಮಯದಲ್ಲಿ, ಸಾರ್ವಜನಿಕ ಆಸ್ತಿಗಳನ್ನು ಖಾಸಗೀಕರಿಸುವ ಕಾರ್ಯಸೂಚಿಯನ್ನು ಸರ್ಕಾರ ಮುಂದಕ್ಕೆ ತಂದಿತು. ಇದರಿಂದ ಹೆಚ್ಚು ನಷ್ಟ ಮಾಡಿಕೊಂಡ ಜನರಲ್ಲಿ ಕಾರ್ಮಿಕರೇ ಬಹಳ. 2019–2020ರ ಅವಧಿಯಲ್ಲಿ ನಿಯತಕಾಲಿಕ/ವೇತನ ಪಡೆಯುವ ಕಾರ್ಮಿಕರ ನೈಜ ಗಳಿಕೆಯು ಶೇಕಡಾ 7.6 ರಷ್ಟು ಕುಸಿಯಿತು ಮತ್ತು ಸ್ವಯಂ ಉದ್ಯೋಗಿಗಳ ಆದಾಯವು ಶೇಕಡಾ 26.4 ರಷ್ಟು ಇಳಿಯಿತು. ಭಾರತೀಯ ಕುಟುಂಬಗಳ ಶೇಕಡಾ 46 ರಷ್ಟು ಜನರು ತಮ್ಮ ಬದುಕು ಸಾಗಿಸಲು ಸಾಲ ಮಾಡಲೇ ಬೇಕಾಯಿತು. ಆದಕಾರಣ, ಲಾಭದ ದುರಾಸೆಯು ನಮ್ಮ ಬದುಕನ್ನೇ ಅಪಾಯಕ್ಕೊಡಿದೆ ಮತ್ತು ಪರಿಸರ, ನೈಸರ್ಗಿಕ ಸಂಪನ್ಮೂಲಗಳ ಲಂಗುಲಗಾಮಿಲ್ಲದ ವಿನಾಶವು ರೋಗ ಹಾಗೂ ಸಾವಿಗೆ ಕಾರಣವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಬಿಕ್ಕಟ್ಟಿನ ಸಂದರ್ಭಗಳಲ್ಲಿ ಕಾರ್ಪೊರೇಟ್‌ಗಳನ್ನು ಪಾರು ಮಾಡಲಾಗುತ್ತದೆ ಮತ್ತು ಸಂಪಾದನೆಯಲ್ಲಿ ನಷ್ಟ, ನಿರುದ್ಯೋಗ, ಹಸಿವು, ಸಾವು ಮತ್ತು ಹಾನಿಯ ರೂಪದಲ್ಲಿ ಮಹಾಸೋಂಕಿನ ಅತ್ಯಂತ ಕೆಟ್ಟ ಪರಿಣಾಮಗಳನ್ನು ಬಡವರು ಅನುಭವಿಸಬೇಕಾಗುತ್ತದೆ.

ತ್ರಿಪುರಾದಲ್ಲಿ ಬೃಹತ್ ರೈತ ವಿಜಯೋತ್ಸವ

ಡಿಸೆಂಬರ್ 24 ರಂದು ತ್ರಿಪುರಾದ ರಾಜಧಾನಿ ಅಗರ್ತಲಾದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ವತಿಯಿಂದ ಒಂದು ಬೃಹತ್ ರ್‍ಯಾಲಿ ನಡೆಯಿತು. ಇದರಲ್ಲಿ ರಾಜ್ಯದೆಲ್ಲೆಡೆಯಿಂದ 15 ಸಾವಿರ ರೈತರು ಭಾಗವಹಿಸಿದ್ದರು. ಕೇಂದದ ಬಿಜೆಪಿ ಸರಕಾರದ ಧೋರಣೆಗಳ ವಿರುದ್ಧ ರೈತರ ದೇಶವ್ಯಾಪಿ ಹೋರಾಟದ ವಿಜಯೋತ್ಸವ ಆಚರಿಸಲು ಈ ರ್‍ಯಾಲಿಯನ್ನು ಸಂಘಟಿಸಲಾಗಿತ್ತು. ಇದರಲ್ಲಿ ಅಖಿಲ ಭಾರತ ಕಿಸಾನ್ ಸಭಾದ ತ್ರಿಪುರಾ ಘಟಕ, ಗಣಮುಕ್ತಿ ಪರಿಷದ್ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ರಾಜ್ಯ ಘಟಕ ಪ್ರಮುಖ ಪಾತ್ರ ವಹಿಸಿದ್ದವು. ರ್‍ಯಾಲಿಯನ್ನುದ್ದೇಶಿಸಿ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಡಾ.ಅಶೋಕ ಧವಳೆ, ರಾಜ್ಯದ ಮಾಜಿ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್, ಗಣಮುಕ್ತಿ ಪರಿಷದ್‌ನ ಅಧ್ಯಕ್ಷ ಜಿತೇಂದ್ರ ಚೌಧುರಿ ಮತ್ತು ಕಿಸಾನ್ ಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಪಬಿತ್ರ ಕರ್ ಮಾತಾಡಿದರು.

ಕೇಂದ್ರ ಸರಕಾರದಂತೆ ರೈತ-ವಿರೋಧಿ ಧೋರಣೆಗಳನ್ನು ಅನುಸರಿಸುತ್ತಿರುವ ರಾಜ್ಯ ಸರಕಾರದ ಮುಂದೆ ಹತ್ತು ಬೇಡಿಕೆಗಳನ್ನು ಮಂಡಿಸಿ, ಜನಗಳ ಪ್ರಶ್ನೆಗಳ ಮೇಲೆ ಹೋರಾಟವನ್ನು ವಿಸ್ತರಿಸಲು ಮತ್ತು ತೀವ್ರಗೊಳಿಸಲು ಸಭೆ ಕರೆ ನೀಡಿತು.





ಭಾರತದ ಬದಲಾವಣೆಯಲ್ಲಿ ರೈತರು ಮತ್ತು ಕಾರ್ಮಿಕರ ಸಖ್ಯತೆಯ ಮಹತ್ವ

ಗುರುರಾಜ ದೇಸಾಯಿ

ಎಲ್ಲಾ ಕ್ರಾಂತಿಗಳಿಗೂ "ಕಾರ್ಮಿಕ ವರ್ಗದ ನೇತೃತ್ವದಲ್ಲಿ ರೈತ-ಕಾರ್ಮಿಕರ ಸಖ್ಯತೆ"ಯೇ ಅಡಿಪಾಯ ಎಂದು ಹಿರಿಯ ಸಿಪಿಐಎಂ ಮುಖಂಡ ಜಿ.ಎನ್ ನಾಗರಾಜ್ ತಿಳಿಸಿದರು. ಅವರು ಸಿಪಿಐಎಂ ಸಾಮಾನ್ಯ ಶಾಖೆ ಡಿಸೆಂಬರ್ 24ರಂದು ಆಯೋಜಿಸಿದ್ದ "ಭಾರತದ ಬದಲಾವಣೆಯಲ್ಲಿ ರೈತರು ಮತ್ತು ಕಾರ್ಮಿಕರ ಸಖ್ಯತೆಯ ಮಹತ್ವ" ಎಂಬ ವಿಚಾರ ಸಂಕಿರಣದಲ್ಲಿ ಮಾತನಾಡುತ್ತಿದರು. ವಿಚಾರ ಸಂಕಿರಣ ಬೆಂಗಳೂರಿನ ಇ.ಎಂ.ಎಸ್ ಭವನದಲ್ಲಿ ನಡೆಯಿತು. ಸಿಪಿಐಎಂ ಕರ್ನಾಟಕ ಫೇಸ್ ಬುಕ್ ಪುಟದಲ್ಲಿ ಲೈವ್ ಪ್ರಸಾರವಾಗಿದ್ದು, ಅದರ ವಿಡಿಯೊ ಈ ಲಿಂಕ್ ನಲ್ಲಿ ದೊರೆಯುತ್ತದೆ.

https://www.facebook.com/karnatakacpim/videos/1253084261839425

ಕ್ರಾಂತಿಗಳ ಬಗ್ಗೆ ಬಹಳಷ್ಟು ಜನರಲ್ಲಿ ತಪ್ಪು ಕಲ್ಪನೆಗಳಿವೆ, ರಷ್ಯದಲ್ಲಿ ನಡೆದದ್ದು ಕೇವಲ ಕಾರ್ಮಿಕ ಕ್ರಾಂತಿ, ವಿಯೇಟ್ನಾಂ, ಚೀನಾದಲ್ಲಿ ನಡೆದದ್ದು ರೈತರ ಕ್ರಾಂತಿ, ಕ್ಯೂಬಾದ ಕ್ರಾಂತಿ ಕೆಲವು ಕ್ರಾಂತಿಕಾರಿಗಳು ನಡೆಸಿದ್ದು ಇತ್ಯಾದಿ ತಪ್ಪು ಕಲ್ಪನೆಗಳಿವೆ. ಅದೇ ರೀತಿ ಲೆನಿನ್ ರೈತ-ಕಾರ್ಮಿಕ ಸಖ್ಯತೆಯನ್ನು ಪ್ರತಿಪಾದಿಸಿದ್ದು, ಮಾರ್ಕ್ಸ್-ಎಂಗೆಲ್ಸ್ ಕಾರ್ಮಿಕರ ಕುರಿತು ಮಾತ್ರ ಗಮನ ಕೇಂದ್ರೀಕರಿಸಿದ್ದರು ಎನ್ನಲಾಗುತ್ತದೆ. ಪ್ಯಾರೀಸ್ ಕಮ್ಯೂನ್ ಮತ್ತಿತರ ಯುರೋಪಿಯನ್ ಕ್ರಾಂತಿಗಳ ವಿಶ್ಲೇಷಣೆ ನಡೆಸುತ್ತಾ ರೈತ-ಕಾರ್ಮಿಕ ಸಖ್ಯತೆಯ ಮಹತ್ವವನ್ನು ಮಾರ್ಕ್ಸ್-ಎಂಗೆಲ್ಸ್ ಪ್ರತಿಪಾದಿಸಿದ್ದರು. ಲೆನಿನ್ ಅದನ್ನು ಇನ್ನಷ್ಟು ವಿಶದೀಕರಿಸಿ ರಶ್ಯಾದಲ್ಲಿ ಅದನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಿದರು ಎಂಬುದು ವಾಸ್ತವ. ಎಲ್ಲಾ ಕ್ರಾಂತಿಗಳಿಗೂ "ಕಾರ್ಮಿಕ ವರ್ಗದ ನೇತೃತ್ವದಲ್ಲಿ ರೈತ, ಕಾರ್ಮಿಕರ ಸಖ್ಯತೆಯೇ ಅಡಿಪಾಯ" ಎಂಬುದನ್ನು ಹೆಚ್ಚೆಚ್ಚು ಪ್ರಚಾರಗೊಳಿಸಬೇಕು. ಇತ್ತಿಚೆಗೆ ದೆಹಲಿಯಲ್ಲಿ ನಡೆದ ರೈತ ಹೋರಾಟದ ಜೊತೆಗೆ ಕಾರ್ಮಿಕ ಚಳುವಳಿ ಬೆರೆತಿರುವುದನ್ನು ದೇಶದ ಜನತೆ ನೋಡಿದೆ. 1980ರ ದಶಕದಲ್ಲಿ ನರಗುಂದ ಮತ್ತು ನವಲಗುಂದ ಗಳಲ್ಲಿ ಆರಂಭವಾಗಿ ನಡೆದ ರೈತ ಚಳುವಳಿಯಲ್ಲೂ ರೈತ ಕಾರ್ಮಿಕರ ಸಖ್ಯತೆಯನ್ನು ಕಾಣಬಹುದಾಗಿತ್ತು. ರೈತರು ಮತ್ತು ಕಾರ್ಮಿರು ಸಖ್ಯತೆಯಿಂದ ಹೋರಾಟ ನಡೆಸಿದ್ದರ ಭಾಗವಾಗಿ ಹೊಸದೊಂದು ರಾಜಕೀಯ ಬದಲಾವಣೆ ಬರಲು ಸಾಧ್ಯವಾಯಿತು.

ರೈತ ಕಾರ್ಮಿಕ ಸಖ್ಯತೆ ಏಕೆ ಬೇಕು?

ಕ್ರಾಂತಿಗಳಲ್ಲಿ ರೈತ ಮತ್ತು ಕಾರ್ಮಿಕರ ಸಖ್ಯತೆಯು ಯಾಕೆ ಮುಖ್ಯವಾಗುತ್ತದೆ ಎಂಬುದನ್ನು ಅರಿಯುವುದು ಅಗತ್ಯ. ಇಂದಿನ ಪರಿಸ್ಥಿತಿಯಲ್ಲಿ ಫ್ಯಾಸಿಸಂ ವಿರುದ್ಧ ಹೋರಾಟವನ್ನು ಮಾಡುವುದಕ್ಕಾಗಿ ಸಹ ಈ ಸಖ್ಯತೆ ಅಡಿಪಾಯ ಆಗಬೇಕಾಗಿದೆ. ಈ ಪರಿಕಲ್ಪನೆ ಬಂದಿದ್ದು ಹೇಗೆ ಎಂಬುದನ್ನು ತಿಳಿಯುವುದು ಮುಖ್ಯವಾಗಿದೆ. ಈ ಪರಿಕಲ್ಪನೆಯನ್ನು ಜಗತ್ತಿನ ಮುಂದೆ ತಂದದ್ದು ಫ್ರೆಡ್ರಿಕ್ ಎಂಗೆಲ್ಸ್. ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಜಗತ್ತಿನಾದ್ಯಂತ ಹೋರಾಟ ಮಾಡುವ ಶಕ್ತಿ ಕಾರ್ಮಿಕರಿಗೆ ಇದೆ. ಆದರೆ ಅದು ಯಶಸ್ವಿಯಾಗಬೇಕಾದರೆ ರೈತರ ಮತ್ತು



ಕಾರ್ಮಿಕ ಸಖ್ಯತೆ ಪ್ರಮುಖವಾಗಿದೆ. ಈ ಪರಿಕಲ್ಪನೆ ಅವರಲ್ಲಿ ಬರಲು ಕಾರಣವಾದ ಅಂಶಗಳೆಂದರೆ, ರೈತ ಸಮುದಾಯದ ಜನಸಂಖ್ಯೆ, ಉತ್ಪಾದನೆಗೆ ಅದು ಕೊಡುವ ಕಾಣಿಕೆ, ರಾಜಕೀಯ ಅಧಿಕಾರದಲ್ಲಿ ಅವರ ಪಾತ್ರ ಪ್ರಮುಖವಾಗಿವೆ. ಕೃಷಿಯಲ್ಲಿ ಬಂಡವಾಳ ಶಾಹಿ ವ್ಯವಸ್ಥೆ ಬೆಳೆಯುತ್ತಿರುವ ಅಂಶವೂ ಇದೆ. ಈ ಕಾರಣದಿಂದ ನಗರದಿಂದ ಹಳ್ಳಿಗಳ ವರೆಗೆ ಕಮ್ಯೂನಿಷ್ಟ ಪಕ್ಷ ಹೋಗಿ ರೈತರ ನಡುವೆ ಪ್ರಚಾರ ಮಾಡುವ ಅಗತ್ಯ ಇದೆ ಎಂಬುದನ್ನು ಎಂಗಲ್ಸ್ ಹೇಳಿದರು. ಅಲ್ಲಿಗೆ ಕಾರ್ಮಿಕರು ಹೋದಾಗ ರೈತರಿಗೆ ಕಾರ್ಮಿಕರ ಬೆಂಬಲವಿದೆ ಎಂಬ ವಿಶ್ವಾಸ ಬರುತ್ತದೆ. ಜೊತೆಗೆ ಕಾರ್ಮಿಕರಿಗೆ ಕೃಷಿ ಕೂಲಿಕಾರರು ಸಿಗುತ್ತಾರೆ. ಇದರಿಂದ ಸಖ್ಯತೆಗೆ ಇನ್ನಷ್ಟು ಬಲ ಬರುತ್ತದೆ. ಇದು ಸಖ್ಯತೆಗೆ ಹಾಗೂ ಕ್ರಾಂತಿಯ ಯಶಸ್ಸಿಗೆ ಸಹಕಾರಿಯಾಗುತ್ತದೆ, ಎಂಬುದು ಎಂಗೆಲ್ಸ್ ರವರ ಪರಿಕಲ್ಪನೆಯಾಗಿತ್ತು. ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದಕ್ಕಾಗಿ ನಡೆದ ಇಂಗ್ಲೀಷ್ ಮತ್ತು ಪ್ರೆಂಚ್ ಕ್ರಾಂತಿ ಯಶಸ್ವಿಯಾಗಿದ್ದು ಕೂಡ ರೈತ ಕಾರ್ಮಿಕರ ಸಖ್ಯತೆಯಿಂದ. ಈ ಚಳುವಳಿ ಬೆಳೆಯಬಾರದೆಂದು ಚಳಿವಳಿಕಾರರರನ್ನು ಅಟ್ಟಾಡಿಸಿ ಕೊಲ್ಲಲಾಯಿತು. ಆ ಸಂದರ್ಭದಲ್ಲಿ ನೂರಾರು ಕಾರ್ಮಿಕರು, ರೈತರು ಹುತಾತ್ಮರಾಗಿದ್ದರು. ಬಂಡವಾಳಶಾಹಿ ಪರವಾಗಿದ್ದ ರೈತರ ಗುಂಪು ಒಂದು ಕಡೆ, ರೈತರ ಪಕ್ಷಗಳ ಜೊತೆಗೆ ಇದ್ದ ರೈತರ ಪಡೆ ಮತ್ತೊಂದು ಕಡೆ, ಇವರಿಬ್ಬರೂ ಕಾರ್ಮಿಕರ ನಾಯಕತ್ವವನ್ನು ಒಪ್ಪುವ ಸ್ಥಿತಿಯಲ್ಲಿ ಇರಲಿಲ್ಲ. ಇಂತಹ ಸಂಕೀರ್ಣತೆಯನ್ನು ನಿಭಾಯಿಸಿ ರೈತ-ಕಾರ್ಮಿಕ ಸಖ್ಯತೆಯನ್ನು ಕಾಪಾಡಬೇಕು ಎಂಬುದನ್ನು ಲೆನಿನ್ ಮಾಡಿ ತೋರಿಸಿದರು. ಬಂಡವಾಳಶಾಹಿ ಮತ್ತು ಪಾಳೇಗಾರಿ ವಿರುದ್ಧ ಧೋರಣೆ ಈ ಚಳುವಳಿಗಳಿಗೆ ಸ್ಫೂರ್ತಿಯಾಗಿದ್ದವು. ಕ್ರಾಂತಿಕಾರಿ ಪ್ರಕ್ರಿಯೆಯಲ್ಲಿ ನಾವು ಸಹಭಾಗಿಗಳಾಗಿ ನಡೆಯುವುದು, ಸಾಮ್ರಾಜ್ಯಶಾಹಿ ವಿರುದ್ದ ಹೋರಾಟ ಬಲಗೊಳ್ಳಲು ಈ ಸಖ್ಯತೆ ಮುಖ್ಯ ಎಂದು ರೈತ ಕಾರ್ಮಿಕ ಚಳುವಳಿಗಳು ನಿರ್ಧರಿಸಿದವು.

ರಷ್ಯಾ ಸೇರಿದಂತೆ ಇತರೆ ಪ್ರದೇಶದಲ್ಲಿ ನಡೆದ ಕ್ರಾಂತಿಗಳ ಕಾಲಘಟ್ಟಕ್ಕೂ ಈಗಿನ ಕ್ರಾಂತಿಗಳ ಕಾಲಘಟ್ಟಕ್ಕೂ ಸಾಕಷ್ಟು ವ್ಯತ್ಯಾಸ ಇದೆ. ಈಗಿನ ಜಾಗತಿಕರಣ, ಖಾಸಗೀಕರಣ ನೀತಿಗಳ ಸಂದರ್ಭದಲ್ಲಿ ಕೃಷಿಯ ಕಾರ್ಪೊರೇಟಿಕರಣ ನಡೆಯುತ್ತಿರುವ ಈ ಸಂದರ್ಭದಲ್ಲಿ ರೈತ ಕಾರ್ಮಿಕರ ಸಖ್ಯತೆಯನ್ನು ಯಾವರೀತಿ ಸ್ಥಾಪಿಸಬೇಕು ಎಂಬುದು ಮುಖ್ಯವಾಗುತ್ತದೆ. ಆದರೆ ಭಾರತದ ಸಂದರ್ಭದಲ್ಲಿ ರೈತ-ಕಾರ್ಮಿಕರ ಸಖ್ಯತೆ ದೂರ ಉಳಿಯಿತು, ಜಾತಿ ವ್ಯವಸ್ಥೆಯು ರೈತರು ಕಾರ್ಮಿಕರನ್ನೇ ಒಗ್ಗಟ್ಟಿನಿಂದ ಇರಲು ಬಿಡುವುದಿಲ್ಲ, ಎಂಬ ಅರಿವೂ ನಮಗೆ ಇರಬೇಕು. ಹೀಗಾಗಿ ಕಾರ್ಮಿಕರ ನಡುವೆ ಒಗ್ಗಟ್ಟು, ರೈತರ ನಡುವೆ ಒಗ್ಗಟ್ಟು ತರುವ ಹಾಗೂ ರೈತ-ಕಾರ್ಮ್ಮಿಕ ಸಖ್ಯತೆ ಸಾಧಿಸುವ ಅಗತ್ಯವಿದೆ ಎಂದು ಜಿ.ಎನ್ ಅಭಿಪ್ರಾಯ ಪಟ್ಟರು.

ಇನ್ನೊಬ್ಬ ಭಾಷಣಕಾರರಾಗಿ ಭಾಗವಹಿಸಿದ್ದ ಸಿಐಟಿಯು ಪ್ರಧಾನ ಕಾರ್ಯದರ್ಶಿ, ಸಿಪಿಐಎಂ ರಾಜ್ಯ ಕೇಂದ್ರದ ನಾಯಕ ಮೀನಾಕ್ಷಿಸುಂದರಂ ಮಾತನಾಡಿ, ಇಂದಿನ ಸಮಸ್ಯೆಗಳಿಗೆ ಮೂಲಕಾರಣ ಬಂಡವಾಳಶಾಹಿ. ಇಂದಿನ ಅಭಿವೃದ್ಧಿಯ ಹಂತದಲ್ಲಿ, ಸಮಾಜದ ವಿನ್ಯಾಸದಲ್ಲಿ ಬಂಡವಾಳಶಾಹಿಯ ಅಗತ್ಯವಿಲ್ಲ. ಬಂಡವಾಳಶಾಹಿಯನ್ನು ಕಿತ್ತೆಸೆಯಬೇಕು. ಅದನ್ನು ಸಾಧಿಸುವುದು ಹೇಗೆ ಎಂಬ ಪ್ರಶ್ನೆ ಬಂದಾಗ ಮೊದಲಿಗೆ ಕಾಣವುದು ಕಾರ್ಮಿಕ ವರ್ಗ. ಕಾರ್ಮಿಕ ವರ್ಗ ಇದನ್ನು ಸಾಧಿಸಲು ರೈತರ ಕಾರ್ಮಿಕರ ಐಕ್ಯತೆ, ಕಾರ್ಮಿಕ-ರೈತ ಸಖ್ಯತೆ ಮುಖ್ಯವಾಗುತ್ತದೆ ಎಂದರು. ಸಮತಾವಾದದ, ಮಾನವತಾವಾದದ ಕಡೆ ಸಾಗಲು ನಮಗೆ ಇದು ದಾರಿಯಾಗುತ್ತದೆ. ರೈತರ ಕಾರ್ಮಿಕರ ಐಕ್ಯತೆಯೆನ್ನುವಾಗ ಅದನ್ನು ರೈತ ಮತ್ತು ಕಾರ್ಮಿಕ ಸಂಘಟನೆಗಳ ಐಕ್ಯತೆಗೆ ಸಮೀಕರಿಸಲಾಗುತ್ತದೆ. ಅದೂ ಖಂಡಿತ ಬೇಕು, ಆದರೆ ಅಷ್ಟೇ ಸಾಕಾಗುವುದಿಲ್ಲ. ರೈತ ಮತ್ತು ಕಾರ್ಮಿಕ ವರ್ಗದೊಳಗೆ ಐಕ್ಯತೆ, ರೈತ ಮತ್ತು ಕಾರ್ಮಿಕ ವರ್ಗಗಳ ನಡುವೆ ಸಖ್ಯತೆ ಏರ್ಪಡಬೇಕು

ಪ್ರಜಾಪ್ರಭುತ್ವ ಕ್ರಾಂತಿ ಪೂರ್ಣವಾಗಲು ರೈತ-ಕಾರ್ಮಿಕ ಸಖ್ಯತೆ ಅಗತ್ಯ

ಬಂಡವಾಳಶಾಹಿ ಸ್ಥಾಪಿತವಾಗಿ ಬಿಟ್ಟರೆ ಅದರ ಮುಂದಿನ ಹಂತವಾಗಿ ಸಮಾಜವಾದಿ ಕ್ರಾಂತಿ ಆಗುತ್ತದೆ ಎಂದು ಭಾವಿಸಲಾಗಿತ್ತು. ಆದರೆ ಅದು ಆಯಾ ದೇಶದ ಪರಿಸ್ಥಿತಿಯ ಆಧಾರದ ಮೇಲೆ ನಿರ್ಧಾರವಾಗುತ್ತದೆ. ಅದರ ಭಾಗವಾಗಿಯೇ ಭಾರತದ ಸ್ವಾತಂತ್ಯ ಹೋರಾಟದಲ್ಲಿ ಮತ್ತು ನಂತರ ಕಮ್ಯೂನಿಷ್ಟರ ಹೋರಾಟವನ್ನು ಗಮನಿಸಬಹುದಾಗಿದೆ. ಆ ಸಂದರ್ಭದಲ್ಲಿ ಪಾಳೇಗಾರಿ ಜಮೀನುದಾರರು, ರಾಜಮನೆತನಗಳು ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಬೆಂಬಲಿಸುತ್ತಿದ್ದರು. ಭಾರತದ ಬೆಳೆಯುತ್ತಿದ್ದ ಬಂಡವಾಳಶಾಹಿ, ಕಾರ್ಮಿಕ ವರ್ಗಗಳು, ದೊಡ್ಡ ಸಂಖ್ಯೆಯಲ್ಲಿ ಆಗಲೇ ಇದ್ದ ರೈತಾಪಿ, ಕೃಷಿ ಕೂಲಿಕಾರ, ಮಧ್ಯಮ ಮತ್ತಿತರ ವರ್ಗಗಳು ಅದನ್ನು ವಿರೋಧಿಸುತ್ತಿದ್ದವು. ಹಾಗಾಗಿ ಕಮ್ಯುನಿಸ್ಟ್ ಪಕ್ಷ ಆಗ ತಾನೇ ಬೆಳೆಯುತ್ತಿದ್ದ ಕಾರ್ಮಿಕ ವರ್ಗ ಹಾಗೂ ಗ್ರಾಮೀಣ ಸಮಾಜದ ದೊಡ್ಡ ಭಾಗವಾಗಿದ್ದ ರೈತ ವರ್ಗಗಳನ್ನು ಅಣಿ ನೆರೆಸಿ, ಎಲ್ಲಾ ವರ್ಗಗಳು ಒಗ್ಗೂಡಿದ್ದ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಗಳಲ್ಲಿ ಭಾಗವಹಿಸಿತು. ಇದರ ಫಲವಾಗಿ ಭಾರತ ಸ್ವತಂತ್ರವಾದದ್ದು ಬೂರ್ಜ್ವಾ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ಥಾಪಿಸಿದಂತಹ ಘಟ್ಟವಾಗಿತ್ತು. ಆದರೆ ಪಾಳೆಯಗಾರಿ ವ್ಯವಸ್ಥೆಯನ್ನು ನಾಶ ಮಾಡಬೇಕಾಗಿದ್ದ ಪ್ರಜಾಪ್ರಭುತ್ವ ಕ್ರಾಂತಿ ಪೂರ್ಣವಾಗಲಿಲ್ಲ. ಭಾರತದಲ್ಲಿ ಬಂಡವಾಳ ಶಾಹಿ ವ್ಯವಸ್ಥೆ ಪಾಳೆಯಗಾರಿ ವ್ಯವಸ್ಥೆಯ ಜತೆ ಹೊಂದಾಣಿಕೆಯಲ್ಲಿದೆ. ಹಾಗಾಗಿ ಪಾಳೆಯಗಾರಿ ವ್ಯವಸ್ಥೆಯನ್ನು ನಾಶ ಮಾಡುವ ಪ್ರಜಾಪ್ರಭುತ್ವ ಕಾಂತಿಯನ್ನು ಪೂರ್ಣಗೊಳಿಸಬೇಕು. ಈ ಕ್ರಾಂತಿಯನ್ನು ಬಂಡವಾಳಶಾಹಿ ಸಹ ವಿರೋಧಿಸುತ್ತದೆ. ಆದ್ದರಿಂದ ಕಾರ್ಮಿಕ ವರ್ಗದ ನಾಯಕತ್ವದಲ್ಲಿರುವ ರೈತ-ಕಾರ್ಮಿಕ ಸಖ್ಯತೆಯ ಮೇಲೆ ಆಧಾರಿತವಾಗಿರುವ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಹಂತ ಅಗತ್ಯವಾಗುತ್ತದೆ ಎಂಬುದು ಸಿಪಿಐಎಂ ನ ಕಣ್ನೋಟವಾಗಿದೆ ಎಂದರು.

ವಿಚಾರ ಸಂಕಿರಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾದ್ಯಕ್ಷ ಮತ್ತು ಸಿಪಿಐಎಂ ಹಿರಿಯ ಮುಖಂಡ ಜಿ.ಸಿ. ಬಯ್ಯಾರೆಡ್ಡಿ ಮಾತನಾಡಿ, ರೈತ ಕಾರ್ಮಿಕರ ಸಖ್ಯತೆಯು ಕೃಷಿಕಾಯ್ದೆಗಳನ್ನು ರದ್ದುಪಡಿಸಿದ ಒಂದು ವರ್ಷಗಳ ಕಾಲದ ಐತಿಹಾಸಿಕ ಹೋರಾಟದ ಭಾಗವಾಗಿತ್ತು. 1980ರ ದಶಕದಲ್ಲಿ ನರಗುಂದ-ನವಲಗುಂದ ಗಳಿಂದ ಆರಂಭವಾದ ದೀರ್ಘ ರೈತ ಹೋರಾಟದಲ್ಲಿ, ರೈತ ಮತ್ತು ಕಾರ್ಮಿಕ ವರ್ಗಗಳ ನಡುವೆ ಏರ್ಪಟ್ಟ ಸಖ್ಯತೆಯನ್ನು ಕಣ್ಣಾರೆ ಕಂಡಿದ್ದನ್ನು ಅವರು ಸ್ಮರಿಸಿದರು. ಇವೆರಡನ್ನು ಸ್ಪೂರ್ತಿಯಾಗಿ ತೆಗೆದುಕೊಂಡು ರೈತ ಕಾರ್ಮಿಕರ ಒಳಗೆ ಐಕ್ಯತೆ ಮತ್ತು ರೈತ-ಕಾರ್ಮಿಕ ಸಖ್ಯತೆಗಳನ್ನು ಬಲಪಡಿಸುವತ್ತ ಹೆಜ್ಜೆ ಹಾಕಬೇಕು ಎಂದು ಕರೆ ನೀಡಿದರು,

ಶಾಖೆಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆ. ಮಹಾಂತೇಶ್ ಸ್ವಾಗತಿಸಿದರೆ, ಕೆ.ಎಸ್. ಲಕ್ಷ್ಮಿ ನಿರ್ವಹಿಸಿದರು. ವಿವಿಧ ಪ್ರದೇಶಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು.

ಅಖಿಲ ಭಾರತ ಕಿಸಾನ್ ಸಭಾ..... ಪುಟ 16 ರಿಂದ

ಆರ್ಥಿಕ ಮತ್ತು ರಾಜಕೀಯ ಅಧಿಕಾರದ ಗಳಿಕೆ"ಯ ಗುರಿಯೊಂದಿಗೆ 1936ರಲ್ಲಿ ಹುಟ್ಟಿ ಬಂದು ವಸಾಹತುಶಾಹೀ-ವಿರೋಧಿ ಸ್ವಾತಂತ್ರ್ಯ ಹೋರಾಟವನ್ನು ಬಲಿಷ್ಟಗೊಳಿಸಿದ ಈ ಸಂಘಟನೆಯ ಇತಿಹಾಸ ಆಧುನಿಕ ಭಾರತದ ಪ್ರಜಾಪ್ರಭುತ್ವ ಚಳುವಳಿಯ ಇತಿಹಾಸದ ಒಂದು ಅಭಿನ್ನ ಅಂಗ. ಈ ಚರಿತ್ರೆಯ ಒಂದು ಪಕ್ಷಿನೋಟವನ್ನು ಕೊಡುವ, ಈಗ ಈ ಸಂಘಟನೆಯ ಪ್ರಧಾನ ಕಾರ್ಯದರ್ಶಿಯಾಗಿ ರೈತರ ದೇಶವ್ಯಾಪಿ ಹೋರಾಟದ ನೇತೃತ್ವದಲ್ಲಿರುವ ಪ್ರಮುಖರಲ್ಲಿ ಒಬ್ಬರಾದ ಹನ್ನನ್ ಮೊಲ್ಲರವರ ಕಿರುಪುಸ್ತಕವಿದು.

ಎಐಕೆಎಸ್ ಇತರ ಸಂಘಟನೆಗಳೊಂದಿಗೆ ಕಳೆದ 4-5 ವರ್ಷಗಳಲ್ಲಿ ರೈತ ಚಳುವಳಿಯನ್ನು ತೀವ್ರಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಅವಧಿಯಲ್ಲಿ ರೈತ ಚಳುವಳಿಗಳ ನವೀನ ಸಂಯುಕ್ತ ಪ್ರವಾಹವೇ ಮೂಡಿ ಬಂದಿದೆ. ಈ ಹೋರಾಟಗಳ ಹೆಚ್ಚಳದಿಂದ, ಈ ಅವಧಿಯಲ್ಲಿ ಎಐಕೆಎಸ್ ತನ್ನ ಶಕ್ತಿಯನ್ನು ಹೆಚ್ಚಿಸಿಕೊಂಡಿದೆ. ಎಐಕೆಎಸ್ ನ ಸಂಘಟನಾ ಚಟುವಟಿಕೆಗಳು ಹಲವು ಪಟ್ಟು ಹೆಚ್ಚಾಗಿವೆ; ಚಳುವಳಿಯನ್ನು ಕಟ್ಟಬೇಕಾದ ಕೆಲಸಗಳು ಹೆಚ್ಚಾಗಿವೆ. ಐಕ್ಯತೆಯನ್ನು ದೃಢಪಡಿಸುವ, ಆ ಮೂಲಕ ರಾಷ್ಟ್ರದ ಪ್ರಜಾಸತ್ತಾತ್ಮಕ ಆಂದೋಲನವನ್ನು ಬಲಪಡಿಸುವ ಕೆಲಸಗಳು ಹೆಚ್ಚಾಗಿವೆ. ಈ ಹಿನ್ನೆಲೆಯಲ್ಲಿ ಕೈಪಿಡಿಯಂತಿರುವ ಈ ಕಿರು ಪುಸ್ತಕವು ಕಿಸಾನ್ ಸಭಾದ ಚರಿತ್ರೆಯನ್ನು ಸಂಘಟನೆಯ ಒಳಗಿನವರಿಗೂ, ಹೊರಗಿನವರಿಗೂ ಕಲಿಯಲು ಮತ್ತು ಕಲಿಸಲು ನೆರವಾಗಬಲ್ಲದು.

ಸಾಮ್ರಾಜ್ಯಶಾಹಿಯ ಮೇಲೆ ರೈತರ ವಿಜಯ..... ಪುಟ 16 ರಿಂದ


ಎದುರಾದ ಒಂದು ಹಿನ್ನಡೆ ಎಂದು ನೋಡಲಾಗಿದೆ. ಹಿನ್ನಡೆ ಏಕೆಂದರೆ, ನವ-ಉದಾರವಾದಿ ಕಾರ್ಯಸೂಚಿಯ ನಿರ್ಣಾಯಕ ಭಾಗವಾಗಿ ರೈತ ಕೃಷಿಯನ್ನು ಕಾರ್ಪ್ರೇಟ್‌ಗಳಿಗೆ ಅಧೀನಗೊಳಿಸುವ ಮೂಲಕ ಕೃಷಿವಲಯದ ಮೇಲೆ ಕಾರ್ಪೊರೇಟ್‌ಗಳು ಪ್ರಾಬಲ್ಯ ಹೊಂದುವುದನ್ನು ಉತ್ತೇಜಿಸುವುದೇ ಕೃಷಿ ಕಾನೂನುಗಳ ಉದ್ದೇಶವಾಗಿತ್ತು. ಈ ಕಾನೂನುಗಳನ್ನು ರದ್ದುಗೊಳಿಸಿದ್ದರಿಂದಾಗಿ ಈ ಪ್ರಯತ್ನಕ್ಕೆ ಹಿನ್ನಡೆಯಾಗಿದೆ.

ಈ ಎರಡೂ ಮಟ್ಟಗಳ ಗ್ರಹಿಕೆಗಳು ಸಂಪೂರ್ಣವಾಗಿ ಸರಿಯಾಗಿವೆ. ಆದರೆ ಇವುಗಳಾಚೆಗೆ, ಮೂರನೆಯ ಮಟ್ಟದ ಒಂದು ಗ್ರಹಿಕೆಯೂ ಇದೆ. ರೈತರ ವಿಜಯವು ಹೆಚ್ಚಿನ ಮಹತ್ವ ಹೊಂದಿದ್ದರೂ ಅದರ ಬಗ್ಗೆ ಗಮನ ಹರಿದಿಲ್ಲ. ಇದು ಅತ್ಯಂತ ಮೂಲಭೂತ ಅರ್ಥದಲ್ಲಿ ಸಾಮ್ರಾಜ್ಯಶಾಹಿಯನ್ನು ಹಿಮ್ಮೆಟ್ಟಿಸಿದೆ ಎಂಬುದಕ್ಕೆ ಸಂಬಂಧಿಸಿದೆ. ಈ ಕಾರಣದಿಂದಾಗಿಯೇ, ಪಾಶ್ಚಾತ್ಯ ಮಾಧ್ಯಮಗಳು ರೈತರಿಗೆ ತಲೆಬಾಗಿದ ಮೋದಿ ಸರ್ಕಾರವನ್ನು ಕಟುವಾಗಿ ಟೀಕಿಸಿವೆ. ಈ ಬಗ್ಗೆ ಆಶ್ಚರ್ಯಪಡಬೇಕಾದ್ದಿಲ್ಲ.

ಒಂದು ಇಡೀ ವರ್ಷ ದೆಹಲಿಯ ಗಡಿ ಭಾಗಗಳಲ್ಲಿ ರೈತರು ಬಿಡಾರ ಹೂಡಿದ್ದರು. ಇಂತಹ ಒಂದು ಅದ್ಭುತ ಸಾಧನೆಯನ್ನು ಹೇಗೆ ರೈತರು ಸಾಧಿಸಿದರು ಎಂಬುದನ್ನು ಸಂಶೋಧಕರು ಭವಿಷ್ಯದಲ್ಲಿ ಬಯಲು ಮಾಡುವುದರಲ್ಲಿ ಸಂದೇಹವಿಲ್ಲ. ಇದು, ಸಂಭ್ರಮಿಸಬೇಕಾದ ಸಾಧನೆಯೇ, ಆಚರಿಸಬೇಕಾದ ಸಾಧನೆಯೇ.

ಗಂಗಾವತಿಯಲ್ಲಿ ಬಿಡುಗಡೆಯಾಗಲಿರುವ ಪುಸ್ತಕಗಳು

ಜನವರಿ 2 ರಿಂದ 4 ವರೆಗೆ ಗಂಗಾವತಿ, ಕೊಪ್ಪಳದಲ್ಲಿ ನಡೆಯಲಿರುವ ಸಿಪಿಐ(ಎಂ) ಕರ್ನಾಟಕದ 23 ನೆಯ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ದುಡಿಯುವ ಜನರ ಮತ್ತು ಕಮ್ಯುನಿಸ್ಟ್ ಚಳುವಳಿಗೆ ಸಂಬಂಧಿಸಿದ ನಾಲ್ಕು ಪುಸ್ತಕಗಳು ಬಿಡುಗಡೆಯಾಗಲಿವೆ. ಅವುಗಳು ಮುಖಪುಟ ಮತ್ತು ಕಿರು ಪರಿಚಯ ಇಲ್ಲಿವೆ.



ಬೆಲೆ: ರೂ. 430

ಗೆಳೆಯ ಡಾ.ಕೆ.ಪ್ರಕಾಶ್ ಅವರ 'ಸಮಬಾಳಿನ ಸಂಘರ್ಷ–ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಚಳವಳಿಯ ಒಂದು ನೋಟ' ಎಂಬ ಈ ಕೃತಿಯು ಚಾರಿತ್ರಿಕ ಅಗತ್ಯವೊಂದನ್ನು ಪೂರೈಸಿದೆ. ಕಮ್ಯೂನಿಸ್ಟರ ಬಗ್ಗೆ ಇದ್ದ ಕೆಲವು ಪೂರ್ವಾಗ್ರಹ ಅಥವಾ ಪೂರ್ವನಿಶ್ಚಿತ ಅಭಿಪ್ರಾಯಗಳಿಗೂ ಈ ಕೃತಿಯಲ್ಲಿ ಉತ್ತರವಿದೆ. ಆದರೆ

ಉತ್ತರಿಸುವುದೇ ಪ್ರಧಾನ ಭೂಮಿಕೆಯಾಗದೆ, ಆಯಾ ಅಭಿಪ್ರಾಯಗಳನ್ನು ಚಾರಿತ್ರಿಕ ಸಂದರ್ಭದ ಹಿನ್ನೆಲೆಯಲ್ಲಿಟ್ಟು ವಿವರಿಸುವ ವಿಧಾನದಿಂದ ಪ್ರಕಾಶ್ ಅವರು ತಮ್ಮ ಸಮಜಾಯಿಷಿಗಳಿಗೆ ಕ್ರಮಬದ್ಧತೆಯನ್ನು ತಂದಿರುವುದು ವಿಶೇಷವಾಗಿದೆ. ಜೊತೆಗೆ ಕೆಲವು ವಿಷಯಗಳಲ್ಲಿ ಕಮ್ಯೂನಿಸ್ಟರ ನಡೆ, ನಿಲುವುಗಳಲ್ಲಿರುವ ಕೊರತೆಗಳನ್ನು ಒಪ್ಪಿರುವುದು ವಿಶ್ಲೇಷಣಾತ್ಮಕ ಬರವಣಿಗೆಗೆ ಇರಬೇಕಾದ ಗುಣಮೌಲ್ಯವನ್ನು ಕಾಪಾಡಿದೆ. ಚಾರಿತ್ರಿಕ ಸಂಗತಿಗಳನ್ನು ಆಯಾ ಸಂದರ್ಭದ ವಿವಿಧ ನೆಲೆ–ನಿಲುವುಗಳ ಮೂಲಕ ವಿವರಿಸುವ ಮತ್ತು ವಿಶ್ಲೇಷಿಸುವ ರೀತಿಯಿಂದ ಪ್ರಕಾಶ್ ಅವರ ನಿರೂಪಣೆಗೆ ತನ್ನದೇ ಘನತೆ, ಗಾಂಭೀರ್ಯಗಳು ಲಭ್ಯವಾಗಿವೆ... ..ಅಧ್ಯಯನ, ಅಧಿಕೃತತೆ, ಸ್ಪಷ್ಟತೆ, ತಾತ್ವಿಕತೆ ಮತ್ತು ಕ್ರಮಬದ್ಧತೆಗಳನ್ನು ಒಟ್ಟುಗೂಡಿಸಿ ಈ ಕೃತಿಯನ್ನು ಕಟ್ಟಿಕೊಡಲಾಗಿದೆ.

– ಬರಗೂರು ರಾಮಚಂದ್ರಪ್ಪ

ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಕಮ್ಯುನಿಸ್ಟ್‌ರ ಪಾತ್ರದ ಬಗ್ಗೆ ಇರುವ ವಿವಾದಗಳನ್ನು ಚರ್ಚಿಸುತ್ತಾ, ಕಮ್ಯುನಿಸ್ಟ್ ಚಳವಳಿ ಆ ಕಾಲಘಟ್ಟದಲ್ಲಿ ಫ್ಯಾಸಿಸಂ, ನಾಜಿ ಸರ್ಕಾರಗಳ ವಿರುದ್ಧ ನಡೆಯುತ್ತಿದ್ದ ಸೈದ್ಧಾಂತಿಕ ಹಾಗು ರಾಜತಾಂತ್ರಿಕ ದಾಳಿಗಳನ್ನು ವಿವರವಾಗಿ ದಾಖಲಿಸುವ ಯತ್ನವನ್ನು ಮಾಡಿದ್ದಾರೆ. ಹಾಗೆಯೇ ಕಮ್ಯುನಿಸ್ಟರು ಕ್ವಿಟ್ ಇಂಡಿಯಾ ಹೋರಾಟದ ಭಾಗವಾಗಿ ಪ್ರತಿಭಟನೆ ಮಾಡಿರುವ ಬಗ್ಗೆ ವಿವರಗಳನ್ನು ನೋಡಬಹುದಾಗಿದೆ. .. ..ಮೇಲ್ನೋಟಕ್ಕೆ ಡಾ.ಕೆ.ಪ್ರಕಾಶ್ ಅವರ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ ಕೃತಿಯು ಕಮ್ಯುನಿಸ್ಟ್ ಚಳವಳಿಯ ಬಗ್ಗೆ ಕೇಂದ್ರೀಕೃತವಾಗಿರುವುದು ಎಂದೆನಿಸಿದರೂ, ಇದು ವಸಾಹತು ಮತ್ತು ವಸಾಹತೋತ್ತರ ಚರಿತ್ರೆ ಬರವಣಿಗೆಯ ಕಥನವಾಗಿದೆ. ಈ ಕೃತಿಯು 20ನೇ ಶತಮಾನದ ಕರ್ನಾಟಕದ ಚರಿತ್ರೆಯನ್ನು ಅದರಲ್ಲಿಯೂ ಸ್ವಾತಂತ್ರ್ಯ ಚಳವಳಿ, ಕರ್ನಾಟಕ ಏಕೀಕರಣ ಚಳವಳಿಯನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ.

–ಡಾ. ವಿಜಯ್ ಪೂಣಚ್ಚ ತಂಬಂಡ


ಈಗ, ಮೂರು ದಶಕಗಳ ಉದಾರೀಕರಣ ನೀತಿಗಳು ಅರ್ಥವ್ಯವಸ್ಥೆಯ ಮೇಲೆ ಉಂಟುಮಾಡಿದ ಪರಿಣಾಮಗಳ ಬಗ್ಗೆ ಪತ್ರಿಕೆಗಳಲ್ಲಿ ಲೇಖನಗಳು ವ್ಯಾಪಕವಾಗಿ ಪ್ರಕಟವಾಗುತ್ತಿವೆ. ಡಾ.ಮನಮೋಹನ್ ಸಿಂಗ್ ಮುಂತಾದ ಉದಾರೀಕರಣಕಾರರು ಈ ನೀತಿಗಳನ್ನು ಶ್ಲಾಘಿಸುತ್ತಲೇ ಉದಾರೀಕರಣದ ಪ್ರಯೋಜನಗಳ ಹಂಚಿಕೆ ಅಸಮಾನವಾಗಿವೆ ಎಂದೂ ಗೋಳಾಡಿದ್ದಾರೆ. ಸ್ವತಃ ಈ ನೀತಿಗಳ ಶಿಲ್ಪಿ ಎಂದೇ ಕರೆಯಲಾದ ಮನಮೋಹನ ಸಿಂಗ್ "ಪ್ರತಿಯೊಬ್ಬ ಭಾರತೀಯನಿಗೂ ಒಂದು ಘನತೆಯ ಮತ್ತು ಆರೋಗ್ಯಕರ ಜೀವನ ಕಲ್ಪಿಸುವ ಬಗ್ಗೆ ಆದ್ಯತೆ ನೀಡಬೇಕು" ಎಂದು ಹೇಳಿದ್ದಾರೆ.


ಆದರೆ ಸ್ವತಃ ಅವರೇ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾಗ ಅದನ್ನು ಏಕೆ ಕಾರ್ಯಗತಗೊಳಿಸಲಿಲ್ಲವೋ ಎಂದು ಆಶ್ಚರ್ಯವ್ಯಕ್ತಪಡಿಸುತ್ತ ಅರ್ಥಶಾಸ್ತ್ರಜ್ಞ ಪ್ರೊ.ಪ್ರಭಾತ್ ಪಟ್ನಾಯಕ್ "ಹೆಚ್ಚು ಬೆಳವಣಿಗೆಯನ್ನು ಸಾಧಿಸಿದ್ದ ಕಾಲದಲ್ಲೂ ದುಡಿಯುವ ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಿದ್ದ ನವ ಉದಾರವಾದವು ಬಿಕ್ಕಟ್ಟಿಗೆ ಹೊರಳುತ್ತಿರುವ ಸನ್ನಿವೇಶದಲ್ಲಿ ಅವರ ಮೇಲೆ ಹೇರುವ ಒತ್ತಡವನ್ನು ಮತ್ತಷ್ಟು ಹೆಚ್ಚಿಸಿದೆ ಮತ್ತು ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಾಮಾಜಿಕ ಸಮಾನತೆಯಂತಹ ಭಾರತೀಯ ಸಂವಿಧಾನದ ಮೂಲಭೂತ ಆಶಯಗಳಿಗೆ ವಿರುದ್ಧವಾದ ಒಂದು ಏರ್ಪಾಟನ್ನು ಆರಂಭಿಸಿದೆ" ಎನ್ನುತ್ತಾರೆ.

ಪ್ರಸಕ್ತ ಸರಕಾರ ಮೂರು ಕೃಷಿ ಕಾಯ್ದೆಗಳನ್ನು ಮತ್ತು ನಾಲ್ಕು 'ಕಾರ್ಮಿಕ ಸಂಹಿತೆಗಳು' ಎಂಬುದನ್ನು ತಂದಿರುವ ವಿಧಾನ ಮತ್ತು ಅದನ್ನು ಮುಂದೊತ್ತುತ್ತಿರುವ ರೀತಿ ಇದನ್ನು ಸಾಬೀತು ಪಡಿಸುತ್ತಿವೆ.

ಇಂತಹ ಸಂದರ್ಭದಲ್ಲಿ ದೇಶದ ಬಹುಪಾಲು ಜನಗಳು, ಮುಖ್ಯವಾಗಿ ದೇಶದ ಸಂಪತ್ತನ್ನು ಸೃಷ್ಟಿಸುವ ಉತ್ಪಾದಕ ಕ್ರಿಯೆಗಳಲ್ಲಿ, ಸೇವೆಗಳಲ್ಲಿ ತೊಡಗಿರುವ ರೈತರು, ಕಾರ್ಮಿಕರು ಮತ್ತು ನೌಕರರು ಏಕೆ ಈ ಸುಧಾರಣೆಗಳನ್ನು ಪ್ರತಿರೋಧಿಸುತ್ತಿದ್ದಾರೆ ಎಂಬುದಕ್ಕೆ ಮೇಲ್ನೋಟಕ್ಕೆ 'ಸುಧಾರಣೆಗಳು' ಎಂಬಂತೆ ಕಾಣುವ ಈ ಕ್ರಮಗಳು ನಿಜವಾಗಿಯೂ ಅವರ ಬದುಕಿನಲ್ಲಿ ತಂದಿರುವ ಬದಲಾವಣೆಗಳೇನು, ತಂದಿರುವ ಪರಿಣಾಮಗಳೇನು ಎಂಬುದರ ಮೂರ್ತ ಅಧ್ಯಯನಗಳು ಇನ್ನಷ್ಟು ಮಹತ್ವ ಪಡೆಯುತ್ತವೆ. ಈ ಪುಸ್ತಕದಲ್ಲಿ ಇಂತಹ ಎರಡು ಮೂರ್ತ ಅಧ್ಯಯನಗಳ ವರದಿಗಳು ಇವೆ.

ಬೆಲೆ : ರೂ. 70






ಬೆಲೆ: ರೂ. 180

"ಆರ್ಥಿಕ ಶೋಷಣೆಯಿಂದ ರೈತರ ಸಂಪೂರ್ಣ ವಿಮೋಚನೆ ಮತ್ತು ರೈತರಿಗೆ, ಕಾರ್ಮಿಕರಿಗೆ ಮತ್ತು ಇತರ ಶೋಷಿತ ಜನವಿಭಾಗಗಳಿಗೆ

ಪುಟ 15 ನೋಡಿ



ಬೆಲೆ: ರೂ. 75

ರೈತರ ಆಂದೋಲನ ಮತ್ತು ಮೋದಿ ಸರ್ಕಾರದ ನಡುವಿನ ಸಮರವೂ ಸಹ ಒಂದು ಹೊಸ ಯುಗಕ್ಕೆ ನಾಂದಿ ಹಾಡುವ ಪರಂಪರೆಗೆ ಸೇರುತ್ತದೆ. ಹೆಚ್ಚು ಎದ್ದು ಕಾಣುವ ಮಟ್ಟದಲ್ಲಿ, ಚಳುವಳಿ–ನಿರತ ರೈತರು ಪ್ರದರ್ಶಿಸಿದ ಅಪ್ರತಿಮ ದೃಢನಿಶ್ಚಯದ ಎದುರಿನಲ್ಲಿ ಮೋದಿ ಸರ್ಕಾರವು ತಲೆಬಾಗಿತು ಎಂದು ಕಂಡುಬರುತ್ತದೆ.

ಮತ್ತೊಂದು ಮಟ್ಟದಲ್ಲಿ, ಇದನ್ನು ನವ–ಉದಾರವಾದ ನೀತಿಗಳಿಗೆ

ಪುಟ 15 ನೋಡಿ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**